ಕೊಂಡು ಸರ್ಕಾರ ಮತ್ತೆ ಪರಿಶೀಲನೆ ಮಾಡುತ್ತಿದೆಯೆಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಇರತಕ್ಕಂಥದ್ದರಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ನಾನು ಏನೋ ಅನ್ಯಾಯ ಮಾಡಿದ್ದೇನೆಂಬುದನ್ನು ಕೇಳಿ ನನಗೆ ಬಹಳ ದುಃಖವಾಯಿತು. ಆದರೆ ರೆಸಿಸ್ಟ್ ಮಾಡಿ ಎರಡು ಸಾರಿ ಈ ಬೆನಿಫಿಟ್‌ನ್ನು ಎಕ್ಸ್‌ಟೆಂಡ್ ಮಾಡಿದ್ದೇನೆ.

Sri J. P. Vodeyaraj.—Why one time operation. Why not all time operation ...

Sri H. D. Devegowda.—That is a matter to be examined

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಗೌವರ್ನ್‌ಮೆಂಟ್ ಆಫ್ ಇಂಡಿಯಾ ಪವರ್ ಕಾರ್ಪೊರೇಷನ್ನಿನಲ್ಲಿ ಇ.ಇ. ಪೋಸ್ಟ್‌ಗೆ ಡೈರೆಕ್ಟ್ ರೆಕ್ರೂಟ್‌ಮೆಂಟ್ ಇದೆ ಅದೇ ತರಹ ತಾವು ಇಲ್ಲಿ ಏತಕ್ಕೆ ಮಾಡಬಾರದು ?

ಶ್ರೀ ಎಚ್.ಡಿ. ದೇವೇಗೌಡ.—ಆ ಸಿಸ್ಟಂ ಇದ್ದರೆ ಅದನ್ನು ತರಿಸಿ ಪರಿಶೀಲನೆ ಮಾಡುತ್ತೇನೆ. ಅದರ ಬಗ್ಗೆ ನನ್ನ ವೈಯಕ್ತಿಕವಾದ ರಿಜರ್ವೇಷನ್ ಏನೂ ಇಲ್ಲ. ಆ ಸಿಸ್ಟಂ ಬೇರೆ ಇದ್ದರೆ ಅದನ್ನೂ ಕೂಡ ತರಿಸಿ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎಂ. ವೀರಪ್ಪಮೋಯಿಲಿ.—ಸಾಧಾರಣವಾಗಿ 5-6 ವರ್ಷಗಳಿಂದ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ ನೇಮಕವಾಗಿಲ್ಲ. ಹಾಗಿರುವಾಗ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರರಿಂದ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಕನಿಷ್ಟ 3 ವರ್ಷ ಬಡ್ತಿಯ ಅಂತರ ಇಟ್ಟರೆ ಅದು ಸರಿಯಲ್ಲ. ಮತ್ತು ಹೊಸಬರು ಬರುತ್ತಾರೆಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ದೇವೇಗೌಡರು ಇನ್ನೊಂದು ಸ್ಪಷ್ಟೀಕರಣ, ನೀಡಬೇಕು. - ಮಾನ್ಯ ಬೊಮ್ಮಾಯಿಯವರು ಏನು ಭರವಸೆ ಕೊಟ್ಟಿದ್ದರು ಆ ಬಗ್ಗೆ ಹೇಳಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ. - ಬೊಮ್ಮಾಯಿಯವರು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದರೋ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ಅನ್ಯಾಯವಾಗುವುದಿಲ್ಲವೆಂಬ ಭರವಸೆ ಕೊಡಬೇಕು.

ಅಧ್ಯಕ್ಷರು.—ಅವರು ಎಲ್ಲವನ್ನು ಹೇಳಿದ್ದಾರೆ.

ವಿತ್ತೀಯ ಕಾರ್ಯಕಲಾಪಗಳು

1983-84ನೇ ಸಾಲಿಗೆ ಸಂಬಂಧ ಪಟ್ಟ ಬೇಡಿಕೆಗಳ ಮೇಲೆ ಚರ್ಚೆ ಮುಂದುವರೆದದು.

ಶ್ರೀ ಜಿ. ಪಿ. ಒಡೆಯರಾಜ್.—ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ 26871 ಹಳ್ಳಿಗಳಿವೆ; ಅವುಗಳ ಪೈಕಿ ಇನ್ನೂ 2047 ಹಳ್ಳಿಗಳಿಗೆ ಅಪ್ರೋಚ್ ರೋಡ್‌ಗಳು ಆಗಿಲ್ಲ, ಅಂದರೆ ಪರಿಸ್ಥಿತಿ ಎಷ್ಟು ಕಠಿಣವಾಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಹೆಚ್. ಡಿ. ದೇವೇಗೌಡ,—ಶೇಕಡ 27 ರಷ್ಟು ಹಳ್ಳಿಗಳಿಗೆ ಪಕ್ಕಾ ರಸ್ತೆಗಳನ್ನು ಮತ್ತು ಶೇಕಡ 43 ರಷ್ಟು ಹಳ್ಳಿಗಳಿಗೆ ಕಚ್ಚಾ ರಸ್ತೆಗಳನ್ನು ಕೊಡುವುದಕ್ಕೆ ಸಾಧ್ಯವಾಗಿದೆ. ಶೇಕಡ 30 ರಷ್ಟು ಹಳ್ಳಿಗಳಿಗೆ ಇನ್ನೂ ರಸ್ತೆಗಳನ್ನು ಕೊಟ್ಟಿಲ್ಲವೆಂಬ ವಿಚಾರ ನಮ್ಮ ಮುಂದೆ ಇದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ನಾನು ಕ್ರಿಯಾಲೋಪ ಎತ್ತುತ್ತೇನೆ. ನಿನ್ನೆ ದಿವಸ ಉಪನಾಯಕರಾದ ಒಡೆಯರಾಜ್‌ರವರು ಮಾತನಾಡುತ್ತಾ, ಒಂದು ಆರೋಪ ಮಾಡಿದರು. ಅದೇನೆಂದರೆ ಲೋಕೋಪಯೋಗಿ ಮಂತ್ರಿಗಳು ವರ್ಗಾವರ್ಗಿ ಮಾಡಬೇಕಾದರೆ ಜನತಾ ಶಾಸಕರಿಗೆ ಹಣ ಮಾಡಿಕೊಟ್ಟಿದ್ದಾರೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಅವರ ಆಪಾದನೆ ನೇರವಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ಇದರ ಬಗ್ಗೆ ತಾವು ಕೇಳುವುದಕ್ಕಿಂತ ಮುಂಚೆ ಅಂದರೆ ನಿನ್ನೆಯೇ ನಾನು ವಿಷಯವನ್ನು ಪ್ರಸ್ತಾಪ ಮಾಡಿ ವಿವರಣೆ ಕೇಳಿದೆ ಮತ್ತು ಅವರು ನಿನ್ನೆಯೇ ವಿವರಣೆ ಕೂಡ ಕೊಟ್ಟಿದ್ದಾರೆ. ನಾನು ಸರ್ಕಾರದ ಪರವಾಗಿ ಉತ್ತರ ಹೇಳುವವನಿದ್ದೇನೆ. ಆದ್ದರಿಂದ, ಆ ವಿಷಯದ ಬಗ್ಗೆ ಮತ್ತೆ ಚರ್ಚೆ ಬೇಡ. ಈಗ ಉಪನಾಯಕರು ಮಾತನಾಡಲಿ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ನಾವು ಆ ಮಟ್ಟದಲ್ಲಿ ಇಲ್ಲವೆಂದು ಎದೆ ಮುಟ್ಟಿ ಹೇಳುತ್ತೇವೆ. ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು.—ಅದರ ಬಗ್ಗೆ ಏನು ಹೇಳುತ್ತಾರೆ; ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ರಂಗನಾಥ್.—ನಿನ್ನೆ ಹೇಳದೆ ಇರುವುದನ್ನು ಹೇಳಿ ದಾಖಲೆಯಲ್ಲಿ ಹೋಗತಕ್ಕ ರೀತಿಯಲ್ಲಿ ಮಾಡುತ್ತಿದ್ದಾರೆ, ಮಂತ್ರಿಗಳು ಏನೋ ತೆಗೆದುಕೊಂಡಿದ್ದಾರೆಂದು ಒಡೆಯರಾಜ್‌ರವರು ಹೇಳಿದರೆಂದು ಆಪಾದನೆ ಮಾಡುವುದು ಇವತ್ತಿನ ವರದಿಯಲ್ಲಿ ಹೋದರೆ ತಪ್ಪಾಗುತ್ತದೆ. ನಿನ್ನೆ ಅಧ್ಯಕ್ಷರು ಅದನ್ನು ತರಿಸಿ ನೋಡುತ್ತೇನೆಂದು ಹೇಳಿದ್ದಾರೆ ; ನಾನು ಕೇಳಿದ ಪ್ರಕಾರ ಒಡೆಯರಾಜ್‌ರವರು ಏನು ಹೇಳಿದರೆಂದರೆ, ಕೆಲವರನ್ನು ವರ್ಗ ಮಾಡಿದ್ದಾರೆ ಎಂದು.

ಉಪಾಧ್ಯಕ್ಷರು.—ಈ ಬಗ್ಗೆ ಮತ್ತೆ ಚರ್ಚೆ ಮಾಡುವುದು ಬೇಡ.

ಶ್ರೀ ಕೆ. ಹೆಚ್. ರಂಗನಾಥ್.—ಹಾಗಾದರೆ ಈಗ ಮಾತನಾಡಿದ್ದು ದಾಖಲೆಗೆ ಹೋಗಬಾರದು.

ಉಪಾಧ್ಯಕ್ಷರು.—ಅದನ್ನು ಕೂಡ ಎಕ್ಸ್‌ಪಂಜ್ ಮಾಡಲಾಗುವುದು. ಕಡತವನ್ನು ತರಿಸಿ ನೋಡಿದಾಗ, ಈಗ ಲಕ್ಷ್ಮಯ್ಯನವರು ಏನು ಆಪಾದನೆ ಮಾಡಿದರು ಅದು ಕಡತಕ್ಕೆ ಹೋಗಿಲ್ಲವೆಂಬುದು ಸ್ಪಷ್ಟವಾಯಿತು. ಆದ್ದರಿಂದ, ನಾವು ಚರ್ಚೆಯನ್ನು ಮುಂದುವರಿಸೋಣ.

ಶ್ರೀ ಪಿ. ರಾಮದೇವ್.—ಕಡತದಲ್ಲಿ ಹೋಗಿಲ್ಲವೆಂದಿರಿ. ಆದರೆ ಪತ್ರಿಕೆಗಳಲ್ಲಿ ಬಂದಿದೆಯಲ್ಲ ; ಅದು ಹೇಗೆ ಬಂತು ? ನಾನು ಈ ಕ್ರಮಲೋಪವನ್ನು ಸಭೆಯ ಮುಂದಿಡಬಯಸುತ್ತೇನೆ. ಮಾನ್ಯ ಒಡೆಯರಾಜ್‌ರವರು ಮಾಡಿದ ಆಪಾದನೆ ಕಡತದಲ್ಲಿ ಇಲ್ಲವೆಂದು ತಾವು ರೂಲಿಂಗೆ ಕೊಟ್ಟಿರಿ. ಈ ಮನೆಯಲ್ಲಿ ಏನು ನಡೆಯುತ್ತದೆಂಬ ನಿಜ ಸ್ಥಿತಿಯನ್ನು ಜನತೆಗೆ ಕೊಡತಕ್ಕದ್ದು ಪತ್ರಿಕೆಯವರ ಕರ್ತವ್ಯ. ಕಡತದಲ್ಲಿ ಇಲ್ಲದೆ ಇರುವ ವಿಚಾರವನ್ನು ಅವರು ಹೇಗೆ ಪ್ರಚಾರ ಮಾಡಿದರು ? ಅದು ಹೆಡ್‌ಲೈನ್‌ನಲ್ಲಿ ಹೇಗೆ ಬಂತು ?

ಉಪಾಧ್ಯಕ್ಷರು.—ಅದನ್ನು ಪತ್ರಿಕೆಯವರು ಸರಿ ಮಾಡಿಕೊಳ್ಳುತ್ತಾರೆ.

ಶ್ರೀ ಪಿ. ರಾಮದೇವ್.—ಇಲ್ಲಿ ನಾವು ಏನು ಮಾತನಾಡಿದರೂ ಕಡತದಲ್ಲಿ ಬರಬೇಕು. ಆದರೆ ಅದು ಏಕೆ ಬಂದಿಲ್ಲ. ಅದನ್ನೇನಾದರೂ ನಿನ್ನೆ ಎಕ್ಸ್‌ಪಂಜ್ ಮಾಡಿದ್ದೀರಾ ? ನಿನ್ನೆ ತೆಗೆದು ಹಾಕಿದ್ದರೆ ದಯಮಾಡಿ ಹೇಳಿ. ಇಲ್ಲದಿದ್ದರೆ, ಪತ್ರಿಕೆಯವರು ತಪ್ಪು ಮಾಡುತ್ತಿದ್ದಾರೆ, ಬ್ಯಾಡ್ ರಿಪೋರ್ಟಿಂಗ್ ಮಾಡುತ್ತಿದ್ದಾರೆಂದು ಅವರ ಮೇಲೆ ಆರೋಪ ಬರುತ್ತದೆ. ಇಲ್ಲಿ ಸತ್ಯ ಏನು ನಡೆಯುತ್ತದೆ ಅದನ್ನು ಸರಿಯಾಗಿ ರಿಪೋರ್ಟ್ ಮಾಡುತ್ತಿಲ್ಲವೆಂದು ಪ್ರಿವಿಲೇಜ್ ಮೋಷನ್ ಅನ್ನು ಮೂವ್ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು.—ಅದನ್ನು ಸರಿಪಡಿಸಿಕೊಳ್ಳಬೇಕೆಂದು ನಾನು ಪತ್ರಿಕೆಯವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಆದ್ದರಿಂದ, ಇದನ್ನು ಮತ್ತೆ ಮುಂದುವರಿಸುವುದು ಬೇಡ ; ನಾವು ಈಗ ಮುಂದಿನ ಚರ್ಚೆಗೆ ಹೋಗೋಣ.

ಶ್ರೀ ಎಂ. ರಘುಪತಿ.—ಕಡತದಲ್ಲಿ ಬಂದಿಲ್ಲವೆಂದು ಹೇಳಿದಿರಿ. ಅದನ್ನು ಇನ್ನೊಂದು ಸಾರಿ ತರಿಸಿ ನೋಡಿ. ಪತ್ರಿಕೆಯವರು ತಪ್ಪು ಮಾಡಿದ್ದರೆ ಅವರನ್ನು ನಾವು ಕೇಳಬೇಕಾಗುತ್ತದೆ. ಅವರು ಹಾಗೆ ವರದಿ ಮಾಡುವುದಕ್ಕೆ ಸಾಧ್ಯವಿಲ್ಲ. ಪತ್ರಿಕೆಯವರು ಈ ಸದನದಲ್ಲಿ ಆಡಿದ ಮಾತುಗಳನ್ನು ಪ್ರಕಟಣೆ ಮಾಡುತ್ತಾರೆಯೇ ಹೊರತು ಬೇರೆ ಪ್ರಕಟ ಮಾಡುವುದಿಲ್ಲ. ಅದಕ್ಕೆಲ್ಲಾ ನಿಯಮಾವಳಿಗಳಿವೆ. ಅವರು ಜನತಾ ಪಕ್ಷದ ಶಾಸಕರು ಎಂದು ಹೇಳಿದ್ದಾರೆ. ನಾನು ಒಡೆಯರಾಜ್ ಅವರಿಗೆ ನೇರವಾಗಿ ಕೇಳುತ್ತೇನೆ, ಜನತಾ ಶಾಸಕರು ಯಾರು ಎಂಬ ಪಟ್ಟಿಯನ್ನು ಕೊಡಲಿ. ಇಲ್ಲದಿದ್ದರೆ ಬೇಷರತ್ತಾಗಿ ಕ್ಷಮಾಪಣೆ ಕೇಳಬೇಕಾಗುತ್ತದೆ.

2-30 p.m.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನೇನು ತಪ್ಪು ಮಾಡಿದ್ದೇನೆ, ನಿಮ್ಮ ಕ್ಷಮಾಪಣೆ ಕೇಳುವುದಕ್ಕೆ ?

ಶ್ರೀ ಎಂ. ರಘುಪತಿ.—ಧೈರ್ಯ ಇದ್ದರೆ ಯಾವ ಯಾವ ಶಾಸಕರು ಎಂಬ ಪಟ್ಟಿ ಕೊಡಿ.

Sri G. P. Wadeyaraj.—This is the order. I will place it. He is a responsible Minister. He should know what he is talking.

Sri M. Raghupathy.—I am addressing the Chair.

Mr. Deputy Speaker.—I am on my legs.

Sri G. P. Wadeyaraj.—What business has he got to say like that.

Sri M. Raghupathy.—Mr. Whdeyaraj has to apoligise to this House.

(ಗೊಂದಲ)

ಶ್ರೀ ಎಂ. ರಘುಪತಿ.—ಜನತಾ ಪಕ್ಷದವರು ಯಾರು ಯಾರು ತಪ್ಪು ಮಾಡಿದ್ದಾರೆ ಎಂಬ ಪಟ್ಟಿ ಕೊಡಬೇಕು.

ಶ್ರೀ ಎಂ. ಮಹದೇವ್.—ಮಾನ್ಯ ಒಡೆಯರಾಜ್ ಅವರು 50 ಸಾವಿರ ತೆಗೆದುಕೊಂಡಿದ್ದಾರೆ ಎಂದು ಏನು ಹೇಳಿದ್ದಾರೆ ಅದನ್ನು ಪ್ರೂವ್ ಮಾಡಲಿ. ಆಮೇಲೆ ನಾವು ಪ್ರೂವ್ ಮಾಡುತ್ತೇವೆ.

ಉಪಾಧ್ಯಕ್ಷರು.—ಈ ರೀತಿ ಆದರೆ ಸದನ ನಡೆಸುವುದು ಕಷ್ಟವಾಗುತ್ತದೆ. ನಾನು ಆಗಲೇ ಹೇಳಿದೆ. ಪತ್ರಿಕೆಯವರನ್ನು ಕರೆಸಿ ಇದೇನು ಸಮಾಚಾರ ಎಂದು ತಿಳಿದುಕೊಳ್ಳುತ್ತೇನೆ ; ಕಡತದಲ್ಲಿದ್ದರೆ ಅದನ್ನು ತರಿಸಿ ಪರಿಶೀಲನೆ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತೇನೆ. ಪುನಃ ಆ ವಿಷಯವನ್ನು ಪ್ರಸ್ತಾಪಕ್ಕೆ ತರದೆ ಮುಂದಿನ ಪ್ರಸ್ತಾಪಕ್ಕೆ ಹೋಗೋಣ.

ಶ್ರೀ ಪಿ. ರಾಮದೇವ್.—ಸ್ವಾಮಿ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ನಿನ್ನೆ ದಿವಸ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದ ಅಧ್ಯಕ್ಷರು ಕಡತವನ್ನು ತರಿಸಿ ನೋಡುತ್ತೇನೆ ಎಂದು ಹೇಳಿದರು. ಸಾಧಾರಣವಾಗಿ ಯಾರೇ ಸದಸ್ಯರು ಮಾತನಾಡಿದಾಗ ಏನಾದರೂ ಆಕ್ಷೇಪಣೆ ಬಂದರೆ ಕೂಡಲೇ ಕಡತ ತರಿಸಿ ಓದಬೇಕು. ಸದಸ್ಯರಿಗೆ ಸ್ಪಷ್ಟೀಕರಣ ನೀಡುವುದಕ್ಕೆ ಅವಕಾಶ ಕೊಡಬೇಕು. ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡಬೇಕು....

ಶ್ರೀ ಗೋವಿಂದ ಪಿ. ಒಡೆಯರಾಜ್.—ಏತಕ್ಕೆ....

ಶ್ರೀ ಪಿ. ರಾಮದೇವ್.—ನನ್ನ ಕ್ರಿಯಾಲೋಪ ಏನೆಂದರೆ, ಒಡೆಯರಾಜ್ ಅವರು ಹೇಳಿರತಕ್ಕ ಸ್ಟೇಟ್‌ಮೆಂಟನ್ನು ಒಪ್ಪಿಕೊಂಡಿದ್ದಾರೆ. ಒಪ್ಪಿಕೊಂಡಮೇಲೆ ಪ್ರೂವ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬೇಷರತ್ತಾಗಿ ಕ್ಷಮಾಪಣೆ ಕೇಳಬೇಕಾಗುತ್ತದೆ. ನಾವು ಸುಮ್ಮನೆ ಆಪಾದನೆಗಳ ಸುರಿಮಳೆಗಳನ್ನು ಕೇಳುವುದಕ್ಕೆ ಸಿದ್ಧವಿಲ್ಲ. ಅವರು ಪ್ರೂವ್ ಮಾಡದೇ ಹೋದರೆ ಕ್ಷಮಾಪಣೆ ಕೇಳಬೇಕು. ಹಿಂದಿನಿಂದ ಇದು ನಡೆದುಬಂದಿರತಕ್ಕ ಪದ್ಧತಿ. ಅವರು ಹೇಳಿದ ಮಾತು ಕಡತದಲ್ಲಿ ಇಲ್ಲ ಎಂದರೆ ಸರಿ—ಹೋಗುವುದಿಲ್ಲ. ಹಾಗೆ ಹೇಳಿದರೆ ತಮ್ಮ ಸೆಕ್ರೆಟೇರಿಯಟ್‌ನ ಬಗ್ಗೆ ಅಪನಂಬಿಕೆ ಪಡಬೇಕಾಗುತ್ತದೆ. ಟ್ರೂ ಪ್ರೊಸೀಡಿಂಗ್ಸ್ ರೆಕಾರ್ಡ್ ಮಾಡುತ್ತಿಲ್ಲ ಎಂದು ಚಾರ್ಜ್ ಮಾಡಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರು ದಯವಿಟ್ಟು ಟ್ರೂ ಪ್ರೊಸೀಡಿಂಗ್ಸ್ ಏನಿದೆ ಅದನ್ನು ತರಿಸಿ ಅವರು ಹೇಳಿರುವುದನ್ನು ಪ್ರೂವ್ ಮಾಡುವುದಕ್ಕೆ ಅವಕಾಶ ಕೊಡಬೇಕು. ನಾವು ಬರೀ ಆಪಾದನೆಗಳನ್ನು ಹೊತ್ತುಕೊಂಡು ಹೋಗುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ಅವರು ಹೇಳಿದ್ದನ್ನು ಪತ್ರಿಕೆಯವರು ಬರೆದಿದ್ದಾರೆ. ಆ ಬಗ್ಗೆ ಒಡೆಯರಾಜ್ ಅವರು ಏನಾದರೂ ಹೇಳುವುದಿದ್ದರೆ ಹೇಳಬೇಕು.

ಶ್ರೀ ಬಿ. ಶಿವಣ್ಣ.—ಮಾನ್ಯ ಉಪಾಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟಮೇಲೆ ಮತ್ತೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಅವರು ಹೇಳಿರತಕ್ಕ ಆಪಾದನೆಯನ್ನು ಸಾಬೀತು ಮಾಡಲಿ. ಕೊಟ್ಟವರು ಯಾರು ? ತೆಗೆದುಕೊಂಡವರು ಯಾರು ಎಂಬುದನ್ನು ಹೇಳಬೇಕು.

ಶ್ರೀ ಎಂ. ಮಹದೇವ್.—35 ವರ್ಷದಿಂದ ನೀವು ಭ್ರಷ್ಟಾಚಾರ ಮಾಡಿದ್ದೀರಿ ಎಂದು ಅವರು ಹೇಳಿದ್ದನ್ನು ಸಾಬೀತು ಮಾಡಲಿ.

ಉಪಾಧ್ಯಕ್ಷರು.—ಆ ಪ್ರಶ್ನೆ ಇಲ್ಲಿಲ್ಲ.

ಶ್ರೀ ಎಂ. ಮಹದೇವ್.—ಒಡೆಯರಾಜ್ ಅವರು ಪ್ರೂವ್ ಮಾಡುತ್ತಾರೆ ; ಆದರೆ....

(ಗೊಂದಲ)

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಎಲ್ಲ ಜನತಾ ಶಾಸಕರು ಎಂದು ನೇರವಾಗಿ ಆಪಾದನೆ ಮಾಡುತ್ತಿದ್ದಾರೆ. ನಮ್ಮಲ್ಲಿ ಪ್ರಾಮಾಣಿಕತೆ ಇದೆ ಎಂದು ಸದನದಲ್ಲಿ ಎದೆ ಮುಟ್ಟಿ ಹೇಳುತ್ತೇವೆ. ನಾವು ಭ್ರಷ್ಟಾಚಾರಕ್ಕೆ ಇಳಿದಿಲ್ಲ. ಅಂಥ ದುರ್ಬುದ್ಧಿ ದೇವರು ಕೊಟ್ಟಿಲ್ಲ. ಆ ಕೆಟ್ಟ ದಾರಿಗೆ ನಾವು ಇಳಿಯುವುದಿಲ್ಲ.

ಶ್ರೀ ಬಿ, ಎಸ್. ಯಡಿಯೂರಪ್ಪ.—ಭ್ರಷ್ಟಾಚಾರಕ್ಕೆ ಇಳಿದಿಲ್ಲ ಎಂದು ಹೇಳುತ್ತಿದ್ದಾರೆ. ಮುಂದೆ ಏನಾದರೂ ಇಳಿಯುತ್ತಾರಾ ?

(ಗೊಂದಲ)

ಉಪಾಧ್ಯಕ್ಷರು.—ಈ ರೀತಿ ಎಲ್ಲರೂ ಎದ್ದುನಿಂತು ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಸಭೆಯಲ್ಲಿ ಏನು ನಡೆಯಿತೋ ಅದರಿಂದ ಶಾಸಕರ ಆತ್ಮಗೌರವಕ್ಕೆ ಧಕ್ಕೆಯುಂಟಾಗಿದೆ. ಶಾಸಕರು ಸಾರ್ವಜನಿಕ ಜೀವನದಲ್ಲಿ ನಡೆಯುವ ದಾರಿಗೆ ಆ ವಿಷಯ ಸಂಬಂಧಪಟ್ಟಿದ್ದಾಗಿದೆ. ನಾನು ತಮ್ಮ ಮುಖಾಂತರ ಶ್ರೀ ಒಡೆಯರಾಜ್ ಅವರ ಗಮನಕ್ಕೆ ಒಂದು ಮಾತನ್ನು ತರಬಯಸುತ್ತೇನೆ. ಬಹಳ ಜನ ಈ ಕಡೆ ಕುಳಿತಿರತಕ್ಕ ಶಾಸಕರು ಅಧಿಕಾರ

ಸಿಗದೇ ಇದ್ದಾಗ ಪಕ್ಷ ಬಿಟ್ಟವರಲ್ಲ. ಹಣ ಸಿಗದೇ ಇದ್ದಾಗ ರಾಜಕೀಯ ಬಿಟ್ಟವರಲ್ಲ. ಒಂದು ಮಾತನ್ನು ನನ್ನ ಸ್ನೇಹಿತರ ಗಮನಕ್ಕೆ ತರಲಿಚ್ಛೆ ಪಡುತ್ತೇನೆ. ಹೊಟ್ಟೆ ಪಾಡಿಗಾಗಿ ನಾವು ಶಾಸಕರಾಗಿ ಬಂದವರಲ್ಲ. ನಮಗೆ ಬರುತ್ತಾ ಇದ್ದ ಆದಾಯವನ್ನೂ ತ್ಯಾಗ ಮಾಡಿ ಸಾರ್ವಜನಿಕ ಜೀವನಕ್ಕೆ ಬಂದಿದ್ದೇವೆ.

ಶ್ರೀ ಎಂ. ಮಹದೇವ್.—ಬೇರೆಯವರು ಯಾರು ಹೊಟ್ಟೆಪಾಡಿಗೆ ಬಂದಿದ್ದಾರೆ ತೋರಿಸಿ. ತಾವಂತೂ ಹೊಟ್ಟೆಪಾಡಿಗೆ ಬಂದಿಲ್ಲ.

ಉಪಾಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಹದೇವ್.—ಸದನದ ಎಲ್ಲ ಶಾಸಕರೂ....

Mr. Deputy Speaker.—No direct conversation please.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—5-1-1983ರಂದು ಜನ ತೀರ್ಮಾನ ಮಾಡಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ.—ನಾವು ನಮ್ಮ ಕ್ಷೇತ್ರದಲ್ಲಿ ಮತ ಕೊಡುವ ಮತದಾರರಿಗೆ ಮಾತ್ರವಲ್ಲ ಮನೆಯಲ್ಲಿ ಕೂಡ ಉತ್ತರ ಹೇಳಬೇಕಾಗುತ್ತದೆ. ಹೆಂಗಸರು ಮಕ್ಕಳಿಗೆ ಒಂದೊಂದು ರೂಪಾಯಿ ಕೊಡುವಾಗಲೂ ಈಗ ಆದಾಯ ಕಡಿಮೆಯಾಗಿದೆ. ನಾನು ಈಗ ವಕೀಲನಲ್ಲ, ಶಾಸಕನಾಗಿ ನಮಗೆ ಬರತಕ್ಕ 1200 ರೂಪಾಯಿಗಳಲ್ಲಿ ಜೀವನ ಮಾಡಬೇಕಾಗಿದೆ. ಆದ್ದರಿಂದ ಸಂಯಮದಿಂದ ನಡೆದುಕೊಳ್ಳಬೇಕು ಎಂದು ಹೇಳುತ್ತೇವೆ. ಈ ತರಹ ಹಣ ತೆಗೆದುಕೊಳ್ಳುತ್ತಾರೆ ಎಂದು ಅಪಾದನೆ ಬಂದರೆ ನೀವು ಇಂಜಿನಿಯರ್‌ಗಳನ್ನು ಟ್ರಾನ್ಸ್‌ಫರ್‌ಮಾಡಿ ಹಣ ತೆಗೆದುಕೊಳ್ಳುತ್ತೀರಂತೆ ಮನೆಯಲ್ಲಿ ಒಂದು ರೂಪಾಯಿ ಕೇಳಿದರೆ ಇಲ್ಲ ಎನ್ನುತ್ತೀರಲ್ಲ ಎಂದು ಮನೆಯವರು ಹೇಳುತ್ತಾರೆ. ಇದರಿಂದ ಶಾಸಕರ ಆತ್ಮಗೌರವಕ್ಕೆ, ನಡವಳಿಕೆಗೆ ಚ್ಯುತಿ ಉಂಟಾಗುತ್ತದೆ. ಸಾರ್ವತ್ರಿಕವಾಗಿ ಎಲ್ಲರೂ ಭ್ರಷ್ಟರು, ಎಲ್ಲರೂ ಲಫಂಗರು, ಎಲ್ಲರೂ ಪಕ್ಷ ಬಿಟ್ಟವರು ಎಂದು ಮನಸ್ಸಿನಲ್ಲಿಟ್ಟುಕೊಳ್ಳದೆ ನಮ್ಮ ಪಕ್ಷದ ಆಗುಹೋಗುಗಳನ್ನು, ನಮ್ಮ ಸರ್ಕಾರದ ಒಳ್ಳೆಯ ಮತ್ತು ಕೆಟ್ಟ ಕೆಲಸಗಳ ಬಗ್ಗೆ ಟೀಕಿಸಿದರೆ ಉದ್ರೇಕಗೊಳ್ಳುವ ಅವಶ್ಯಕತೆ ಬರುವುದಿಲ್ಲ. ಕೆಲಸ ಮಾಡುವಾಗ ಒಳ್ಳೆಯದು, ಕೆಟ್ಟದ್ದು ಎರಡೂ ಇರುತ್ತದೆ. ಆದರೆ ಒಬ್ಬ ಶಾಸಕನ ಸಾರ್ವಜನಿಕ ಜೀವನದ ನಡವಳಿಕೆಯನ್ನು ಪ್ರಶ್ನಿಸಿ ಹೇಳುವುದನ್ನು ನೋಡಿದಾಗ ನೋವಾಗುತ್ತದೆ. ದೇವೇಗೌಡರು ಜನತಾ ಪಕ್ಷದ ಶಾಸಕರು ದುಡ್ಡು ಮಾಡಿಕೊಳ್ಳುವುದಕ್ಕಾಗಿ ವರ್ಗಾವರ್ಗಿ ಮಾಡಿದ್ದಾರೆ ಎಂದು ಹೇಳಿದ್ದನ್ನು ನಾವಂತೂ ಕೇಳಿದ್ದೇವೆ. ಅದು ಪತ್ರಿಕೆಯಲ್ಲೂ ಬಂದಿದೆ. ಆದರೆ ಕಡತದಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ಕಡತದಲ್ಲಿ ಇಲ್ಲ ಎಂದರೆ ಪತ್ರಿಕೆಯಲ್ಲಿ ಬಂದಿರುವುದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ನಿನ್ನೆ ಅಧ್ಯಕ್ಷರು ಕಡತವನ್ನು ನೋಡಿ ರೂಲಿಂಗ್ ಕೊಡುತ್ತೇನೆ ಎಂಬ ಭರವಸೆಯನ್ನು ಕೊಟ್ಟಿದ್ದರು. ಒಂದು ವೇಳೆ ಆ ಮಾತು ಕಡತದಲ್ಲಿಲ್ಲ ಎಂದರೆ ರೂಲಿಂಗ್ ಕೊಡುವ ಪ್ರಶ್ನೆಯೇ ಬರುವುದಿಲ್ಲ. ಮುಂದಾದರೂ ಇಂಥ ಘಟನೆ ನಡೆಯದ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಿನ್ನೆ ನಡೆದಂಥ ಘಟನೆ ಎಲ್ಲರ ಮುಂದೆ ನಡೆದಂಥದ್ದು. ಆ ಮಾತು ಕಡತಕ್ಕೆ ಏತಕ್ಕೆ ಹೋಗಲಿಲ್ಲ ? ಪತ್ರಿಕೆಯವರು ಹೇಗೆ ವರದಿ ಮಾಡಿದರು ? ಕಡತದಲ್ಲಿ ಇಲ್ಲದೇ ಇರುವುದನ್ನು ಪತ್ರಿಕೆಯವರು ಪ್ರಕಟಿಸಿದರೆ ತಮ್ಮ ವ್ಯಾಪ್ತಿಯಲ್ಲಿರುವ ಅಧಿಕಾರವನ್ನು ಚಲಾಯಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಧನಂಜಯಕುಮಾರ್.—ಒಂದೇ ಒಂದು ಮಾತನ್ನು ಹೇಳುತ್ತೇನೆ.

ಉಪಾಧ್ಯಕ್ಷರು.—ಈ ವಿಷಯ ಸಾಕು ಕುಳಿತುಕೊಳ್ಳಿ ; ನಾನು ಹೇಳುತ್ತೇನೆ. ಕಡತದಲ್ಲಿ ಇರುವ ಪ್ರಕಾರ ಪರ್ಟಿಕ್ಯುಲರ್ರಾಗಿ ಇಂತಹವರ ಹೆಸರನ್ನು ಹಿಡಿದು ಅವರು ಭ್ರಷ್ಟಾಚಾರ ಮಾಡುತ್ತಿದ್ದಾರೆ, ಹಣ ತೆಗೆದುಕೊಂಡಿದ್ದಾರೆ ಎಂದು ಹೇಳಿಲ್ಲ. ಅದರಲ್ಲಿ ಈ ರೀತಿ ಹೇಳುತ್ತಾರೆ.

"ಜನತಾ ಪಕ್ಷದ ಶಾಸಕರಿಗೆ ಪಿ.ಡಬ್ಲ್ಯು.ಡಿ.ಯನ್ನು ದತ್ತುಕೊಟ್ಟಿದ್ದೀರಾ? ಪ್ರತಿಯೊಬ್ಬ ಜನತಾ ಪಕ್ಷದ ಶಾಸಕನಿಗೂ ಬೇಕಾದಂತಹ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನೀಯರ್ ಬೇಕು, ಎಕ್ಸಿಕ್ಯೂಟಿವ್ ಎಂಜನಿಯರ್ ಬೇಕು, ಇದಕ್ಕೆ ಕಾರಣ ಏನು ? ಟ್ರಾನ್ಸ್‌ಫರ್ ವಿಷಯದಲ್ಲಿ ಬಂಗ್ಲಿಂಗ್ ಆಗಿದೆ, ಅವ್ಯವಹಾರ ಆಗಿದೆ. ಹೀಗೆ ಮನಸ್ಸಿಗೆ ಬಂದ ಹಾಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಎಂಜಿನೀಯರ್ ಯಾವುದೇ ಕಾರಣದಿಂದ ಟ್ರಾನ್ಸ್‌ಫರ್ ಕೇಳಲಿಕ್ಕೆ ಹೋದರೆ ನೀವು ನಿಮ್ಮ ಶಾಸಕರ ಒಂದು ಚೀಟಿಯನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ, ಇವತ್ತು ಈ ಬೆನಿಫಿಟ್‌ಅನ್ನು ಅವರು ಬಿ.ಜೆ.ಪಿ. ಶಾಸಕರಿಗೆ ಕೊಟ್ಟಿಲ್ಲ. ಕಮ್ಯುನಿಸ್ಟ್ ಪಕ್ಷದ ಶಾಸಕರಿಗೆ ಕೊಟ್ಟಿಲ್ಲ. ಇದರ ಉದ್ದೇಶ ಏನು ? ಇದರ ಅರ್ಥವನ್ನು ಅವರು ಹೇಳಬೇಕು. ಇದರಲ್ಲಿ ಬಹಳಷ್ಟು ಅಧ್ವಾನ ಆಗಿದೆ. ಇಡೀ ಡಿಪಾರ್ಟ್‌ಮೆಂಟ್‌ನಲ್ಲಿ ಸ್ಟಾಂಡರ್ಡ್ ಆಫ್ ಮೊರೇಲ್ ಹೋಗಿಬಿಟ್ಟಿದೆ. ಪ್ರತಿಯೊಂದಕ್ಕೂ ಶಾಸಕರೇ ಬೇಕು ಎಂದರೆ ಅಧಿಕಾರಿಗಳು ಹೇಗೆ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಎಂ. ರಘುಪತಿ.—ಜನತಾ ಪಕ್ಷದ ಶಾಸಕರು ಎಂದು ಹೇಳಿದ್ದಾರೆ. ಸ್ಪೆಸಿಫಿಕ್ಕಾಗಿ ಯಾರು ಎಂದು ಹೇಳಬೇಕು.

(ಗೊಂದಲ)

ಉಪಾಧ್ಯಕ್ಷರು.—ನಾನು ಕಡತವನ್ನು ಓದುತ್ತಿದ್ದೇನೆ. ಪೂರ್ತಿ ಕೇಳಿ.

"ಯಾವ ಅಧಿಕಾರಿ ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಪ್ರತಿಯೊಂದು ಮಾತುಗಳಿಗೂ ಶಾಸಕರ ಹತ್ತಿರ ಹೋಗಬೇಕೆಂದು ಹೇಳಿದರೆ ಯಾವ ಅಧಿಕಾರಿ ಕೆಲಸ ಮಾಡುವುದ ಕ್ಕಾಗುತ್ತದೆ ? ಇದರಿಂದ ಇಲಾಖೆಯ ಮೊರೇಲ್ ಸ್ಟಾಂಡರ್ಡ್ ಬಹಳ ಕೆಳಮಟ್ಟದಲ್ಲಿದೆ ಎಂಬು ದಾಗಿ ಹೇಳದೇ ವಿಧಿಯಿಲ್ಲ. ಜನತಾ ಶಾಸಕರು ಹೇಳಿದ ರೀತಿಯಲ್ಲಿ ಅಧಿಕಾರಿಗಳು ಇರಬೇಕು. ಇಲ್ಲದಿದ್ದರೆ ಎಲ್ಲಿ ನಮ್ಮ ಮೇಲೆ ದೂರು ಕೊಡುತ್ತಾರೋ, ಏನು ಮಾಡಬೇಕು ಎಂಬ ಭಯದಿಂದ ಇದ್ದಾರೆ. ಆದ್ದರಿಂದ ಈ ಮಟ್ಟಕ್ಕೆ ಲೋಕೋಪಯೋಗಿ ಇಲಾಖೆ ಹೋಗಿದೆ. ಇದಕ್ಕೆ ಕಾರಣ ವಾದರೂ ಏನು ಎಂದರೆ, ಮಂತ್ರಿಗಳಿಗೆ ಇದನ್ನು ಮಾಡುವುದಕ್ಕೆ ಮನಸ್ಸು ಇಲ್ಲದಿದ್ದರೂ ಒತ್ತಾ ಯಕ್ಕೆ ಮಣಿಯಬೇಕಾಗಿದೆ. ಅವರು ಬಹುಶ: ಕಷ್ಟದಲ್ಲಿದ್ದಾರೆ ಅಂತ ನನಗನ್ನಿಸುತ್ತದೆ. ಆ ದೃಷ್ಟಿಯಿಂದ ಅವರು ಗೊಂದಲದಲ್ಲಿದ್ದಾರೆ. ಇದಕ್ಕಾಗಿ ಇಲಾಖೆಯು ಸ್ಯಾಕ್ರಿಫೈಸ್ ಮಾಡು ತ್ತಾರೆ. ಇದು ಒಪ್ಪತಕ್ಕಂತಹ ಮಾತಲ್ಲ. ರಾಜಕೀಯ ತೊಂದರೆಗಳು ಇರುವಾಗ ಏಕೆ ಮಾಡ ಬೇಕು. ಯಾವುದೇ ವಿಷಯವಾದರೂ ಇಲಾಖೆ ಸ್ಯಾಕ್ರಿಫೈಸ್ ಮಾಡುವುದು ಸರಿಯಲ್ಲ. ಇನ್ನು ವರ್ಗಾವಣೆಯ ವಿಚಾರವಾಗಿ, ಮುಖ್ಯ ಅಭಿಯಂತರರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಮಾಡಿ, ಅದಕ್ಕೆ ಈ ಎಲ್ಲ ವಿಚಾರಗಳನ್ನು ವಹಿಸುತ್ತೇವೆನ್ನುವ ಮಾತನ್ನು ಹೇಳಿದ್ದರು. ಎಲ್ಲಿ ಮಾಡಿದ್ದೀರಿ ? ಮಾಡಿಯೇ ಇಲ್ಲ. ಒಬ್ಬ ಜ್ಯೂನಿಯರ್ ಇಂಜಿನಿಯರ್ ವರ್ಗವಾಗಬೇಕಾದರೂ ಮಂತ್ರಿಗಳ ಹತ್ತಿರ ಬರಬೇಕು. ಒಬ್ಬ ಅಸಿಸ್ಟೆಂಟ್ ಇಂಜಿನೀಯರ್ ವರ್ಗವಾಗಬೇಕಾದರೂ ಮಂತ್ರಿಗಳ ಹತ್ತಿರ ಬರಬೇಕು. ಮಂತ್ರಿಗಳ ಅಪ್ಪಣೆ ಇಲ್ಲದೆ ಮಾಡುವುದಕ್ಕಾಗುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಯಾವ ಉದ್ದೇಶದಿಂದ ಈ ಕೆಲಸವನ್ನು ಮಾಡುತ್ತಿ ದ್ದೀರಿ. ಇದರಿಂದ ಸ್ಟೇಟ್ ಎಕ್ಸ್‌ಚೆಕರ್‌ಗೆ ಎಷ್ಟು ಕೋಟಿ ಹಣ ಖರ್ಚಾಗಿದೆ ? ನನಗೆ ತಿಳಿದ ಮಟ್ಟಿಗೆ 2–3 ಕೋಟಿ ಹಣ ಖರ್ಚಾಗಿದೆ ಎಂಬುದು ನನ್ನ ಅಂದಾಜು. ಈ ತರಹ ಇನ್‌ಡಿಸ್ಕ್ರಿ ಮಿನೇಷನ್ ವರ್ಗಾವಣೆಯಾಗಿದೆ.

ಹೀಗೆ ಇದೆ........

ಶ್ರೀ ಎಂ. ರಘುಪತಿ.—ಅವರು ಜನತಾ ಪಕ್ಷ ಎಂದು ಹೇಳಿದ್ದಾರೆ. ಜನತಾ ಪಕ್ಷದ ಶಾಸಕರು ಇದ ರಲ್ಲಿ ಶಾಮೀಲಾಗಿ ಮಂತ್ರಿಗಳಿಗೆ ತೊಂದರೆ ಕೊಟ್ಟಿದ್ದಾರೆ ಎಂದು....

ಉಪಾಧ್ಯಕ್ಷರು.—ಜನರಲ್ಲಾಗಿ ಅದು ...

ಶ್ರೀ ಎಂ. ರಘುಪತಿ.—ಒಂದು ಪಕ್ಷದ ಹೆಸರನ್ನು ಅವರು ಹೇಳಿದರು. ಅದು ಜನರಲ್ ಆಗ ಲಾರದು. ಆದ್ದರಿಂದ ಅವರು ಪಕ್ಷದ ಹೆಸರನ್ನು ಏನು ಹೇಳಿದರು ಅದನ್ನು ವಾಪಸ್ ಪಡೆಯಬೇಕು, ಇಲ್ಲದಿದ್ದರೆ ಕ್ಷಮಾಪಣೆಯನ್ನು ಕೇಳಬೇಕು. ಇಲ್ಲದಿದ್ದರೆ ನಾವು ಪ್ರಿವಿಲೇಜ್ ಮೋಷನ್ ಮೂವ್ ಮಾಡಬೇಕಾಗುತ್ತದೆ. ಇದು ನನ್ನ ಕ್ರಿಯಾಲೋಪ. ಇದಕ್ಕೆ ರೂಲಿಂಗ್ ಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ನಾವು ಈ ಸದನದಲ್ಲಿ ಕೆಲಸ ಮಾಡುವುದು ಹೇಗೆ ? ಈ ಸದನದಲ್ಲಿ ಒಂದು ಪಕ್ಷ ಇನ್ನೊಂದು ಪಕ್ಷದ ಬಗ್ಗೆ ಆರೋಪ ಮಾಡುವುದು ಸರಿಯೇ ? ಈ ರೀತಿ ಆದರೆ ನಾವು ಎಲ್ಲಿ ಹೋಗಿ ತಲುಪುತ್ತೇವೆ ? ಇದು ಒಳ್ಳೆಯ ಸಂಪ್ರದಾಯವಲ್ಲ. ಆದುದರಿಂದ ಹೇಳುತ್ತಿದ್ದೇನೆ, ಯಾರೂ ಕೂಡಾ ಈ ರೀತಿ ಮಾತನಾಡುವುದು ಸರಿಯಲ್ಲ. ಮಾನ್ಯ ಮಹದೇವ್‌ರವರು ಒಂದು ಮಾತನ್ನು ಹೇಳಿದರು. 50 ಸಾವಿರ ರೂಪಾಯಿ ತೆಗೆದುಕೊಂಡು ಒಬ್ಬರು ಶಾಸಕರು ಇದನ್ನು ವರ್ಗಾವಣೆ ಮಾಡಿದ್ದಾರೆಂದು ಹೇಳಿದ್ದಾರೆ. ಇದು ಕಡತಕ್ಕೆ ಹೋಗಿದೆಯೋ ಇಲ್ಲವೋ ಗೊತ್ತಿಲ್ಲ. ತಾವು ತರಿಸಿ ನೋಡಿಕೊಳ್ಳಿ.

ಶ್ರೀ ಎಂ. ಮಹದೇವ್.—ನನ್ನದೊಂದು ಕ್ರಿಯಾಲೋಪ ಇದೆ. ನಾನು ಹೇಳಿದ್ದು ನಿನ್ನೆ ಒಡೆಯ ರಾಜ್‌ರವರ ಮೇಲೆ ವೈಯುಕ್ತಿಕವಾಗಿ 50 ಸಾವಿರ ರೂಪಾಯಿ ತೆಗೆದುಕೊಂಡು ಟ್ರಾನ್ಸ್‌ಫರ್‌ಗೆ ಕೈ ಹಚ್ಚಿದ್ದೀರಾ ಅಂತ ಹೇಳುತ್ತಿದ್ದಾರೆ; ನೇರವಾಗಿ ಅಪದಾನೆ ಮಾಡುತ್ತಿದ್ದಾರೆ ಎಂದನೇ ಹೊರತು ಅವರು ನೇರವಾಗಿ ತೆಗೆದುಕೊಂಡಿದ್ದಾರೆ ಎಂದು ಹೇಳೇ ಇಲ್ಲ.

ಉಪಾಧ್ಯಕ್ಷರು.—ಕಡತದಲ್ಲಿ ಇರುವುದನ್ನು ನಾನು ಓದಿದ್ದೇನೆ.

ಶ್ರೀ ಎಚ್.ಡಿ. ದೇವೇಗೌಡ.—ನಿನ್ನೆ ಸದನದಲ್ಲಿ ನಾನು ಕುಳಿತು ಕೇಳಿದ್ದೇನೆ. ಅವರು ನಿರ್ದಿಷ್ಟ ವಾಗಿ ಯಾರ ಮೇಲೂ ಆಪಾದನೆ ಮಾಡಿಲ್ಲ. ಆದರೆ ಒಂದು ಮಾತನ್ನು ಹೇಳಿದರು. ಏನೆಂದರೆ, ಜನತಾ ಶಾಸಕರು ಹಣ ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಟ್ಟಿದ್ದೀರಾ ಎಂದು ಕೇಳಿದರು. ತಾವು ಮುಂದಕ್ಕೆ ಓದಬೇಕಾಗಿತ್ತು. ಇದು ಆದ ಮೇಲೆ ನಾನು ವಿವರಣೆ ಕೇಳಿದೆ. ಈಗ ವರ್ಗಕ್ಕೋಸರ ಹಣ ತೆಗೆದುಕೊಂಡು ಮಾಡಿದ್ದಾರೋ, ಮುಂದೆ ಅಧಿಕಾರಿಗಳನ್ನು ಹಾಕಿಸಿಕೊಂಡು ಹಣ ಮಾಡಿಕೊಳ್ಳೋ ದಕ್ಕೆ ಎಂಬ ಅಭಿಪ್ರಾಯದಲ್ಲಿ ಹೋಗಿದ್ದಾರೋ ವಿವರಣೆ ಕೊಡುತ್ತೀರಾ ಎಂದು ಕೇಳಿದೆ. ಇದು ಸದನ

ದಲ್ಲಿ ನಡೆದಿದೆ. ಒಂದು ಮಾತನ್ನು ನಾನು ಹೇಳುತ್ತೇನೆ. ಅವರು ನಿರ್ದಿಷ್ಟವಾಗಿ ಇಂತಹ ಎಂ.ಎಲ್.ಎ. ಎಂದು ಹೇಳಿಲ್ಲ. ಮಾನ್ಯ ರಂಗನಾಥ್‌ರವರು ಅಗ್ರಲೇಖನದಲ್ಲಿ ಬರೆದಿದ್ದುದರ ಬಗ್ಗೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಿದರು. ಅದರಲ್ಲಿ ಕಾಂಗ್ರೆಸ್ಸಿಗರು ಹಣ ಲಪಟಾಯಿಸಿದ್ದಾರೆ ಎಂದು ಉಲ್ಲೇಖ ಆಗಿರುವುದರಿಂದ ನಾನು ಕಾಂಗ್ರೆಸ್ಸಿಗನಾಗಿದ್ದು ನಾನೂ ಕೂಡ ಮಾತನಾಡಬೇಕಾಗಿದೆ ನನ್ನ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಹೇಳಿದಿರಿ. ಅದರಲ್ಲಿ ವಿರೋಧ ಪಕ್ಷ ಎಂದು ಹೇಳಿ....

ಶ್ರೀ ಎಸ್. ಬಂಗಾರಪ್ಪ.—ಅಧಿಕಾರದಲ್ಲಿ ಅವರೂ ಕೂಡಾ ಇದ್ದವರು. ಆಗ ಅಧಿಕಾರದಲ್ಲಿ ಇದ್ದವರು ಈಗ ವಿರೋಧ ಪಕ್ಷದಲ್ಲಿ ಇರುವಂತಹ ಕಾಂಗ್ರೆಸ್ಸಿಗರು ಎಂದು ಅದರಲ್ಲಿ ಮುಂದಿನ ಸೆಂಟೆನ್ಸ್ ಇದೆ.

ಶ್ರೀ ಎಚ್.ಡಿ. ದೇವೇಗೌಡ.—ಆದುದರಿಂದ, ವಿರೋಧ ಪಕ್ಷದವರು, ಕಾಂಗ್ರೆಸ್ ಪಕ್ಷದವರು ಎಂದು ಅಗ್ರ ಲೇಖನ ಬಂದಿದ್ದರಿಂದ ಹಕ್ಕುಚ್ಯುತಿ ಆಗಿದೆಯೆಂದು ತಮಗೆ ಅನುಮತಿ ಕೊಡಬೇಕೆಂದು ಕೇಳಿದ್ದು, ಆ ಬಗ್ಗೆ ತಾವು ತಮ್ಮ ರೂಲಿಂಗನ್ನು ಕಾಯ್ದಿರಿಸಿದ್ದೀರಿ. ಆದರೆ ಈ ರೀತಿ ದಾಮಾಶ ಜನತಾ ಪಾರ್ಟಿ ಶಾಸಕರು ಹಣ ಮಾಡಿಕೊಳ್ಳುವುದಕ್ಕೆ ಎಂದು ಹೇಳಿದ್ದು ಸರಿಯಲ್ಲವೆಂದು ಬಹುಶ: ಅವರ ಮನಸ್ಸಿನಲ್ಲಿಯೂ ಇದೆ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಿನ್ನೆ ಈ ಬಗ್ಗೆ ಮುಂದೆ ಹೋಗುವುದಕ್ಕೆ ಆಗಲಿಲ್ಲ. ನಾನು ಹೇಳಿದೆ, ಸ್ವಲ್ಪ ಜವಾಬ್ದಾರಿ ರಹಿತವಾದ ಮಾತನ್ನು ಆಡಬಾರದು ಎಂದು. ಬಹುಶ: ನಾನು ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಈ ಪಾಯಿಂಟ್‌ಗಳನ್ನು ಮೀಟ್ ಮಾಡುತ್ತೇನೆ. ಆ ದಿಕ್ಕಿನಲ್ಲಿ ಅವರು ಹೇಳಿದ ವಿಷಯಗಳಿಗೆ ನಾನು ಉತ್ತರವನ್ನು ಕೊಡುತ್ತೇನೆ.

(ಗೊಂದಲ)

ಉಪಾಧ್ಯಕ್ಷರು.—ಈ ಬಗ್ಗೆ ಮಾನ್ಯ ಒಡೆಯಾರಾಜ್‌ರವರು ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ನನ್ನ ಭಾಷಣವನ್ನು ಮುಂದುವರಿಸುತ್ತೇನೆ.

ಶ್ರೀ ಪಿ. ರಾಮ್‌ದೇವ್.—ನನ್ನದೊಂದು ಕ್ರಿಯಾಲೋಪ ಇದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಇನ್ನೂ ಮಾತನಾಡೇ ಇಲ್ಲ.

ಶ್ರೀ ಪಿ. ರಾಮ್‌ದೇವ್.—ಅವರು ಮಾತನಾಡುವ ಬಗ್ಗೆ ನನ್ನ ಕ್ರಿಯಾಲೋಪ ಇಲ್ಲ. ನಿನ್ನೆ ಆಗಿರತಕ್ಕ ಘಟನೆ ಬಗ್ಗೆ ಏನು ಬಂದಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

"ಜನತಾ ಪಕ್ಷದ ಶಾಸಕರು ಹಣ ಪಡೆದು ಲೋಕೋಪಯೋಗಿ ಇಲಾಖೆಯಲ್ಲಿ ವರ್ಗಾವಣೆ ಮಾಡಿದ್ದಾರೆಂದು ವಿರೋಧ ಪಕ್ಷದ ಉಪನಾಯಕರಾದ ಗೋವಿಂದ ಪಿ. ಒಡೆಯರಾಜ್‌ರವರು ನೇರವಾದ ಆಪಾದನೆಯನ್ನು......"

ಹೀಗೆ ನೇರವಾಗಿ ಆರೋಪ ಮಾಡಿದ್ದಾರೆ ಎಂದು ಬಂದಿದೆ. ಮಾನ್ಯ ದೇವೇಗೌಡರು, ನಾನು ಮತ್ತು ಅವರು ಹೇಳಿರತಕ್ಕದ್ದು ಮುಂದೆ ಇದೆ, ಅದನ್ನು ಇನ್ನೂ ತಾವು ಪೂರ್ತಿ ಓದಿಲ್ಲ, ಅದನ್ನು ಓದಬೇಕೆಂದು ಹೇಳಿದ್ದಾರೆ. ನೇರವಾಗಿ ಮಾನ್ಯ ಉಪನಾಯಕರಾದ ಒಡೆಯರಾಜ್ ಅವರು ಅಪಾದನೆ ಮಾಡಿದ್ದಾರೆ. ಇದು ಅವರದೇ ಪತ್ರಿಕೆಯಲ್ಲಿ ಕೂಡ ಬಂದಿದೆ. ತಾವು ಅದನ್ನು ಪೂರ್ತಿ ಓದಿ.

ಶ್ರೀ ಎಂ. ರಘುಪತಿ.—ಮಾನ್ಯ ಒಡೆಯರಾಜ್ ಅವರು ಅನುಭವಿ ಶಾಸಕರು; ಈ ಆಪಾದನೆಗಳನ್ನು ಮಾಡುವಾಗ ಅವರು ಮಾಹಿತಿ ಇಟ್ಟುಕೊಂಡೇ ಮಾಡಿರಬಹುದು. ಅವರು ಯಾರು ಯಾರು ಎಂಬುದನ್ನು ಸದನದಲ್ಲಿ ತಿಳಿಸಬೇಕು; ಅವರಲ್ಲಿರತಕ್ಕ ಎಲ್ಲಾ ದಾಖಲೆಗಳನ್ನು ಹಾಗೂ ಪಟ್ಟಿಗಳನ್ನು ಸದನದಲ್ಲಿಡಬೇಕು; ಪಕ್ಷಕ್ಕೆ ಕಳಂಕ ಬರುವಂಥ ಆಪಾದನೆ ಮಾಡಿದ್ದಾರೆ. ಅವರು ಬೇಷರತ್ತಾಗಿ ಕ್ಷಮೆ ಕೇಳಬೇಕು; ಅವರು ಹೇಳಿರತಕ್ಕ ಮಾತನ್ನು ವಾಪಸ್ಸು ಪಡೆಯಬೇಕು.

ಶ್ರೀ ಜೆ.ಡಿ. ಸೋಮಪ್ಪ.— ತಾವು ಇಲ್ಲಿ ಇದ್ದು ಹೋದವರು.

ಶ್ರೀ ಎಂ. ರಘುಪತಿ.—ನಾನು ಶಾಸಕನಾಗಿಲ್ಲದೇ ಇದ್ದಾಗ ಪಕ್ಷ ಬಿಟ್ಟು ಹೋದವನು, ದೇವರಾಜ ಅರಸ್‌ರವರಿಗೆ ಮೋಸ ಮಾಡಿ ಹೋಗಲಿಲ್ಲ.

ಶ್ರೀ ಜೆ.ಡಿ. ಸೋಮಪ್ಪ.— 35 ವರ್ಷಗಳಿಂದಲೂ ಆಗದೇ ಇದ್ದಂಥ ವರ್ಗಾವಣೆ ಆಗಿದೆ. ಮಂತ್ರಿಗಳ ಮೇಲೆ ಯಾರೂ ಹೇಳಿಲ್ಲ; ಈರೀತಿ ವರ್ಗಾವಣೆ ಆಗಬೇಕಾದರೆ ಕಾರಣ ಏನು ಎನ್ನುವ ಬಗ್ಗೆ ಜನಗಳಿಗೆ ಅನುಮಾನ ಬಂದಿದೆ.

ಉಪಾಧ್ಯಕ್ಷರು.—ನಾನು ವರದಿಯನ್ನು ಸಂಪೂರ್ಣವಾಗಿ ಓದಿಬಿಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವರ್ಗಾವಣೆಯ ಸಬ್ಜೆಕ್ಟನ್ನು ಮುಗಿಸಿ ಮುಂದೆ ಹೋಗಿದ್ದಾರೆ. ನನಗೆ ಒಂದು ವಿವರಣೆ ಬೇಕಾಗಿದೆ. ಜನತಾ ಶಾಸಕರು ದುಡ್ಡು ಮಾಡುವುದಕ್ಕೋಸ್ಕರ ವರ್ಗ ಮಾಡಿದ್ದಾರೆಂದು ಹೇಳಿದ್ದಾರೆ. ಅಥವಾ ವರ್ಗ ಮಾಡಿಸಿ ಆಮೇಲೆ ದುಡ್ಡು ತೆಗೆದುಕೊಳ್ಳುತ್ತಾರೋ ಅಂತಲೋ ಎಂಬುದಕ್ಕೆ ನನಗೆ ವಿವರಣೆ ಬೇಕಾಗಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಶಾಸಕರು ತಮಗೆ ಬೇಕಾದವರನ್ನು ನೇಮಿಸಿಕೊಳ್ಳು ವುದರ ಉದ್ದೇಶ ಏನು ? ದುಡ್ಡು ಮಾಡುವ ಉದ್ದೇಶ.

ಶ್ರೀ ಹೆಚ್.ಡಿ. ದೇವೇಗೌಡ.—ಏಕೆಂದರೆ ಅವರು ಚಾರ್ಜ್ ಮಾಡುತ್ತಿದ್ದಾರೆ. ಜನತಾ ಶಾಸಕರು ದುಡ್ಡುಮಾಡುವುದಕ್ಕೋಸ್ಕರ ವರ್ಗ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಅಂತಹ ವರ್ಗ ಮಾಡುವಾಗ ದುಡ್ಡು ತೆಗೆದುಕೊಂಡು ವರ್ಗ ಮಾಡಿಸಿದ್ದಾರೋ ಅಥವಾ ವರ್ಗ ಮಾಡಿಸಿ ಮುಂದೆ ದುಡ್ಡನ್ನು ತೆಗೆದುಕೊಳ್ಳುತ್ತಾರೋ ಎನ್ನುವ ಮಾತನ್ನು ಹೇಳಿದ್ದಾರೆ. He is making a serious allegation. He is the Deputy Leader of the Opposition. He must spell out whether the Janatha Party MLA's have taken money while getting the transfers or whether they are intending to make money by taking such an officer from his constituency.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅನೇಕ ಜನ ದುಡ್ಡು ತೆಗೆದುಕೊಂಡು ಮಾಡಿದ್ದಾರೆಂಬ ಆಪಾದನೆಯನ್ನು ಮಾಡಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿಸಿ, ರುಜುವಾತು ಪಡಿಸುತ್ತೇನೆ."

ಉಪಾಧ್ಯಕ್ಷರು.—ಇದೆ; ಅವರು ಹೇಳಿದ್ದು ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್.—ಮುಂದಿನದು ಏನೂ ಉಳಿದಿಲ್ಲ. ಅಲ್ಲಿಗೆ ಬಂದೆ ಆಯಿತು.

(ಗೊಂದಲ)

ಉಪಾಧ್ಯಕ್ಷರು.—ನೀವು ಏತಕ್ಕೆ ಅಷ್ಟು ಆತುರ ಬೀಳುತ್ತೀರಿ ?

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಿರ್ದಿಷ್ಟವಾಗಿ, ಆಪಾದನೆ ಮಾಡಿ ರುವುದರಿಂದ ಯಾರು ಯಾರು ಎಂಬುದನ್ನು ಪಟ್ಟಿ ಇಡಬೇಕು. ಅದನ್ನು ಅವರು ರುಜುವಾತು ಮಾಡ ಬೇಕು; ಇಲ್ಲದೇ ಹೋದರೆ ಬೇಷರತ್ತಾಗಿ ಕ್ಷಮೆ ಕೇಳಬೇಕು; ಹೇಳಿದಂಥ ಶಬ್ದಗಳನ್ನು ವಾಪಸ್ಸು ಪಡೆಯ ಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ನಾರಾಯಣ ಗೌಡ.—ಮಾನ್ಯ ಸದಸ್ಯರು ಸಾಬೀತು ಮಾಡಲಿ ಅಂಥ ಸದಸ್ಯರ ಪರವಾಗಿ ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ಅವರು ರಾಜಿನಾಮೆ ಕೊಡಬೇಕೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.— 8 ತಿಂಗಳು ಆಗಿದೆ; ಈಗಲೇ ರಾಜೀನಾಮೆ ಕೊಡಬೇಡಿ.

ಶ್ರೀ ಸಿ.ಆರ್. ಲಕ್ಷ್ಮಯ್ಯ.—ಮಾನ್ಯ ಒಡೆಯರಾಜ್ ಅವರು ನೇರವಾಗಿ ಆಪಾದನೆ ಮಾಡಿ ದ್ದಾರೆ.

ಉಪಾಧ್ಯಕ್ಷರು.—ರಿಕಾರ್ಡ್ ಮಾಡಬೇಡಿ.

ಶ್ರೀ ವಿ. ಧನಂಜಯ ಕುಮಾರ್.—ಅಧಿಕಾರದಲ್ಲಿದ್ದವರು, ಅವರಿಗೆ ಸ್ವಲ್ಪ ಕಾಲ ಕೊಡಿ; ಸಾಬೀತು ಮಾಡಿ ತೋರಿಸಲಿ.

ಶ್ರೀ ಜೆ.ಎಸ್. ದೊಡ್ಡಮೇಟಿ.—ಅವರು ನಮಗೆ ಒಂದು ಬೆಟ್ಟು ತೋರಿಸಿದರೆ ಅವರ ಕಡೆ ನಾಲ್ಕು ಬೆಟ್ಟು ತೋರಿಸುತ್ತೆ.

3-00 p.m.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ಇವರು ಇಲ್ಲ ಎಂದು ಹೇಳತಕ್ಕದ್ದು ಯಾರೂ ಒಪ್ಪತಕ್ಕದಲ್ಲ. ನೆನ್ನೆ ನಾನೇ ಇದನ್ನು ಪ್ರಾಮಾಣಿಕವಾಗಿ ಸಾಬೀತುಪಡಿಸಬೇಕೆಂದು ಹೇಳಿ ದ್ದೇನೆ. ಅವರು ಗುರುತರವಾದ ಆಪಾದನೆ ಮಾಡಿದ್ದಾರೆ, ಪತ್ರಿಕೆಯಲ್ಲಿ ಬಂದಿರತಕ್ಕದ್ದು ತಮ್ಮ ಕಡಿತ ದಲ್ಲಿರತಕ್ಕದ್ದು ಸತ್ಯಾಂಶ ಇದೆ. ಜವಾಬ್ದಾರಿಸ್ಥಾನದಲ್ಲಿರತಕ್ಕ ವಿರೋಧ ಪಕ್ಷದ ಉಪನಾಯಕರಾದ ಒಡೆಯರಾಜ್ ಅವರು ಬಹಳ ತಪ್ಪು ಮಾಡಿದ್ದಾರೆ, ಅವರು ಕ್ಷಮಾಯಾಚನೆ ಕೇಳಲೇಬೇಕು. ಅಲ್ಲಿಯ ವರೆಗೆ ಮುಂದಿನ ಕಾರ್ಯಕಲಾಪ ಮಾಡಲಿಕ್ಕೆ ಬಿಡುವುದಿಲ್ಲ. ಕ್ಷಮಾಯಾಚನೆ ಬೇಷರತ್ತಾಗಿ ಕೇಳಲೇ ಬೇಕು.

ಶ್ರೀ ಎಂ. ಮಹದೇವ್.—ಆ ಪ್ರಮೇಯ ಉದ್ಭವಿಸುವುದಿಲ್ಲ.

ಉಪಾಧ್ಯಕ್ಷರು.—ಕಾನೂನಿನಲ್ಲಿ ಏನಿದೆ ಎನ್ನುವುದನ್ನು ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಆ ವಿಷಯದ ಬಗ್ಗೆ ಚರ್ಚೆ ಮಾಡತಕ್ಕ ಸಮಯದಲ್ಲಿ ಕೆಲವಾರು ಆಪಾದನೆಗಳನ್ನು ಸರ್ಕಾರದ ಮೇಲೆ ಮಾಡಿದ್ದಾರೆ; ಪಕ್ಷದ ಮೇಲೆ ಮಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಅವಕಾಶ ಇದೆ, ಕೊಡುತ್ತಾರೆ. ಈಗ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಕಂಟಿನ್ಯೂ ಮಾಡಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೆ,....

(ಗೊಂದಲ)

ಉಪಾಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೆ, ವಿರೋಧ ಪಕ್ಷದ ಉಪನಾಯಕರು ಪಕ್ಷದ ಶಾಸಕರ ಮೇಲೆ ಆರೋಪಣೆ ಮಾಡಿರುವುದರಿಂದ ಅವರು ಕ್ಷಮಾಯಾಚನೆ ಕೇಳಲೇಬೇಕು.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೆ, ಕಡತದಲ್ಲಿರತಕ್ಕ ವಿಷಯಗಳನ್ನು ಓದಿದ್ದೀರಿ. ಪತ್ರಿಕೆಯಲ್ಲಿ ಬಂದಿರತಕ್ಕದ್ದು ಮಾನ್ಯ ಸದಸ್ಯರು ಓದಿದ್ದಾರೆ. ಈ ಅಂಶಗಳನ್ನು ಸಾರ್ವಜನಿಕರು ನೋಡಿದಾಗ ಅವರಲ್ಲಿ ಯಾವ ಅಭಿಪ್ರಾಯಗಳು ಬರುತ್ತವೆಂದು ಪರಿಗಣಿಸಬೇಕಾಗುತ್ತದೆ. ವರ್ಗಾವರ್ಗಿ ಬಗ್ಗೆ ಜನತಾ ಪಕ್ಷದ ಶಾಸಕರ ಮೇಲೆ ಆರೋಪ ಮಾಡಿ ಹೇಳಿದ್ದಾರೆ, ಅವರು ಅತ್ಯಂತ ಬೇಜವಾಬ್ದಾರಿ ಹೇಳಿಕೆ ಮಾಡಿರತಕ್ಕದ್ದು, ಸಾರ್ವಜನಿಕರಲ್ಲಿ ಏನು ಪರಿಣಾಮ ಬಿರುತ್ತದೆ, ಯಾವ ಕೆಟ್ಟ ಅಭಿಪ್ರಾಯ ಬರುತ್ತದೆ, ಅವರು ಯಾವ ತರಹ ಭಾವಿಸುತ್ತಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ಆದ್ದರಿಂದ, ಮಾನ್ಯ ಒಡೆಯರಾಜ್ ಅವರು ಹೇಳಿರತಕ್ಕ ವಾಕ್ಯಗಳು ಏನಿವೆ ಅವುಗಳನ್ನು ಅವರು ಹಿಂದಕ್ಕೆ ಪಡೆಯಬೇಕು. ಈ ಸಭೆಯಲ್ಲಿ ಕ್ಷಮಾಯಾಚನೆ ಕೇಳಬೇಕು. ಇಲ್ಲದೆ ಇದ್ದರೆ ಇಲ್ಲಿ ನಡೆಯುತಕ್ಕ ನಡವಳಿಕೆಗೆ ಅಡ್ಡಿಪಡಿಸಬೇಕಾಗುತ್ತದೆ.

ಶ್ರೀ ಬಿ.ಬಿ. ಜಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ, ಈಗಾಗಲೇ, ಈ ವಾದ ವಿವಾದಗಳ ಬಗ್ಗೆ ಚರ್ಚೆ ನಡೆದು ತಾವು ತೀರ್ಮಾನ ಕೊಟ್ಟಿದ್ದೀರಿ. ಮಾನ್ಯ ಒಡೆಯರಾಜ್ ಅವರು ಮಾತನಾಡಲಿಕ್ಕೆ ಈಗ ಅವಕಾಶ ಮಾಡಿಕೊಡಬೇಕು. ಹೆಚ್ಚು ಆಸಕ್ತಿಯನ್ನು ಅವರು ತೋರಿಸುವುದು ಮುಖ್ಯ. ಇವೊತ್ತಿನ ದಿವಸ ಇದು ಮುಗಿಯಬೇಕೆಂದು ತೀರ್ಮಾನ ತೆಗೆದುಕೊಂಡಿರುವಾಗ, ಅವರು ಹೆಚ್ಚಿನ ಸಹಕಾರ ನೀಡದೆ, ಅಸಹಕಾರ ನೀಡಿ, ತೊಂದರೆ ಮಾಡುವುದಾದರೆ, ಕರ್ತವ್ಯ ನಿರ್ವಹಣೆ ಮಾಡತಕ್ಕದ್ದಕ್ಕೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಅವರು ಹೆಚ್ಚು ಸಹಕರಿಸಬೇಕೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಈ ಸದನದ ವೇಳೆಯನ್ನು ಹಾಳುಮಾಡಬೇಕೆಂದು ಜನತಾ ಪಕ್ಷದ ಯಾವ ಸದಸ್ಯರಿಗೂ ಮನಸ್ಸಿಲ್ಲ. ಈ ಸದನದ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕು, ಒಳ್ಳೆಯ ರೀತಿಯಿಂದ ನಡೆಯಬೇಕು, ಒಳ್ಳೆಯ ಸಂಪ್ರದಾಯದಲ್ಲಿ ನಡೆಯಬೇಕೆಂದು ಪ್ರತಿಯೊಬ್ಬ ಜನತಾ ಪಕ್ಷದ ಶಾಸಕರಲ್ಲಿಯೂ ಆಸಕ್ತಿ ಇದೆ. ಶ್ರೀಮಾನ್ ಒಡೆಯರಾಜ್ ಅವರು ಅವರ ಮನಸ್ಸಿನಲ್ಲಿ ಏನು ಇತ್ತು ಅದನ್ನು ವಿವರಣೆ ಕೊಡಲಿಕ್ಕೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ಅವರು ವಿವರಣೆ ಕೊಟ್ಟ ಮೇಲೆ ತಾವು ನಿರ್ಣಯ ಕೊಡಬೇಕಾಗುತ್ತದೆ. ಏಕೆಂದರೆ, ಈ ಸದನದ ಕಾರ್ಯಕಲಾಪಗಳನ್ನು ನಡೆಸಬೇಕಾಗುತ್ತದೆ. ಅವರು ಯಾವುದೇ ಜನತಾ ಪಕ್ಷದ ಶಾಸಕರ ಮೇಲೆ ಮಾಡಿರತಕ್ಕ ಆಪಾದನೆಯನ್ನು ರುಜುವಾತು ಮಾಡಿದರೆ ಇಡೀ ಜನತಾ ಪಕ್ಷದ ಶಾಸಕರು ರಾಜಿನಾಮೆ ಕೊಟ್ಟು ಮನೆಗೆ ಹೋಗಲಿಕ್ಕೆ ತಯಾರಿದ್ದೇವೆ.

Sri Mahadev.—Sir

Mr. Deputy Speaker.—That is not the way in which you behave. The hon'ble member may please continue.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೆ. ಇನ್ನೂ 2047 ಹಳ್ಳಿಗಳಿಗೆ ರಸ್ತೆಗಳನ್ನು ಮಾಡಬೇಕಾಗಿದೆ. 35 ವರ್ಷಗಳು ಕಳೆದರೂ ಹಳ್ಳಿಗಳಿಗೆ ಇನ್ನೂ ರಸ್ತೆಗಳನ್ನು ಮಾಡಿಲ್ಲದ ಪರಿಸ್ಥಿತಿ ಇರುವಾಗ ಇದಕ್ಕೆ ವಿಶೇಷವಾದಂಥ ಕ್ರಮವನ್ನು ಪಿ.ಡಬ್ಲ್ಯು.ಡಿ. ಖಾತೆಯವರು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಹೇಳುವಾಗ ಇಲ್ಲಿ ಒಂದು ಸಲಹೆ ಕೊಡಬೇಕಾಗುತ್ತದೆ. ಇವೊತ್ತು ಐಸಿಆರ್‌ಸಿ, ಸ್ಕೇರ್‌ಸಿಟಿ ರಿಲೀಫ್ ಫಂಡ್‌ನಲ್ಲಿ ಮಾಡುತ್ತಿದ್ದಾರೆ....

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ನಾನು ನಮ್ಮ ಭಾಗದ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಾಕಷ್ಟು ಇದರ ಬಗ್ಗೆ ಈಗ ನಿಮ್ಮ ಪ್ರತಿಭಟನೆ, ಪ್ರತಿಕ್ರಿಯೆ ವ್ಯಕ್ತಪಡಿಸಿದ್ದೀರಿ. ಶಾಸನಸಭೆಯಲ್ಲಿ ಕೆಲಸಮಾಡುವಾಗ ಇಂಥ ಘಟನೆಗಳು ಬರುತ್ತವೆ. ಸ್ವಲ್ಪ ನಾವು ಇದಕ್ಕೆ ಇಷ್ಟೊಂದು ಸೆನ್‌ಸಿಟೀವ್ ಆಗಿ ಇರಬಾರದು. ಸ್ವಲ್ಪ ಸಮಾಧಾನದಿಂದ ಇರಬೇಕು. ಕಾಂಗ್ರೆಸ್‌ನವರೆಲ್ಲಾ ದುಡ್ಡು ತೆಗೆದುಕೊಂಡಿದ್ದಾರೆ ಎಂದರೆ ಏನಾಗುತ್ತದೆ...

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ನಾವು ಯಾವುದು ದುಡ್ಡು ತೆಗೆದುಕೊಂಡು ಮಾಡಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ನಮಗೆ ಉತ್ತರ ಕೊಡತಕ್ಕ ಅಧಿಕಾರ ಇದೆ. ಉತ್ತರ ಕೊಡು

ವಾಗ ಸಮಂಜಸವಾಗಿ ಉತ್ತರ ಕೊಡತಕ್ಕ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಈ ವಿಷಯವನ್ನು ಅಲ್ಲಿಗೆ ನಿಲ್ಲಿಸೋಣ. ಈಗ ಸಭೆಯ ಕಾಲವನ್ನು ಹಾಳು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇವೊತ್ತಿನ ಚರ್ಚೆ ಬಹಳ ಗಹನವಾದಂಥ ವಿಷಯ. ಇದು ದುರ್ದೈವ, ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವೊತ್ತು ರಾಜ್ಯದ 80 ಭಾಗ ಜನ ಗ್ರಾಮಾಂತರ ಪ್ರದೇಶದಲ್ಲಿ ಏನಿದ್ದಾರೆ, ಅವರ ಜನಜೀವನದ ನಾಡಿಯನ್ನು ಗುರುತಿಸತಕ್ಕ ಇಲಾಖೆ ಮೇಲೆ ಚರ್ಚೆ ಮಾಡಬೇಕಾದರೆ ಇದು ಕೆಳಮಟ್ಟದ ಚರ್ಚೆಗೆ ಹೋಗಿದೆ. ರಾಜ್ಯದ ಜಲಸಂಪತ್ತು, ಮತ್ತಿತರ ಸಂಪತ್ತುಗಳ ಬಗ್ಗೆ ಚರ್ಚೆ ಮಾಡುವುದು ಬಿಟ್ಟು, ಕೆಳಮಟ್ಟದ ಚರ್ಚೆ ಮಾಡಲಿಕ್ಕೆ ಇಳಿದಿದ್ದೇವೆ. ಇದನ್ನು ನಿಲ್ಲಿಸೋಣ. ಉತ್ತರ ಕೊಡುವ ಕಾಲದಲ್ಲಿ ನಾನು ಕೊಡುತ್ತೇನೆ. ಈಗ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ನೆನ್ನೆಯಿಂದ ಇವೊತ್ತಿನವರೆಗೆ ಸದನದ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿದ್ದೇವೆ. ಮಾನ್ಯ ಒಡೆಯರಾಜ್ ಅವರು ಏನು ಹೇಳಿದ್ದಾರೆ ಅದು ನಮ್ಮ ಕಡತದಲ್ಲಿದೆ. ಅದನ್ನು ಸದನಕ್ಕೂ ಓದಿ ಹೇಳಿದ್ದಾರೆ. ಮಾತಿನ ಉದ್ವೇಗದಲ್ಲಿ ಅದು ಬಂದಾಗ ಅದನ್ನು ಅಪಾರ್ಥಮಾಡಿಕೊಂಡು ನೆನ್ನೆಯಿಂದ ಇವೊತ್ತಿನವರೆಗೂ ಮಾತನಾಡುತ್ತಿದ್ದಾರೆ. ಜನರಲ್ ಆಗಿ ಒಂದು ವಿಚಾರವನ್ನು ಅವರು ಪ್ರತಿಪಾದನೆ ಮಾಡಿದ್ದನ್ನು ಇವೊತ್ತು ಮಾಡಿದ್ದಾರೆ. ಸ್ಪೆಸಿಫಿಕ್ ಇಷ್ಟು ಇದ್ದರೆ he would have said that. ಜನರಲ್ ರಿಮಾರ್ಕ್ ಮಾಡಿದ್ದಾರೆ, ಅದು ಕಡತದಲ್ಲಿ ಬಂದಿದೆ. ಮಾನ್ಯ ಲೋಕೋಪಯೋಗಿ ಸಚಿವರಾದ ದೇವೇಗೌಡರು ಒಂದು ವಿಚಾರ ಹೇಳಿದರು. ಇದು ನಿಜವಾಗಿ ಇಡೀ ಕರ್ನಾಟಕ ರಾಜ್ಯದ ಜನಜೀವನದ ನಾಡಿಯಾಗಿದೆ. ಈ ಕಡೆಯುವರಿಗೂ, ಆ ಕಡೆಯವರಿಗೂ, ಈ ಸದನದ ಕಾರ್ಯಕಲಾಪಗಳು ಉತ್ತಮ ಮಟ್ಟದಲ್ಲಿ ನಡೆಯಬೇಕು ಎನ್ನುವುದು ಇದೆ. ಉತ್ತಮ ಮಟ್ಟದಲ್ಲಿ, ಇದನ್ನು ಕಾಯ್ದುಕೊಳ್ಳಬೇಕಾದ ಆಸಕ್ತಿ ಎಲ್ಲರಿಗೂ ಇದೆ. ಜನರ ಒಂದು ವಿಶ್ವಾಸವನ್ನು ಗಳಿಸಿಕೊಂಡುಬಂದಂಥ ಜನ ಎಲ್ಲಾ ಸದಸ್ಯರಾಗಿದ್ದಾರೆ. ನಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಕೆಲವು ವಿಚಾರಗಳನ್ನು ಮಾಡಬೇಕಾಗುತ್ತದೆ. ಕೆಲವು ವಿಚಾರಗಳಲ್ಲಿ ಸರ್ಕಾರ ಟೀಕೆಗೂ ಕೂಡ ಗುರಿಯಾಗಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಉದ್ವೇಗದಿಂದ ಅಪಾರ್ಥ ಮಾಡಿಕೊಂಡು ಯಾರೂ ಕೂಡ ಸರ್ಕಾರವನ್ನಾಗಲಿ, ಸದಸ್ಯರನ್ನಾಗಲಿ ಹೊಗಳುವುದು ಬೇಡ, ಅದು ತಪ್ಪು. ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದರೆ ಅದನ್ನು ನಾವೂ, ನೀವೂ ಮೆಚ್ಚೋಣ, ಹೊಗಳೋಣ. ಆದರೆ ಅದೇ ಟೀಕೆಯನ್ನು ನಾವು ಮಾಡಿದಾಗ ಏತಕ್ಕೆ ಟೀಕೆ ಮಾಡಿದಿರಿ ಎಂದು ಯುದ್ಧಕ್ಕೆ ನಿಂತರೆ ಈ ಸದನದಲ್ಲಿ ನಡೆಯತಕ್ಕ ಚರ್ಚೆಗೆ, ಕಾರ್ಯಕಲಾಪಗಳಿಗೆ ಮುಕ್ತ ಅವಕಾಶ ಸಿಕ್ಕುವುದಿಲ್ಲ, ಕೇವಲ ಅಧ್ಯಕ್ಷರು ಮಾತ್ರ ಚರ್ಚೆಗೆ ಅನುಮತಿಯನ್ನು ಕೊಡುವುದಲ್ಲ, ಈ ಸದನದ ಎಲ್ಲ ಮಾನ್ಯ ಸದಸ್ಯರೂ ಕೂಡ ಅವಕಾಶವನ್ನು ಕೊಟ್ಟರೆ ಮಾತ್ರ ಅದು ಮುಕ್ತ ಚರ್ಚೆಯಾಗುವುದಕ್ಕೆ ಅನುಕೂಲವಾಗುತ್ತದೆ. ಆದರೆ ಚರ್ಚೆಯೇ ಇಲ್ಲದೆ ನಾವು ಈ ಸದನದ ಕಾರ್ಯಕಲಾಪಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಮುಕ್ತ ಚರ್ಚೆಯಾದರೆ ಮಾತ್ರ ಈ ಸದನದ ಕಾರ್ಯಕಲಾಪಗಳು ಉನ್ನತ ಮಟ್ಟಕ್ಕೆ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಅದು ಬಿಟ್ಟು ಬಲವದ್ಬಂಧನದಿಂದ ಪರಸ್ಪರ ಮಾತನಾಡುವುದನ್ನು ತಡೆಹಾಕುವುದಾದರೆ ಈ ಸದನದ ಪರಂಪರೆಗೆ, ಈ ಸದನದ ಸಂಸ್ಕೃತಿಗೆ ಒಳ್ಳೆಯ ಹೆಸರು ಬರುವುದಿಲ್ಲ. ಆದ್ದರಿಂದ ನಾನು ಇದಕ್ಕೆ ಒಂದು ಸಲಹೆಯನ್ನು ಕೊಡುತ್ತೇನೆ. ಕೌಲ್ ಅಂಡ್ ಶಕ್ಧರ್‌ರವರು ಇಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಯಾವುದೇ ಒಂದು ಆಪಾದನೆಯನ್ನು ಪರಸ್ಪರ ಮಾಡಿದಾಗ ಆ ಪಕ್ಷದ ನಾಯಕರು ಒಂದು ಕಡೆ ಸೇರಿ ಪರಸ್ಪರ ಆರೋಪ, ಪ್ರತ್ಯಾರೋಪಗಳು ಆಗದಂತೆ ನೋಡಿಕೊಳ್ಳಬೇಕು ಎಂದು. ಇಂಥಾದ್ದಕ್ಕೆ ತಾವು ಒಂದು ಅವಕಾಶವನ್ನು ಮಾಡಿಕೊಡಿ. ಇದರ ಬಗ್ಗೆ ಯಾವ ರೀತಿ ಆರೋಪ ಪ್ರತ್ಯಾರೋಪ ಮಾಡಬೇಕೆಂಬ ಬಗ್ಗೆ ತಮ್ಮ ಪಕ್ಷದ ನಾಯಕರನ್ನು ಕರೆಯಿರಿ. ಆಗ ಪ್ರಸ್ತಾಪ ಮಾಡೋಣ. ಈ ಸದನದ ಕಾರ್ಯಕಲಾಪಗಳು ಏಕಮುಖವಾಗಿ ಆಗಬಾರದು, ಬಹುಮುಖವಾಗಿ ಆಗಬೇಕು. ಏಕಮುಖವಾಗಿ ಆದರೆ ದೋಷಾರೋಪಣೆಯ ಚಕ್ರ ಬಹಳ ಬಿರುಸಾಗಿ ತಿರುಗುವುದಕ್ಕೆ ಅವಕಾಶವಾಗುತ್ತದೆ. ಇಲ್ಲಿಗೆ ಈ ಸಾರಿ ಹೊಸಬರು ಸದಸ್ಯರು ಆರಿಸಿಬಂದಿದ್ದಾರೆ. ಅವರಲ್ಲಿ ಕೆಲವರು ಬಹಳ ಸೂಕ್ಷ್ಮ ಸ್ವಭಾವದವರು ಇದ್ದಾರೆ. ಇಲ್ಲಿಯ ನಡವಳಿಕೆಗಳನ್ನು ನೋಡಿದರೆ ಅವರ ಮನಸ್ಸಿಗೆ ನೋವಾಗುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಈ ಸದನದ ಕಾರ್ಯಕಲಾಪಗಳು ನಡೆಯುವಾಗ ದೋಷಾರೋಪಣೆಯ ಚಕ್ರ ಯಾರಿಗೂ ಆಘಾತವನ್ನು ಉಂಟುಮಾಡಬಾರದು. ಅಂಥ ಒಂದು ಉನ್ನತ ಮಟ್ಟದಲ್ಲಿ ಈ ಕಾರ್ಯಕಲಾಪಗಳ ಚರ್ಚೆಯನ್ನು ನಡೆಸಿಕೊಂಡು ಹೋಗುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈಗಾಗಲೇ ಮಾನ್ಯ ಸಚಿವರಾದ ದೇವೇಗೌಡರು ಮತ್ತು ವಿರೋಧಪಕ್ಷದ ನಾಯಕರೂ ಸಾಕಷ್ಟು ಹೇಳಿರುವುದರಿಂದ ಪುನಃ ಅದನ್ನೇ ಮಾತನಾಡಲು ಯಾರಿಗೂ ಅವಕಾಶವನ್ನು ಕೊಡುವುದಿಲ್ಲ. ಎಲ್ಲ ಮಾನ್ಯ ಸದಸ್ಯರೂ ಇದರಲ್ಲಿ ಸಹಕರಿಸಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಉಪಾಧ್ಯಕ್ಷರೆ, ಎಂ.ಎನ್.ಇ.ಪಿ.ನಲ್ಲಿ ಏನು ರಸ್ತೆಗಳನ್ನು ನಿರ್ಮಾಣ ಮಾಡುತ್ತಾರೆ ಅವು ಕೇವಲ ಒಂದು ವರ್ಷದಲ್ಲೇ ಮುಚ್ಚಿಹೋಗುತ್ತವೆ. ಆ ರಸ್ತೆಗಳನ್ನು ಎಲ್ಲಿ ಮಾಡಿತ್ತು ಎಂಬುದೂ ಕೂಡ ಕಾಣುವುದಿಲ್ಲ. ಆದ್ದರಿಂದ ಇನ್ನು ಮುಂದೆ ಈ ರಸ್ತೆಗಳನ್ನು ಮಾಡುವಾಗ ಸರ್ಕಾರದವರು ಎಷ್ಟೇ ದುಡ್ಡು ಖರ್ಚಾದರೂ ಪರವಾಗಿಲ್ಲ, ಒಂದೇ ಸಾರಿ ಪಕ್ಕಾ ರಸ್ತೆಗಳನ್ನಾಗಿ ಮಾಡುವುದು ಒಳ್ಳೆಯದು. ಹಾಗೆ ಮಾಡದೇ ಹೋದರೆ ಮತ್ತೆ ಮತ್ತೆ ಮಾಡಿದ ಕೆಲಸಗಳನ್ನೇ ಮಾಡುತ್ತಾ ಹೋಗಬೇಕಾಗುತ್ತದೆ. ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ, ಆದ್ದರಿಂದ ತಾವು ಇದನ್ನು ಗಮನದಲ್ಲಿಟ್ಟುಕೊಂಡು ಸರ್ವ ಪ್ರಯತ್ನವನ್ನೂ ಮಾಡಿ ವಿಶ್ವ ಬ್ಯಾಂಕ್‌ನಿಂದ ಸಹಾಯವನ್ನು ಪಡೆದು ಎಲ್ಲ ರಸ್ತೆಗಳನ್ನೂ ಒಂದೇಸಾರಿ ಪಕ್ಕಾ ರಸ್ತೆಗಳನ್ನು ಮಾಡಿದರೆ ಇದರಿಂದ ಸರ್ಕಾರಕ್ಕೂ ಹಣ ಉಳಿತಾಯವಾಗುತ್ತದೆ ಮತ್ತು ಮಾಡಿದ ಕೆಲಸವೂ ಕೆಲವು ದಿವಸದವರೆಗೆ ಉತ್ತಮವಾಗಿರುತ್ತದೆ. ನಮ್ಮ ಪಂಚವಾರ್ಷಿಕ ಯೋಜನೆಯು ಗುರಿ ಏನಿದೆ ಅದನ್ನು ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಪ್ರತಿಯೊಂದು ಕೆಲಸಕಾರ್ಯಗಳೂ ಕೂಡ ಅರ್ಧದಲ್ಲೇ ನಿಂತುಹೋಗುತ್ತವೆ ಎನ್ನುವ ಮಾತನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮೈನ್‌ಟನೆನ್ಸ್ ಆಫ್ ರೋಡ್ಸ್ ಬಗ್ಗೆ ಹೇಳುವುದಾದರೆ ಇದಕ್ಕಾಗಿ ಸುಮಾರು 16–18 ಕೋಟಿ ರೂಪಾಯಿ ಖರ್ಚಾಗಿದೆ. ಆದರೆ ಇಷ್ಟೊಂದು ಹಣ ಏನಾಗಿದೆ ಎಂಬುದನ್ನು ನೋಡುವುದಕ್ಕೆ ಸಾಧ್ಯವಾಗಿಲ್ಲ. ಜಿಲ್ಲಾ ರಸ್ತೆಗಳಂತೂ ಬಹಳ ಕೆಟ್ಟ ಸ್ಥಿತಿಯಲ್ಲಿವೆ. ಹಳ್ಳಿಗಾಡಿನ ರಸ್ತೆಗಳ ಸ್ಥಿತಿಯಂತೂ ಇನ್ನೂ ಕೆಟ್ಟು ನಿಂತಿದೆ. ಅಂದಮೇಲೆ ಇವುಗಳ ಮೈನ್‌ಟೆನೆನ್ಸ್ ಎಲ್ಲಿದೆ ಎಂಬುದನ್ನು ಕೇಳಬೇಕಾಗಿದೆ. ಮಾನ್ಯ ಸಚಿವರು ಇದನ್ನು ಗಮನದಲ್ಲಿಟ್ಟುಕೊಂಡು ಮೈನ್‌ಟೆನೆನ್ಸ್‌ಗೋಸ್ಕರ ಕೊಟ್ಟಿರತಕ್ಕ ಹಣವನ್ನು ಸರಿಯಾಗಿ ಉಪಯೋಗವಾಗುವಂತೆ ನೋಡಿಕೊಳ್ಳಬೇಕು. ಕರ್ನಾಟಕ ರೋಡ್ಸ್ ಅಂಡ್ ಬ್ರಿಡ್ಜಸ್ ಕಾರ್ಪೊರೇಷನ್ ಈಗ 10 ವರ್ಷಗಳ ಹಿಂದೆ ಪ್ರಾರಂಭವಾಯಿತು. ಅದು ಏನು ಕೆಲಸಮಾಡುತ್ತಿದೆ ಎಂಬುದು ಗೊತ್ತಿಲ್ಲ. ಹುಮ್ನಾಬಾದ್ ರಸ್ತೆಯನ್ನು ನ್ಯಾಷನಲ್ ಹೈವೇ ಆಗಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಹಿಂದೆ ನಾವು ಕೇಳಿದ್ದೇವೆ. ಇದು ತುಂಗಭದ್ರಾ ಭಾಗದಲ್ಲಿ ಬರುತ್ತದೆ. ಆದ್ದರಿಂದ ಆ ಭಾಗದ ಉದ್ಧಾರಕ್ಕಾಗಿ ಈ ನ್ಯಾಷನಲ್ ಹೈವೇಯನ್ನು ಮಾಡಲು ಆದಷ್ಟು ಬೇಗ ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರಕ್ಕೆ ತಾವು ಒತ್ತಾಯ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಮಾನ್ಯ ಉಪಾಧ್ಯಕ್ಷರೆ.—ಇನ್ನು ಕಟ್ಟಡಗಳ ಬಗ್ಗೆ ಹೇಳುವುದಾದರೆ, ಕಟ್ಟಡಗಳು ಮತ್ತು ರಸ್ತೆಗಳನ್ನು ತಾವು ಈ ವರ್ಷದ ಬಜೆಟ್‌ನಲ್ಲಿ ಸೇರಿಸಿದ್ದೇವೆಂದು ಹೇಳುತ್ತೀರಿ. ಆದರೆ ಅದು ಮಂಜೂರಾತಿಯಾಗಿ, ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಿಕ್ಕಬೇಕಾದರೆ ಮತ್ತೆ ಒಂದು ವರ್ಷವಾಗುತ್ತದೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅಂದರೆ ಈ ವರ್ಷದ ಕಾಮಗಾರಿ ಪಟ್ಟಿಯಲ್ಲಿರತಕ್ಕ ಕೆಲಸಗಳನ್ನು ಮುಂದಿನ ವರ್ಷ ಪ್ರಾರಂಭ ಮಾಡಬೇಕಾಗುತ್ತದೆ. ಆದರೆ ನಾವು ಏನು ತಿಳಿದುಕೊಳ್ಳುತ್ತೇವೆ ಎಂದರೆ ಈ ವರ್ಷದ ಕಾಮಗಾರಿ ಪಟ್ಟಿಯಲ್ಲಿ ಸೇರಿಸಿರುವುದನ್ನು ಈ ವರ್ಷವೇ ಸರ್ಕಾರದವರು ತೀವ್ರವಾಗಿ ಮಾಡುತ್ತಾರೆ, ನಮ್ಮ ಭಾಗಕ್ಕೆ ಅನುಕೂಲವಾಯಿತು ಎಂದು ಅಂದುಕೊಳ್ಳುತ್ತೇವೆ. ಆದರೆ ಈ ಪದ್ಧತಿ ಸರಿಯಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ, ಯಾವುದೇ ಕೆಲಸವನ್ನು ತಾವು ತೆಗೆದುಕೊಂಡರೂ 3 ತಿಂಗಳೊಳಗಾಗಿ ಆ ಕೆಲಸ ಕಾರ್ಯಗತವಾಗಲು ಅನುಕೂಲವಾಗುವಂತೆ ಅದಕ್ಕೆ ಸಂಬಂಧಪಟ್ಟ ಎಲ್ಲ ಮಂಜೂರಾತಿಗಳನ್ನೂ ಮಾಡಿಸಿಕೊಳ್ಳಬೇಕು. ಎಲ್ಲಿಯವರೆಗೆ ತಾವು ಈರೀತಿ ಮಾಡುವುದಿಲ್ಲ, ಅಲ್ಲಿಯವರೆಗೂ ಈ ತೊಂದರೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಅಲ್ಲದೆ ಈ ಇಲಾಖೆಯಿಂದ ರಾಜ್ಯದ ಜನತೆಗೆ ಯಾವುದೇ ಪ್ರಯೋಜನವೂ ಆಗುವುದಿಲ್ಲ. ಈ ದಿಸೆಯಲ್ಲಿ ತಾವು ಕೆಲಸಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ. ಈಗ ತಾವು ಏನು ಕಟ್ಟಡಗಳನ್ನು ಕೊಟ್ಟಿದ್ದೀರಿ ಇದರ ಬಗ್ಗೆ ನಾನು ಈಗಲೇ ನೇರವಾಗಿ ತಮ್ಮ ಮೇಲೆ ಯಾವುದೇ ಆಪಾದನೆಯನ್ನೂ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ತಮಗೂ ಕೂಡ ಕಾಲಾವಕಾಶ ಬೇಕಾಗುತ್ತದೆ. ತಾವು ಒಂದು ವರ್ಷವಾದರೂ ಆಡಳಿತವನ್ನು ನಡೆಸಬೇಕು. 1983–84ರ ಸಾಲಿನಲ್ಲಿ ಬೆಳಗಾಂ ಡಿವಿಜನ್‌ನ 4 ಜಿಲ್ಲೆಗಳಲ್ಲಿ ಏನು ಕಟ್ಟಡಗಳನ್ನು ತೆಗೆದುಕೊಂಡಿದ್ದೀರಿ ಅದರಲ್ಲಿ ತಾರತಮ್ಯ ಆಗಿದೆ ಎನ್ನುವ ಬಗ್ಗೆ ನಾನು ಕೆಲವು ಅಂಕಿ ಅಂಶಗಳನ್ನು ಕೊಟ್ಟು ಹೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಉಪಾಧ್ಯಕ್ಷರೆ, ಯಾವ ಸದಸ್ಯರು ಮಾತನಾಡುವಾಗಲೂ ಕೂಡ ನಾನು ಮಧ್ಯೆ ಪ್ರವೇಶ ಮಾಡಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಈಗ ಇದರ ಬಗ್ಗೆ ಒಂದು ಮಾತನ್ನು ಮಾತ್ರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಕಟ್ಟಡಗಳನ್ನು ತಾವು ತೆಗೆದುಕೊಳ್ಳುವುದಿಲ್ಲ, ಬೇರೆ ಬೇರೆ ಇಲಾಖೆಯವರು ತಮಗೆ ಇಂತಿಂಥ ಕಟ್ಟಡಗಳನ್ನು ಕಟ್ಟಿಕೊಡಿ ಎಂದು ಹಣವನ್ನು ನೀಡಿ ಪತ್ರವನ್ನು ಬರೆದರೆ ಅಂಥ ಕೆಲಸವನ್ನು ನಾವು ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಿಕೊಳ್ಳುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇನ್ನು ತಮ್ಮ ಇಲಾಖೆಗೆ ಬರುತ್ತೇನೆ. ತಮ್ಮ ಇಲಾಖೆಯ ಅಧಿಕಾರಿಗಳು ಬಹಳ ತಾರತಮ್ಯವನ್ನು ಮಾಡುತ್ತಿರುತ್ತಾರೆ. ಸೋಶಿಯಲ್ ಜಸ್ಟೀಸ್ ಕೊಡಬೇಕು. ನಮ್ಮ ಕಡೆ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ಸ್ ಕೆಲಸವಾಗುತ್ತಿಲ್ಲ. ಆದರೂ ಬಹಳ ಕಡಿಮೆಯಾಗಿ ಆಗುತ್ತಿದೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. ಏತಕ್ಕೆಂದರೆ, ಎಕ್ಸಿಕ್ಯುಟಿವ್ ಕೆಲಸ ಹೆಚ್ಚಾಗಿರುವುದರಿಂದ ಹೆಚ್ಚಿನ ಗಮನ ಕೊಟ್ಟಿರುವಂತೆ ಭಾಸವಾಗುತ್ತದೆ. ಅಧಿಕಾರಿಗಳು ಇಲ್ಲಿ ಬಹಳ ತಾರತಮ್ಯ ಮಾಡಿರುತ್ತಾರೆ. ಅಪ್ಪಣೆ ಕೊಟ್ಟರೆ ಅಂಕಿಅಂಶಗಳನ್ನು ಡಿಪಾರ್ಟ್‌ಮೆಂಟ್‌ವೈಸ್ ಹೇಳುತ್ತೇನೆ. ಹೇಳಲಿಕ್ಕೆ ವೇಳೆಯಿಲ್ಲವೆಂದು ಹೇಳುತ್ತಿರುವುದರಿಂದ ಇಷ್ಟುಮಾತ್ರ ಹೇಳಬಯಸುತ್ತೇನೆ. ಲೆಕ್ಕ ತೆಗೆದುಕೊಂಡರೆ ನಮ್ಮ ಭಾಗಕ್ಕೆ ಬಹಳಷ್ಟು ತಾರತಮ್ಯವಾಗಿದೆ. ನಿಮ್ಮ ಇಲಾಖೆಯವರು ನಿರ್ದೇಶನ ನೀಡಿ ಈ ರೀತಿ ಮಾಡಬಾರದೆಂದು ಸ್ಪಷ್ಟವಾಗಿ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, 1982–83ಕ್ಕೆ 10 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ 112 ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಮಾಡಬೇಕೆಂದು ಹೇಳಿದ್ದೀರಿ. ಒಂದೆರಡು ವರ್ಷದಲ್ಲಿ ವಿಶ್ವಬ್ಯಾಂಕ್‌ನಿಂದ ಸಹಾಯ ಪಡೆದು ಮಾಡುತ್ತೇವೆಂದು ಹೇಳುವಾಗ ಟೆಂಡರನ್ನು ಕರೆದು ಮಾಡಬೇಕೆ ಅಥವಾ ಯಾವರೀತಿ ನಿರ್ವಹಣೆ ಮಾಡಬೇಕೆಂಬುದರ ಬಗ್ಗೆ ಪರಿಶೀಲನಾ ಹಂತದಲ್ಲಿ ಇದೆ ಎಂದು ಹೇಳುತ್ತೀರಿ. ಮೈನರ್ ಇರಿಗೇಷನ್‌ಗೆ 1982–83–84ನೇ ಸಾಲಿನಲ್ಲಿ 15 ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಪ್ರೊವೈಡ್ ಮಾಡಿದ್ದೀರಿ. ಎಷ್ಟು ಟ್ಯಾಂಕ್‌ಗಳನ್ನು ತೆಗೆದುಕೊಂಡಿದ್ದೀರಿ ಎಂದರೆ ನಾಲ್ಕುನೂರು ಟ್ಯಾಂಕ್‌ಗಳನ್ನು ಷೆಡ್ಯೂಲ್ ಕಾಸ್ಟ್‌ನಲ್ಲಿ ಕಟ್ಟಬೇಕೆಂದು ಯೋಜನೆಯನ್ನು ಮಾರ್ಪಾಟು ಮಾಡಿದ್ದೀರಿ. ಈ ಯೋಜನೆಯಂತೆ ಗುಲ್ಬರ್ಗಾ ರಾಯಚೂರು ಬಳ್ಳಾರಿ ಮತ್ತು ಬೆಳಗಾಮ್, ಧಾರವಾಡ ಉತ್ತರ ಕನ್ನಡದ 8 ಜಿಲ್ಲೆಗಳು. ಇಷ್ಟಕ್ಕೂ ಟ್ಯಾಂಕ್‌ಗಳನ್ನು ಕೊಡಬೇಕೆಂದರೆ ನಾಲ್ಕುನೂರು ಮೈನರ್ ಇರಿಗೇಷನ್ ಟ್ಯಾಂಕ್‌ಗಳು ಆಗುತ್ತದೆ. ಈ ನಾಲ್ಕುನೂರು ಮೈನರ್ ಇರಿಗೇಷನ್ ಟ್ಯಾಂಕ್‌ಗಳಲ್ಲಿ 90 ಮಾತ್ರ 8 ಜಿಲ್ಲೆಗಳಿಗೆ ಕೊಟ್ಟಿರುತ್ತೀರಿ. ಯಾವ ಜಿಲ್ಲೆಗಳು ಬರಗಾಲದಿಂದ ನರಳುತ್ತಿವೆ, ಯಾವ ಜಿಲ್ಲೆಗಳು ಕೈಗಾರಿಕೆಗಳಲ್ಲಿ ಹಿಂದುಳಿದಿವೆ ಅಂಥ ಭಾಗಗಳಿಗೆ ಕೇವಲ 99 ಮೈನರ್ ಇರಿಗೇಷನ್ ಟ್ಯಾಂಕ್‌ಗಳನ್ನು ಪ್ರೊವೈಡ್ ಮಾಡಿದ್ದೀರಿ. ಬಾಕಿ ಜಾಗದಲ್ಲಿ ಬೇಕಾದಷ್ಟು ಅನುಕೂಲತೆ ಇರತಕ್ಕಂಥ ಕಡೆ 301 ಮೈನರ್ ಇರಿಗೇಷನ್ ಟ್ಯಾಂಕ್‌ಗಳನ್ನು ಕೊಟ್ಟಿರುತ್ತೀರಿ. ಇದನ್ನೆಲ್ಲ ಸರಿಯಾದ ರೀತಿಯಲ್ಲಿ ಗಮನಿಸಲಿಲ್ಲವೆಂದು ಹೇಳಬೇಕಾಗುತ್ತದೆ. ಈರೀತಿ ಮಾಡಿರತಕ್ಕಂಥದು ಒಂದುರೀತಿ ಡಿಸ್‌ಕ್ರಿಮಿನೇಷನ್ ಆಗಿದೆ ಎಂದು ತಮ್ಮ ಗಮನಕ್ಕೆ ತರಲು ಇಷ್ಟಪಟ್ಟು ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೇಜರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಸಪರೇಟ್ ಮಾಡಿ ಬಹಳ ವರ್ಷಗಳು ಆಯಿತು. ಅನೇಕ ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಂದ 50 ಪರ್ಸೆಂಟ್ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಲಿಕ್ಕೆ ಆಗಲಿಲ್ಲ. ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಂದ 1981ನೇ ಮಾರ್ಚ್‌ವರೆಗೆ ಅದರ ಪ್ರತಿಫಲ ಎಷ್ಟು ಸಿಗುತ್ತಿತ್ತು ಎಂದು ಹೇಳಬೇಕಾದರೆ 50 ಪರ್ಸೆಂಟ್, ಅದೇ ಮೇಜರ್ ಇರಿಗೇಷನ್ ಪೊಟೆನ್‌ಷಿಯಲ್ ತೆಗೆದುಕೊಂಡರೆ ದಿನೇ ದಿನೇ ಜಾಸ್ತಿಯಾಗುವುದರ ಬಗ್ಗೆ ಸರ್ಕಾರದವರು ಪ್ರಯತ್ನ ಮಾಡಲಿಲ್ಲ. ರಿವೈಸ್ಡ್ ಎಸ್ಟಿಮೇಟ್‌ಗಳನ್ನು ತಾಲ್ಲೂಕುವಾರು ಸರಿಯಾಗಿ ಅಪ್ರೂವ್ ಮಾಡಲಿಲ್ಲ. ಷೆಡ್ಯೂಲ್ ವರ್ಕ್‌ಗಳನ್ನು ತೆಗೆದುಕೊಳ್ಳುವುದು ನಿಧಾನವಾದ್ದರಿಂದ ಕಾಸ್ಟ್ ಇನ್‌ಕ್ರೀಸ್ ಆಗಿ ಕಾಸ್ಟ್ ಎಸ್ಕಲೇಷನ್ ಆಗಿ ಒರಿಜನಲ್ ಎಸ್ಟಿಮೇಟಿಗೆ ಮೂರು ನಾಲ್ಕು ಪಟ್ಟು ಜಾಸ್ತಿಯಾಗಿ ಅಭದ್ರತೆ ಉಂಟಾಗಿದೆ. ಮತ್ತೆ ಈ ಯೋಜನೆಗಳನ್ನು ತೆಗೆದುಕೊಳ್ಳಲು ಮಾನ್ಯ ಬೊಮ್ಮಾಯಿಯವರಿಗೆ ಕಾಗದ ಬರೆದಿರತಕ್ಕಂಥ ರೀತಿಯಲ್ಲಿ ಇರಿಗೇಷನ್ ಪ್ರಾಜೆಕ್ಟ್‌ಗಳ ಕೆಲಸಗಳನ್ನು ಜಾರಿಗೊಳಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಹೇಳಿದ್ದೇನೆ. ಇವತ್ತು ಕಾನೂನಿಗೆ ಅನುಗುಣವಾಗಿ ಯಾವುದೇ ಸರ್ಕಾರ ಕ್ರಮ ತೆಗೆದುಕೊಳ್ಳುವಾಗ ಈ ಮಾತನ್ನು ಹೇಳಬೇಕಾಗುತ್ತದೆ. ಕಾವೇರಿ ಬೇಸಿನ್ ಪ್ರಾಜೆಕ್ಟ್ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಒಂದು ವಿಶೇಷ ಪ್ರೋಗ್ರಾಮ್ ಹಾಕಿಕೊಂಡು ಕೆಲಸ ಮಾಡಬೇಕು. ನಮ್ಮ ವರುಣ ಕ್ಯಾನಲ್ ಕಾರ್ಯಕ್ರಮ ಏನು ಇದೆ ಅದಕ್ಕೆ ಇವತ್ತಿನವರೆಗೆ 304 ಕೋಟಿ ರೂಪಾಯಿಗಳು ಖರ್ಚಾಗಿದೆ. ಎಷ್ಟೋ ಕಷ್ಟಕಾರ್ಪಣ್ಯಗಳಿಂದ ದುಡ್ಡನ್ನು ತಂದರೂ, ಬರತಕ್ಕಂಥ ದುಡ್ಡಿನಲ್ಲಿ ನಮ್ಮ ಸರ್ಕಾರ ಈವತ್ತಿನವರೆಗೂ ಖರ್ಚುಮಾಡಿರತಕ್ಕಂಥದ್ದು 304 ಕೋಟಿ ರೂಪಾಯಿಗಳು. 304 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಕಬನಿಯಲ್ಲಿ ಕೇವಲ ನೀರಿನ ಶೇಖರಣೆಯನ್ನು ಮಾಡಿರುತ್ತೀರಿ. ಹೇಮಾವತಿಯಲ್ಲಿ ಕನ್‌ಸ್ಟ್ರಕ್ಷನ್ ಆಗುವ ರೀತಿಯಲ್ಲಿ ಇದೆ. ಕಬಿನಿ ಚಾನಲ್ ವರ್ಕ್ ಆಗುವುದರಲ್ಲಿ ಬಹಳ ತಡವಾಗುತ್ತಿದೆ. ಹೇಮಾವತಿ ಪ್ರಾಜೆಕ್ಟ್ ಕೆಲಸ ಕುಂಠಿತವಾಗಲು ಏನೋ ತಾಂತ್ರಿಕ ತೊಂದರೆ

ಇದೆ, ಇದೆಲ್ಲ ತೊಂದರೆಗಳನ್ನು ಸರಿಪಡಿಸುವುದಕ್ಕೆ ಈವತ್ತು ಸರ್ಕಾರದವರು ಹಣವನ್ನು ಖರ್ಚುಮಾಡ ಬೇಕಾಗಿದೆ. ಆದರೆ ಹೇಮಾವತಿ ಪ್ರಾಜೆಕ್ಟ್‌ಗಾಗಿ ಮುಂಚೆ 16.3 ಕೋಟಿ ಇದ್ದುದು ಇವತ್ತು 240 ಕೋಟಿ ರೂಪಾಯಿಗೆ ಹೋಗಿದೆ. ತಾವು ಖರ್ಚುಮಾಡಿರತಕ್ಕಂಥದ್ದು 340 ಕೋಟಿ ರೂಪಾಯಿಗಳು ಮಾತ್ರ. 130 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾದರೆ 240 ಕೋಟಿ ರೂಪಾಯಿಗಳು ತಗಲುತ್ತದೆ. ಇಷ್ಟೆಲ್ಲ ಹಣವನ್ನು ಖರ್ಚುಮಾಡಬೇಕಾದರೆ ಅನಾವಶ್ಯಕವಾಗಿ ಖರ್ಚಾಗುತ್ತಿರುವುದನ್ನು ಕಡಿಮೆ ಮಾಡಬೇಕಾಗಿದೆ. ಅನಾವಶ್ಯಕವಾದ ವೆಚ್ಚವನ್ನು ಕಡಿಮೆಮಾಡಿ ಕಾವೇರಿ ಬೇಸಿನ್ ಮೊದಲನೆ ಸ್ಟೇಜನ್ನು ಪೂರೈಸಿದರೆ ನಮ್ಮ ರಾಜ್ಯಕ್ಕೆ ಅವಶ್ಯಕವಾಗಿ ಬೇಕಾದಷ್ಟು ನೀರನ್ನು ಉಪಯೋಗಿಸಿ ಕೊಳ್ಳು ವುದಕ್ಕೆ ಸಾಧ್ಯವಾಗದೆ ಇರತಕ್ಕಂಥದ್ದು ನಮ್ಮ ದುರ್ದೈವದ ಸಂಗತಿಯಾಗಿದೆ. ತಮಿಳುನಾಡಿನವರು ಕಾವೇರಿಬೇಸಿನ್‌ನಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತಿರಬೇಕಾದರೆ ನಾವು ಖರ್ಚುಮಾಡಿರತಕ್ಕಂಥ ದುಡ್ಡು ಕೂಡ ಪಡೆಯಲು ಸಾಧ್ಯವಾಗುತ್ತಿಲ್ಲ. ಅನಾವಶ್ಯಕವಾಗಿ ಖರ್ಚಾಗುತ್ತಿರುವುದು ಏನು ಇದೆ, ಅದೆಲ್ಲವನ್ನು ನಾವು ಪ್ರಾಜೆಕ್ಟ್‌ಗಳಿಗೆ ಖರ್ಚುಮಾಡಿ ಅದರ ಉಪಯೋಗವನ್ನು ಪಡೆಯತಕ್ಕಂಥದ್ದು ಬಹಳ ಅವಶ್ಯವಿದೆ ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಕೃಷ್ಣಾ ಬೇಸಿನ್ ಪ್ರಾಜೆಕ್ಟ್ ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಪ್ರಾರಂಭ ಮಾಡಿದಾಗ 283.65 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಲಾಗಿತ್ತು. ಆದರೆ ಈವತ್ತಿನದಿವಸದಲ್ಲಿ 44 ಕೋಟಿ ರೂಪಾಯಿಗಳು ಈ ಅಪ್ಪರ್ ಕೃಷ್ಣಾಪ್ರಾಜೆಕ್ಟಿಗೆ ಖರ್ಚುಮಾಡಬೇಕಾಗಿದೆ. ಈವತ್ತಿನವರೆಗೆ ಖರ್ಚುಮಾಡಿರತಕ್ಕಂಥದ್ದು ಎಷ್ಟು ಎಂದರೆ ಸುಮಾರು ಮೂರುನೂರು ಕೋಟಿರೂಪಾಯಿಗಳು. ಇನ್ನೂ ಆರು ತಿಂಗಳಷ್ಟೊತ್ತಿಗೆ ಈ ಪ್ರಾಜೆಕ್ಟಿಗೆ 1,500 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ವರ್ಲ್ಡ್‌ಬ್ಯಾಂಕ್ ಏಯ್ಡ್‌ನಿಂದ ಈ ಕೆಲಸ ಆಗಬೇಕಾಗಿದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಹಳ ತೊಂದರೆಯಿಂದ ಸಾಗುತ್ತಿದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳೂ ಕೂಡ ನೋಡಿದ್ದಾರೆ, ಮಾನ್ಯ ಬೊಮ್ಮಾಯಿಯವರೂ ಕೂಡ ನೋಡಿದ್ದಾರೆ. ಇದು ಒಂದು ದೊಡ್ಡ ಪ್ರಾಜೆಕ್ಟ್ ಇದೆ. ಇದು ಇಷ್ಟು ಮಂದಗತಿಯಿಂದ ಸಾಗಲು ಏನು ಕಾರಣವೆನ್ನುವುದನ್ನು ಪತ್ತೆಹಚ್ಚಿ ಇದನ್ನು ಸರಿಪಡಿಸಲೇಬೇಕು. ಸರ್ಕಾರದವರು ಇದನ್ನು ಏತಕ್ಕೆ ಮಾಡುತ್ತಿಲ್ಲವೆನ್ನುವುದು ಗೊತ್ತಾಗುತ್ತಿಲ್ಲ. ಯಾವುದೇ ಸರ್ಕಾರ ಇರಲಿ, ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ, ಯಾವಾಗ ವಿಶ್ವಬ್ಯಾಂಕಿನಿಂದ ಸಾಲ ಪಡೆದುಕೊಂಡು ರಾಜ್ಯದ ಬೊಕ್ಕಸದಿಂದ ಹಣವನ್ನು ಪಡೆದುಕೊಂಡಮೇಲೆ ಅದನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡಬೇಕು. ಅದರಿಂದ ಪ್ರತಿಫಲ ಸಿಗಬೇಕು. ಆಪಾದನೆಗೆ ಒಳಗಾಗಿರತಕ್ಕಂಥವರು ಯಾರೇ ಇರಲಿ, ಜವಾಬ್ದಾರಿ ಇರತಕ್ಕಂಥ ಜನರು ಅವರನ್ನು ಪತ್ತೆಹಚ್ಚಿ ಸರಿಪಡಿಸಲೇಬೇಕು ಎನ್ನುವಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಈವತ್ತಿನದಿವಸ 1983ರ ಹೊತ್ತಿಗೆ 10 ಲಕ್ಷ ಎಕರೆ ಭೂಮಿಗೆ ನೀರನ್ನು ಕೊಡ ಬೇಕಾದ್ದು ಕೇವಲ 20 ಸಾವಿರ ಎಕರೆಗಳಿಗೂ ನೀರನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲವೆಂದು ಹೇಳುವು ದಾದರೆ, ಇದು ಎಷ್ಟೊಂದು ವಿಷಾದಕರವಾದ ಸಂಗತಿ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮತ್ತೊಂದು ವಿಷಯ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಈಗ ತಂದಿರತಕ್ಕಂಥ ಪಂಚಾಯತಿ ಸಿಸ್ಟಮ್ ಏನು ಇದೆ ಇದನ್ನು ಖಂಡಿತವಾಗಿಯೂ ತೆಗೆಯಬೇಕು. ಇದನ್ನು ತರುತ್ತೇವೆಂದು ಹೇಳಿರುವು ದರಿಂದ ಶರಾವತಿ ಕರ್ಮಕಾಂಡ ಜ್ಞಾಪಕಕ್ಕೆ ಬರುತ್ತದೆ. ವರ್ಲ್ಡ್ ಬ್ಯಾಂಕ್ ಏಯ್ಡ್ ತೆಗೆದುಕೊಳ್ಳ ಬೇಕಾದರೆ ಮಧ್ಯೆ ಕ್ಲಾಪ್ ಬಾಧಿತ್ತು. ಮತ್ತೆ ನಾವು ಏಯ್ಡ್ ತೆಗೆದುಕೊಳ್ಳಬೇಕೆಂದಾಗ ಪಂಚಾಯತಿ ಕ್ಲಾಸ್ ತೆಗೆದುಕೊಂಡುಬಂದರೆ, ಜನರಿಗೆ ಅನಾಹುತವಾಗುತ್ತದೆ, ರಾಜ್ಯಕ್ಕೆ ಅನಾಹುತವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವೊತ್ತು ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್‌ನ ಕೆಲಸಕ್ಕೆ ಸಂಬಂಧ

3-30 p.m.

ಪಟ್ಟಂತೆ 17 ಕೇಸ್‌ಗಳು ಆರ್ಬಿಟ್ರೇಷನ್‌ಗೆ ಹೋಗಿದ್ದು ಅದರಲ್ಲಿ 6 ಕೇಸ್‌ಗಳು ತೀರ್ಮಾನವಾಗಿವೆ. ಕೆಲವು ಕೇಸ್‌ಗಳಿಗೆ ಸಂಬಂಧಪಟ್ಟಂತೆ ವಿಚಿತ್ರವಾದಂಥ ಕ್ಲೇಮ್ಸ್ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಇದನ್ನು ತಾವು ಗಂಭೀರವಾಗಿ ಪರಿಶೀಲನೆ ಮಾಡಿ ನೋಡಬೇಕು. 24 ಜನ ಕಂಟ್ರಾಕ್ಟರ್‌ಗಳು ಏನಿ ದ್ದಾರೆ, ಅವರ ಯಾವ ಒಂದು ಇನ್‌ಫ್ಲೂಯೆನ್ಸ್‌ಗೂ ತಾವು ಬಲಿಯಾಗದೆ ಮತ್ತು ಅವರ ಯಾವ ಆಸೆ ಆಮಿಷಗಳಿಗೂ ಬಲಿಯಾಗದೆ ನಿರ್ದಾಕ್ಷಿಣ್ಯವಾಗಿ ಆರ್ಬಿಟ್ರೇಷನ್ ಅವರು ಕೊಟ್ಟ ಅವಾರ್ಡ್‌ನ್ನು ತಾವು ಒಪ್ಪಿಕೊಳ್ಳಬೇಕು. ಸಾಧ್ಯವಾದರೆ ಈ ವಿಚಾರವನ್ನು ಲೋಕೋಪಯೋಗಿ ಇಲಾಖೆ ಸೆಕ್ರೆಟರಿ, ಕಾನೂನೂ ಇಲಾಖೆ ಸೆಕ್ರೆಟರಿ ಮತ್ತು ಆರ್ಥಿಕ ಇಲಾಖೆ ಸೆಕ್ರೆಟರಿ ಅವರುಗಳಿಗೆ ಒಪ್ಪಿಸಿಬಿಡಿ. ಒಟ್ಟಿನಲ್ಲಿ ಈ ಪ್ರಾಜೆಕ್ಟ್‌ನ ಕೆಲಸ ಜಾಗ್ರತೆಯಿಂದ ಆಗಬೇಕು. ಈ ಪ್ರಾಜೆಕ್ಟ್‌ಗೆಂದು ಕೊಟ್ಟ ಸಿಮೆಂಟ್‌ನ್ನು ಕಳ್ಳತನದಲ್ಲಿ ಬೇರೆಡೆಗೆ ಸಾಗಿಸುತ್ತಿರುವುದನ್ನು ನಾನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಈ ಭಾಗಕ್ಕೆ ಭೇಟಿ ಕೊಟ್ಟ ದಿವಸವೇ ಎರಡು ಲಾರಿಗಳಲ್ಲಿ ಸಿಮೆಂಟ್ ಕಳ್ಳತನದಲ್ಲಿ ಮಹಾರಾಷ್ಟ್ರಕ್ಕೆ ಹೋಗಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದರ ಜೊತೆಗೆ ಈ ಪ್ರಾಜೆಕ್ಟ್‌ನ ಕೆಲಸಕ್ಕೆಂದು ಹುಣಸಿಗೆ

ಯಲ್ಲಿ ಸ್ಟಾಕ್ ಮಾಡಿದ ಸಿಮೆಂಟ್‌ನ್ನು ಹೇಮಾವತಿ ಪ್ರಾಜೆಕ್ಟ್ ಕೆಲಸಕ್ಕೆ ವರ್ಗಾವಣೆಮಾಡಿದ್ದಾರೆಂಬ ಸುದ್ದಿಯನ್ನೂ ಸಹ ನಾನು ಕೇಳಿದ್ದೇನೆ. ಇದರ ನಿಜಾಂಶವೇನೆಂಬುದನ್ನು ತಾವು ನಮಗೆ ತಿಳಿಸಬೇಕು.

ಇನ್ನು ಕಾರಂಜಾ, ಅಮರ್ಜಾ, ಬೆನ್ನಿತೊರಾ, ಅಪ್ಪರ್-ಮುಲ್ಲಾಮಾರಿ ಲೋಯರ್-ಮುಲ್ಲಾಮಾರಿ ಯೋಜನೆಗಳ ಕೆಲಸ ಯಾವಾಗ ಮುಗಿಯಬೇಕಾಗಿತ್ತೋ ಆ ಸಮಯದಲ್ಲಿ ಮುಗಿಯದಿರಲು ಕಾರಣವೇನೆಂದರೆ, ತಾವು ಸಾಕಷ್ಟು ಹಣವನ್ನು ಒದಗಿಸದಿರುವುದು ಈ ಯೋಜನೆಗಳಿಗೆ ಒಂದು ಕೋಟಿ, ಎರಡು ಕೋಟಿ, 70 ಲಕ್ಷ ಹೀಗೆ ಒದಗಿಸಿದರೆ ಜಾಗ್ರತೆ ಮುಗಿಯುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಪ್ರತಿ ವಿಷಯದ ಬಗ್ಗೆ ಯೂ ಇಲ್ಲಿ ಚರ್ಚೆ ಚೆನ್ನಾಗಿ ಆಗಲಿ ಎಂದು ಎಲ್ಲ ವಿವರಗಳನ್ನು ಒದಗಿಸಿದ್ದೇವೆ. ಮೊದಲೇ ತಮಗೆ ಪರ್‌ಫಾರ್ಮೆನ್ಸ್ ರಿಪೋರ್ಟ್‌ನ್ನು ಕೊಡಬೇಕಾಗಿತ್ತು. ಆದರೆ ಅದು ಪ್ರಿಂಟಾಗಿರಲಿಲ್ಲ. ಆದ್ದರಿಂದ ಈಗ ಎಲ್ಲ ರೀತಿಯ ಅಂಕಿಅಂಶಗಳನ್ನು ಕೊಟ್ಟಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇದು ಈಗತಾನೇ ಬಂದಿರುವುದರಿಂದ ನೋಡುವುದಕ್ಕಾಗಲಿಲ್ಲ. ನಮ್ಮ ಭಾಗದ ಯೋಜನೆಗಳಿಗೆ ತಾವು ಕಡಿಮೆ ಹಣ ಒದಗಿಸಿದರೆ ಅದು ಸಿಬ್ಬಂದಿಗಾಗಿಯೇ ಖರ್ಚಾಗಿಬಿಡುತ್ತದೆ. ಯೋಜನೆಗಳ ಪ್ರಗತಿ ಏನೂ ಆಗುವುದಿಲ್ಲ. ನಮ್ಮ ಭಾಗ ಬರಗಾಲ ಪೀಡಿತ ಪ್ರದೇಶವೆಂದು ಮುಖ್ಯಮಂತ್ರಿಗಳಾದಿಯಾಗಿ ಎಲ್ಲರೂ ಒಪ್ಪುತ್ತಾರೆ, ತಾವೂ ಸಹ ಒಪ್ಪುತ್ತೀರಿ. ಆದರೂ ಸಹ ತಾವು ಅಪ್ಪರ್-ಮುಲ್ಲಾಮಾರಿ ಮತ್ತು ಲೋಯರ್-ಮುಲ್ಲಾಮಾರಿ ಯೋಜನೆಗಳಿಗೆ 60-70 ಲಕ್ಷ ರೂಪಾಯಿಗಳನ್ನು ಒದಗಿಸಿದರೆ ಹೇಗೆ ? ಇದೆಲ್ಲಾ ಸಿಬ್ಬಂದಿಗಾಗಿಯೇ ಖರ್ಚಾಗುತ್ತದೆ. 42 ಕೋಟಿ ರೂಪಾಯಿಗಳ ವೆಚ್ಚದ ಕಾರಂಜಾ ಪ್ರಾಜೆಕ್ಟ್‌ಗೆ ಈ ವರ್ಷ 3 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇನ್ನು ಹತ್ತು ವರ್ಷಗಳಾದರೆ ಇದೇ ಪ್ರಾಜೆಕ್ಟ್‌ನ್ನು ಮುಗಿಸಲು ನೂರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದ್ದರಿಂದ ತಾವು ಜಾಸ್ತಿ ಹಣ ಒದಗಿಸುವುದರ ಮೂಲಕ ಈ ಪ್ರಾಜೆಕ್ಟ್‌ಗಳ ಕೆಲಸವನ್ನು ಮುಗಿಸಬೇಕೆಂದು ಮತ್ತು ರಿವೈಸ್ಡ್ ಎಸ್ಟಿಮೇಟ್‌ಗಳನ್ನು ಜಾಗ್ರತೆ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಾಧ್ಯವಾದರೆ ಒಂದೊಂದು ಪ್ರಾಜೆಕ್ಟ್‌ನ ಜವಾಬ್ದಾರಿಯನ್ನು ಒಬ್ಬೊಬ್ಬರು ಚೀಫ್-ಇಂಜಿನಿಯರ್‌ಗಳಿಗೆ ವಹಿಸಿಬಿಡಿ. ಇವರುಗಳು ಪ್ರತಿ ಕೆಲಸಕ್ಕೂ ಬೆಂಗಳೂರಿಗೆ ಬರುವುದಕ್ಕೆ ಬದಲು ಇದ್ದ ಜಾಗದಲ್ಲಿಯೇ ತೀರ್ಮಾನ ಕೈಕೊಳ್ಳಲು ಅಧಿಕಾರ ಕೊಡಿ. ಆಗ ಈ ಪ್ರಾಜೆಕ್ಟ್‌ಗಳ ಕೆಲಸ ಜಾಗ್ರತೆ ಮುಗಿಯುತ್ತದೆಯೇ ಹೊರತು, ಈಗಿನ ವ್ಯವಸ್ಥೆಯಲ್ಲಿಯಾದರೆ ಇನ್ನು 30-40 ವರ್ಷಗಳಾದರೂ ಇವುಗಳ ಕೆಲಸ ಮುಗಿಯುವುದಿಲ್ಲ ಮತ್ತು ಇವುಗಳ ಲಾಭ ಜನರಿಗೆ ಸಿಗುವುದಿಲ್ಲ.

ಇನ್ನು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಹರಿಜನ ಮತ್ತು ಗಿರಿಜನ ಹಾಗೂ ಇತರೇ ಹಿಂದುಳಿದ ವರ್ಗದ ನೌಕರರಲ್ಲಿ ಏನು ಒಂದು ಭಾವನೆ ಬಂದಿದೆ ಎಂದರೆ ತಮಗೆ ರಕ್ಷಣೆ ಮಾಡುವವರು ಯಾರೂ ಇಲ್ಲ, ತಮಗೆ ಎಲ್ಲಿಗೆ ಪೋಸ್ಟ್ ಮಾಡಿದರೂ ಸಹ ಹೇಳುವವರು ಕೇಳುವವರು ಯಾರೂ ಇಲ್ಲ ಎಂದು ಹೇಳುತ್ತಿರುವಂತಹ ಮಾತು ಕೇಳಿಬರುತ್ತಿದೆ. ಇದನ್ನು ಸರಿಪಡಿಸಲು ತಾವು ಏನು ಮಾಡುತ್ತೀರಿ ಎಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು. ತಾವು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಸರ್ಕಾರದ ರಿಜರ್ವೇಷನ್ ಪಾಲಿಸಿ ಪ್ರಕಾರ ಎಲ್ಲರಿಗೂ ಸೂಕ್ತ ಪ್ರಾತಿನಿಧ್ಯ ಸಿಗುವಂತೆ ತಾವು ನೋಡಿಕೊಳ್ಳಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಅಧಿಕಾರಕ್ಕೆ ಬಂದಮೇಲೆ ಯಾರಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ ಎಂಬುದನ್ನು ಹೇಳಿ ?

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾವು ಇಲ್ಲಿ ಯಾವುದೇ ವಿಚಾರ ಪ್ರಸ್ತಾಪ ಮಾಡಿದಾಗಲೂ ಸಹ ಮಾನ್ಯ ದೇವೇಗೌಡರು ಬಹಳ ಚಾಣಾಕ್ಷತನದಿಂದ ಉತ್ತರ ಕೊಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಮಾನ್ಯ ಸದಸ್ಯರು ಬಹಳ ಜವಾಬ್ದಾರಿಯುತರಾದ ಸದಸ್ಯರಾಗಿದ್ದಾರೆ. ಆದ್ದರಿಂದ ತಾವು ಏನಾದರೂ ಹೇಳುವುದಿದ್ದರೆ ಆಧಾರಸಹಿತವಾಗಿ ಹೇಳಿ. ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹರಿಜನ ಮತ್ತು ಗಿರಿಜನ ಹಾಗೂ ಹಿಂದುಳಿದ ವರ್ಗದವರಿಗೆ ಯಾವರೀತಿ ಅನ್ಯಾಯವಾಗಿದೆ ಮತ್ತು ಎಲ್ಲೆಲ್ಲಿ ಆಗಿದೆ ಎಂಬುದನ್ನು ದಯಮಾಡಿ ವಿವರಗಳ ಸಹಿತ ಹೇಳಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಹೇಳತಕ್ಕಂಥ ಮಾತಿನ ತಾತ್ಪರ್ಯವಾದರೂ ಇಷ್ಟೆ, ಸರ್ಕಾರದ ರಿಜರ್‌ವೇಷನ್ ಪಾಲಿಸಿ ಪ್ರಕಾರ ತಮಗೆ ನೌಕರಿ ಸಿಗುತ್ತಿಲ್ಲವೆಂಬ ಭಾವನೆ ಏನು ಕೆಲವರಲ್ಲಿ ಬಂದಿದೆ, ಆ ಭಾವನೆಯನ್ನು ತಾವು ಹೋಗಲಾಡಿಸಬೇಕು ಮತ್ತು ಇದನ್ನು ತಾವು ಕಾರ್ಯರೂಪದಲ್ಲಿ ತೋರಿಸಬೇಕೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸುತ್ತೇವೆಂದು ಹೇಳಿದ್ದಾರೆ. ಅದರಂತೆ

ಸಾಮಾಜಿಕ ನ್ಯಾಯ ದೊರಕದಿದ್ದರೆ ಏನು ಪ್ರಯೋಜನ ? ಆದ್ದರಿಂದ ನಿಮ್ಮ ಇಲಾಖೆಯಲ್ಲಿಯೂ ಈ ಸಮಾಜಿಕ ನ್ಯಾಯ ಸಿಗಬೇಕು ನಮ್ಮನ್ನು ಕೇಳುವವರು ಯಾರೂ ಇಲ್ಲವೆಂಬ ಭಾವನೆ ಈ ಜನರಲ್ಲಿ ಬರಬಾರದೆಂದು ಹೇಳುತ್ತೇನೆ.

ಇನ್ನು ಸಸ್ಪೆನ್‌ಷನ್ ಮತ್ತು ರಿವೊಕೇಷನ್ ಬಗ್ಗೆ ನಾನು ಕಳೆದ ಸಲ ಒಂದು ಅಲ್ಪ ಕಾಲಾವಧಿ ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ದೇವೇಗೌಡರು ಉತ್ತರವಾಗಿ ಅನೇಕ ವಿವರಗಳನ್ನು ಕೊಟ್ಟಿದ್ದರು. ಇದೇ ಮಾನ್ಯ ದೇವೇಗೌಡರು ವಿರೋಧಪಕ್ಷದಲ್ಲಿದ್ದಾಗ ಬಹಳ ನಿಖರವಾಗಿ ಮಾತನಾಡುತ್ತಿದ್ದರು ಮತ್ತು ರೋಷಾವೇಶದಿಂದ ನಮ್ಮ ಸರ್ಕಾರವನ್ನು ಅಟ್ಯಾಕ್ ಮಾಡುತ್ತಿದ್ದರು. ಯಾವುದೇ ನಾರಮ್ಸ್ ಇಟ್ಟು ಕೊಂಡು ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿದ್ದರು. ಈಗ ತಮ್ಮ ಕೈಯಲ್ಲಿಯೇ ಅಧಿಕಾರವಿರುವುದ ರಿಂದ ಈ ಮೊದಲು ತಾವು ಹೇಳುತ್ತಿದ್ದ ರೀತಿಯಲ್ಲಿಯೇ ಏತಕ್ಕೆ ಕೆಲಸ ಮಾಡಬಾರದು ? ಈ ಕಡೆ ಇದ್ದುಕೊಂಡು ತಾವು ಏನು ಪ್ರತಿಪಾದನೆ ಮಾಡುತ್ತಿದ್ದಿರೋ ಅದನ್ನೇ ಈಗ ನಾವು ಮಾಡುತ್ತಿದ್ದೇವೆ. ಕ್ಯಾಬಿನೆಟ್‌ನಲ್ಲಿ ತಾವು ಬಹಳ ಶಕ್ತಿವಂತ ಮಂತ್ರಿಗಳಾಗಿದ್ದೀರೆಂಬ ಮಾತನ್ನು ನಾನು ಕೇಳಿದ್ದೇನೆ. I hope he has not become the prisoner of bureaucracy.

ಉಪಾಧ್ಯಕ್ಷರು.—ತಾವು ಜಾಗ್ರತೆ ಮುಗಿಸಿಬಿಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಮಾತನಾಡುತ್ತಾ, ಮಾನ್ಯ ಮಂತ್ರಿಗಳ ಮೇಲೆ ಕಟುವಾದಂಥ ಟೀಕೆ ಮಾಡುತ್ತಾ, ಹಿಂದೆ ಮಾನ್ಯ ದೇವೇಗೌಡರು ವಿರೋಧಪಕ್ಷದಲ್ಲಿದ್ದಾಗ ಇದ್ದಂಥ ಧೈರ್ಯ ಅವರು ಮಂತ್ರಿಯಾದ ಮೇಲೆ ಎಲ್ಲಿ ಹೋಯಿತು ಎಂದು ಕೇಳಿದರು. ಆದರೆ ಆ ಸ್ಥಾನದಿಂದ ಈ ಸ್ಥಾನಕ್ಕೆ ಬಂದಕೂಡಲೇ ಜವಾಬ್ದಾರಿ ಜಾಸ್ತಿಯಾಗುತ್ತದೆ. ಧೈರ್ಯ ಕಡಿಮೆಯಾಗು ತ್ತದೆ. ಈ ಒಂದು ಕಷ್ಟಸುಖವನ್ನು ನೀವೂ ಸಹ ಅನುಭವಿಸಿದ್ದೀರಿ. ಈಗ ನೀವು ಆ ಕಡೆ ಇದ್ದು ಕೊಂಡು ಧೈರ್ಯವಾಗಿ ಮಾತನಾಡುತ್ತಿದ್ದೀರಿ, ಇದರಲ್ಲಿರುವ ವ್ಯತ್ಯಾಸ ಅಷ್ಟೆ;

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಧೈರ್ಯವಾಗಿಯೇ ಇದ್ದೇವೆ. ಇದರಲ್ಲಿ ಲವಲೇಶ ಕೂಡ ವ್ಯತ್ಯಾಸವಾಗಿಲ್ಲವೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ತಾವು ಜಾಗ್ರತೆ ಮುಗಿಸಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಲೋಕೋಪಯೋಗಿ ಇಲಾಖೆಯಲ್ಲಿ ಕೆಲವು ಅಧಿಕಾರಿ ಗಳನ್ನು ಸಸ್ಪೆಂಡ್ ಮಾಡಿದರು. ಯಾವುದೇ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದಮೇಲೆ ರೀಇನ್‌ಸ್ಟೇಟ್ ಮಾಡಬೇಕು. ಚಾರ್ಜ್‌ಷೀಟ್ ಆದಮೇಲೆ ರೀಇನ್‌ಸ್ಟೇಟ್ ಮಾಡಬಾರದೆಂದು ರೂಲ್ ಇದೆ. ಕೆಲವರಿಗೆ ಚಾರ್ಜ್‌ಷೀಟ್ ಆಯಿತು, ಟ್ರಯಲ್‌ಕೋರ್ಟ್‌ನಲ್ಲಿ ಕೇಸ್ ಇರುವಾಗ ರೀಇನ್‌ಸ್ಟೇಟ್ ಮಾಡಿದ್ದಾರೆ. ಎಲ್ಲರಿಗೂ ಇದೇರೀತಿ ಏತಕ್ಕೆ ಮಾಡಬಾರದು ? ಯಾವ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಿ ರುತ್ತಾರೆ ಅಂತಹವರಿಗೆ ರೀಇನ್‌ಸ್ಟೇಟ್ ಮಾಡಬೇಕೆಂದು ಶಾಸಕರು ಬರೆಯುತ್ತಾರೆ, ಬೇರೆಯವರಿಗೆ ಮಾಡಬಹುದು, ಆದರೆ ಎಸ್.ಸಿ. ಮತ್ತು ಎಸ್.ಟಿ. ಬ್ಯಾಕ್‌ವರ್ಡ್ ಕಾಸ್ಟ್‌ನವರಿಗೆ ಮಾಡುವುದಕ್ಕೆ ಬರು ವುದಿಲ್ಲ. ಈ ವಿಷಯವಾಗಿ ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದಾರೆ. ಅನೇಕ ಜನರಿಗೆ ಟ್ರಯಲ್ ಕೋರ್ಟ್‌ನಲ್ಲಿ ಕೇಸು ಇರುವಾಗ ರೀಇನ್‌ಸ್ಟೇಟ್ ಮಾಡಿದ್ದಾರೆ. ಅದೇ ಎಸ್.ಸಿ. ಮತ್ತು ಎಸ್.ಟಿ. ಬ್ಯಾಕ್‌ವರ್ಡ್ ಕಾಸ್ಟ್‌ನವರಿಗೆ ಏತಕ್ಕೆ ಮಾಡಬಾರದು ? ಹಿಂದೆ ಕೂಡ ಹರಿಜನರಿಗೆ ತೊಂದರೆಯಾದಾಗ ನಮ್ಮ ಸರ್ಕಾರವಿದ್ದಾಗಲೂ ನಾನು ಇದನ್ನು ಪ್ರತಿಭಟನೆ ಮಾಡಿದ್ದೇನೆ, ಇದು ಮಾನ್ಯ ದೇವೇಗೌಡರಿಗೂ ಗೊತ್ತಿದೆ. ಇದನ್ನು ಸರಿಪಡಿಸಬೇಕು ಮತ್ತು ತಡೆಹಿಡಿಯಬೇಕು. ತಾವು ಜನಪ್ರಿಯ ಸರ್ಕಾರವೆಂದು ಹೇಳಿಕೊಳ್ಳುತ್ತೀರಿ, ಇದನ್ನೆಲ್ಲಾ ಸರಿಪಡಿಸಿ ಸರಿಯಾದ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತಿದ್ದೇನೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಿಂದೆ ಐ.ಎ.ಎಸ್. ಅಂಡ್ ಐ.ಪಿ.ಎಸ್. ಅಧಿಕಾರಿಗಳು ಮತ್ತು ಲೋಕೋಪಯೋಗಿ, ರೆವಿನ್ಯೂ ಇಲಾಖೆಯ ಅಧಿಕಾರಿಗಳ ಮನೆಗಳ ಮೇಲೆ ರೈಡ್ ಆಗಿತ್ತು, ಅವರನ್ನು ಸಸ್ಪೆಂಡ್ ಸಹ ಮಾಡಲಾಗಿತ್ತು. ನೀವು ಅಧಿಕಾರಕ್ಕೆ ಬಂದಮೇಲೆ ಎಷ್ಟು ಜನ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳ ಮತ್ತು ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ ಕ್ರಮ ತೆಗೆದುಕೊಂಡಿದ್ದೀರಿ; ಸಸ್ಪೆಂಡ್ ಮಾಡಿದ್ದೀರಿ–ಇದನ್ನೆಲ್ಲಾ ಕೇಳಬಾರದಾ ? ಮಾನ್ಯ ಮಂತ್ರಿಗಳು ಈ ವಿಷಯಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಯಾರಿಗೂ ತಾರತಮ್ಯ ಮಾಡಬಾರದು. ಎಲ್ಲರಿಗೂ ನ್ಯಾಯ ಸಿಗತಕ್ಕ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ.

ಇವತ್ತು ತಾವು ಮಂತ್ರಿಗಳಾಗಿದ್ದೀರಿ, 20 ವರ್ಷಗಳಿಂದ ಹೊಳೆನರಸೀಪುರ ಕ್ಷೇತ್ರದಿಂದ ಆರಿಸಿ ಬಂದು ಶಾಸಕರಾಗಿದ್ದೀರಿ. ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾದರೂ ತಾವು ಒಂದು ಪಕ್ಷಕ್ಕೆ, ಒಂದು ಜನಾಂಗಕ್ಕೆ ಸೇರಿದ ಮಂತ್ರಿಗಳೆಂದು ತಿಳಿದುಕೊಳ್ಳಬಾರದು, ತಾವು ಇಡೀ ರಾಜ್ಯದ ಮಂತ್ರಿಗಳು, ಇವತ್ತು ಏನೊಂದು ಅಭಿಪ್ರಾಯ ಬಂದಿದೆ ಅಂದರೆ, ನಮ್ಮನ್ನು ಯಾರು ಕೇಳುವವರೇ

ಇಲ್ಲ ಎನ್ನುವ ಒಂದು ಭಾವನೆ ಅದರಲ್ಲೂ ಲೋಕೋಪಯೋಗಿ ಇಲಾಖೆಯಲ್ಲಿ ಬಂದಿರುವಾಗ ಇವತ್ತು ತಾವು ತಮ್ಮ ಕಾರ್ಯಾಚರಣೆಯಲ್ಲಿ ನಡೆವಳಿಕೆಯಲ್ಲಿ ಎಲ್ಲರೂ ಒಂದೇ ಎಂದು ತಿಳಿದುಕೊಳ್ಳಬೇಕು. ತಾವು ರಾಜ್ಯದ ಮಂತ್ರಿಗಳು ಒಂದು ಜನಾಂಗಕ್ಕೆ, ಒಂದು ಪಕ್ಷಕ್ಕೆ, ಒಂದು ಕ್ಷೇತ್ರಕ್ಕೆ ಮಂತ್ರಿಗಳಲ್ಲ. ರಾಜ್ಯದ ಎಲ್ಲಾ ಜನರ ಪ್ರೀತಿ ಗೌರವ ಇಟ್ಟುಕೊಂಡು ಹೋಗಬೇಕು. ನಾನು ಈಗ ಆಪಾದನೆಗಳನ್ನು ಮಾಡ ಲಿಕ್ಕೆ ತಯಾರಾಗಿಲ್ಲ, ನೀವು ಬಂದು 8 ತಿಂಗಳಾಗಿದೆ. ಅದಕ್ಕೆ ಟೈಮ್ ಬರುತ್ತದೆ. ಈಗ ಏನೊಂದು ಅಭಿಪ್ರಾಯ ಮೂಡಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಮಾಡತಕ್ಕ ಕೆಲಸ ವನ್ನು ಸರಿಯಾಗಿ ಮಾಡಿ ಎಂದು ಹೇಳುತ್ತೇನೆ. ಮಾನ್ಯ ದೇವೇಗೌಡರು ಮಾತನಾಡುವಾಗ ಒಂದೆರಡು ಮಾತುಗಳನ್ನು ಪ್ರಸ್ತಾಪಮಾಡಿದ್ದಾರೆ, ಜವಾಬ್ದಾರಿ ಇಲ್ಲ ಎನ್ನತಕ್ಕ ಮಾತನ್ನು ಪ್ರಸ್ತಾಪಮಾಡಿದ್ದಾರೆ. ನನಗೆ ಜವಾಬ್ದಾರಿ ನಿಮಗಿಂತಲೂ ಕಡಿಮೆ ಇಲ್ಲ. ಯಾವುದೇ ಆಡಬಾರದ ಮಾತನ್ನು ಹೇಳಿಲ್ಲ, ಏನನ್ನು ಹೇಳಬೇಕಾದರೂ ನಿಮಗಿಂತ ಯಾವುದರಲ್ಲೂ ಕಡಿಮೆ ಇಲ್ಲ. ಅಷ್ಟೇ ಜವಾಬ್ದಾರಿಯಿಂದ, ಗೌರವದಿಂದ, ಅಷ್ಟೇ ದಕ್ಷತೆಯಿಂದ, ಹೇಳುತ್ತೇನೆ.

Mr. Deputy Speaker.—That explanation is not required here.

ಶ್ರೀ ಗೋವಿಂದ ಪಿ. ಒಡೆಯರಾಜ್.—ಜವಾಬ್ದಾರಿ ಇಲ್ಲದೆ ಸದನದಲ್ಲಿ ಏನನ್ನೂ ಹೇಳುವುದಿಲ್ಲ. ಬೇಕಾದಷ್ಟು ಸಾಧನಗಳು, ಸಲಕರಣೆಗಳು ಮದ್ದು ಗುಂಡುಗಳಿವೆ, ನೀವು ಅಧಿಕಾರಕ್ಕೆ ಬಂದು ಕೇವಲ 8 ತಿಂಗಳುಗಳಾಗಿವೆ, ನಿಮಗೆ ತೊಂದರೆ ಕೊಡುವುದಕ್ಕೆ ಹೋಗುವುದಿಲ್ಲ. ಸನ್ನಿವೇಶ ಬಂದರೆ ಯುದ್ಧಕ್ಕೆ ತಯಾರಾಗಿದ್ದೇವೆ. ಇಷ್ಟು ಗಂಭೀರವಾದ ಸದನದ ಗೌರವ-ಘನತೆಯನ್ನು ಕಾಪಾಡಿ ಕೊಳ್ಳುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಇದೇ ಮಾತನ್ನು ತಮ್ಮ ಕಡೆಯ ಪಕ್ಷ ದವರಿಗೆ ಹೇಳಿ. ಈ ಸದನದ ಗುಣಮಟ್ಟವನ್ನು ಕೆಳಕ್ಕೆ ಇಳಿಸಬಾರದೆಂದು ಹೇಳಿ. ತಮಗೆ ವಿಚಾರಣೆ ಮಾಡಲಿಕ್ಕೆ ಇಷ್ಟವಿದ್ದರೆ ಮಾಡಿ, ನಾನು ವಿವರಗಳನ್ನು ಕೊಡುತ್ತೇನೆ.

Mr. Deputy Speaker.—That was completed. Why do you want to raise that matter again. I have permitted you to talk on the subject. ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇಲ್ಲಿ ವಿವರಗಳು ಇವೆ.

Mr. Deputy Speaker.—You can give those particulars at appropriate time. This is not the time. Please conclude.

ಶ್ರೀ ಗೋವಿಂದ ಪಿ. ಒಡೆಯರಾಜ್.—ಏತಕ್ಕೆ ಈ ಮಾತನ್ನು ಹೇಳಬೇಕಾಯಿತು ಅಂದರೆ ನಿನ್ನೆ ಪರ್ಟಿಕ್ಯುಲರ್ಸ್ ಕೊಡಿ ಎಂದು ಕೇಳಿದರು.

ಶ್ರೀ ಎಚ್.ಡಿ. ದೇವೇಗೌಡ.—ಹೇಳಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನೀವೂ ಕೂಡ ಶಾಸಕರಾಗಿದ್ದಾಗ ಏನು ಹೇಳಿದ್ದೀರಿ ಎನ್ನುವ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಹರಿಜನ ಗಿರಿಜನರಿಗೆ ಅನ್ಯಾಯ ವಾಗಿದೆ. ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಿದೆ ಎಂದು ಕಾಗದ ಬರೆದಿದ್ದೀರಿ. ನಾವು ಕೂಡ ಅದೇ ರೀತಿ ಶಾಸಕರಾಗಿ ಏನು ಕೆಲಸ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—"ಜನತಾ ಪಕ್ಷದ ಶಾಸಕರು ದುಡ್ಡು ತೆಗೆದುಕೊಂಡು ವರ್ಗ ಮಾಡಿಸುತ್ತಾ ರೆಂದು ಹೇಳಿದ್ದೀರಿ" ಅದು ವರದಿಯಾಗಿದೆ. ನಿರ್ದಿಷ್ಟವಾದ ಆಪಾದನೆಗಳು ಏನಾದರು ಇದ್ದರೆ ಕೊಡಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅದು ನಿಮ್ಮ ಅಭಿಪ್ರಾಯ. ಪಾವಗಡದಲ್ಲಿ ಜೂನಿಯರ್ ಇಂಜಿನಿಯರ್ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಸದಾಶಿವರೆಡ್ಡಿ, ಲಿಂಗಪ್ಪ ಮತ್ತು ನಾಗ ರಾಜ್ ಅವರನ್ನು ವರ್ಗಮಾಡಿದ್ದೀರಿ, ಪುನಃ ರೀಇನ್‌ಸ್ಟೇಟ್ ಆಗಿದೆ. ಇನ್ನೊಂದು ಉದಾಹರಣೆ ಕೊಡುತ್ತೇನೆ, ತಾವು ತನಿಖೆ ಮಾಡಿಸಬೇಕು, ನಾವು ಅದಕ್ಕೆ ಸಿದ್ಧವಾಗಿದ್ದೇವೆ. ತಾವು ತನಿಖೆ ಮಾಡಿಸಬೇಕು ನಾನು ಲಿಸ್ಟ್ ಕೊಡುತ್ತೇನೆ. ತಾವು ಸಿ.ಬಿ.ಐ. ಎನ್‌ಕ್ವಾಯರಿ ಮಾಡಿಸಬೇಕು. ನಮ್ಮ ಸ್ಟೇಟ್ ಸಿ.ಒ.ಡಿ. ತನಿಖೆ ಮಾಡಿದರೆ ಆಗುವುದಿಲ್ಲ, ನಿಮ್ಮ ಡಿಪಾರ್ಟ್‌ಮೆಂಟ್‌ನವರೇ ಮಾಡುವುದಕ್ಕೆ ಆಗುವುದಿಲ್ಲ. ಸಿ.ಬಿ.ಐ. ಎನ್‌ಕ್ವಾಯರಿ ಮಾಡಲಿಕ್ಕೆ ಮುಖ್ಯ ಮಂತ್ರಿಗಳು ಪತ್ರ ಬರೆಯಿರಿ ಅಂದರೆ ಪತ್ರ ರೆಡಿ ಇದೆ. I will place the materials before the Committee let the Hon'ble Minister appoint a Committee except the State agency. This is what I want to say. Thank you very much.

ಶ್ರೀ ಎಚ್.ಡಿ. ದೇವೇಗೌಡ.—ಮದ್ದು ಗುಂಡು ತುಪಾಕಿ ಇಟ್ಟುಕೊಂಡಿದ್ದೇವೆ ಟೈಮ್ ಸಿಕ್ಕಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ, ಬಹಳ ಶ್ರಮಪಟ್ಟು ಹಾರಿಸಿದ್ದಾರೆ, ವರ್ಗದಲ್ಲಿ ಜನತಾ ಶಾಸಕರು

ದುಡ್ಡು ಮಾಡಿದ್ದಾರೆಂದು. ಮೆಟಿರಿಯಲ್ ಇದೆ ಎಂದು ಹೇಳುತ್ತಿದ್ದಾರೆ; ಶಾಸಕರು ಹಣ ಮಾಡಿದ್ದಾರೆಂಬುದಕ್ಕೆ ಮೆಟಿರಿಯಲ್ ಯಾವುದು ? ಸರ್ಕಾರ ಹೊರಡಿಸಿರತಕ್ಕ ಮೂರು ನೋಟಿಫಿಕೇಷನ್ಸ್ ಹಿಡಿದುಕೊಂಡು Let him make specific charge that such and such an M.L.A. is involved in the corruption charges while effecting these transfers. I am prepared to give my consent. My Chief Minister is also here. This Government has no moral right to continue if we have collected money from the Officers. Let him come out with the materials.

Sri Govinda P. Vodeyaraj.—I am not prepared to divulge the information here.

Sri H. D. Devegowda,—I am not prepared to accept his plea as long as the materials are not placed here. I can even say that it is an irresponsible statement.

Sri Govinda P. Vodeyaraj.—I refute this statement. It is a responsible statement.

Mr. Deputy Speaker.—If you have got any specific instance that such an MLA has made money through transfers, please give the list. Please give his name. Mention it. But, why do you....

(Interruptions)

Sri Govinda P. Vodeyaraj.—I want CBI enquiry to prove into the mass transfers.

(Interruptions)

Mr. Deputy Speaker.—You make specific allegation what the Hon'ble Member should understand is, whenever you make submissions, you make it with due responsibility.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಯಾವ ವಿಷಯದ ಮೇಲೆ ನಾವು ಸಿಬಿಐ ತನಿಖೆಯನ್ನು ಮಾಡಿಸಬೇಕು. ಮಾನ್ಯ ಸದಸ್ಯರಿಗೆ ಅದರ ಬಗ್ಗೆ ಯಾವುದಾದರೊಂದು ಮಾಹಿತಿ ಇದ್ದರೂ ಕೂಡ ನಮಗೆ ಕೊಟ್ಟರೆ ನಾವು ಆಗ ಸಿಬಿಐ ಎನ್‌ಕ್ವೈರಿ ಮಾಡಿಸಬಹುದು. On behalf of the Chief Minister I would like to tell the House that to send the matter for the CBI enquiry. which is a central agency, the Government is ready for it. If he has got courage, let him give details about it.

Sri Govinda P. Vodeyaraj.—I have got the courage. That is why I am telling. You order for the CBI enquiry. I will prove that.

Sri H.D. Devegowda.—On what charge should we order ? He cites Government notification. Is it correct ?

ಶ್ರೀ ಕೆ. ಜಿ. ಮಹೇಶ್ವರಪ್ಪ (ಮಾಯಕೊಂಡ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಕೆಲವಾರು ಮುಖ್ಯವಾದಂಥ ವಿಷಯಗಳ ಬಗ್ಗೆ ಮಾತನಾಡಬೇಕೆಂದು ನಿಂತಿದ್ದೇನೆ. ಮೊಟ್ಟಮೊದಲನೆಯದಾಗಿ ಹೇಳುವುದಾದರೆ, ನಮ್ಮ ರಾಜ್ಯದ ವಿಸ್ತೀರ್ಣದಲ್ಲಿ ಶೇಕಡ 98ರಷ್ಟು ಭಾಗ ಗ್ರಾಮಾಂತರ ಪ್ರದೇಶಗಳಿಂದ ಕೂಡಿದೆ. ಶೇಕಡ 76ರಷ್ಟು ಜನಸಂಖ್ಯೆ ಗ್ರಾಮಾಂತರ ಪ್ರದೇಶದಲ್ಲಿದೆ. ಆದರೆ ಗ್ರಾಮಾಂತರ ಪ್ರದೇಶಗಳಿಗೆ ಆಗಿರುವಂಥ ರಸ್ತೆಗಳ ನಿರ್ಮಾಣ ತೆಗೆದುಕೊಂಡರೆ, ಬಹಳ ಕಡಿಮೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ನಮ್ಮ ರಾಷ್ಟ್ರದ ಗ್ರಾಮಾಂತರ ರಸ್ತೆಗಳ ಅಭಿವೃದ್ಧಿಯ ಬಗ್ಗೆ ತೆಗೆದುಕೊಳ್ಳುವುದಾದರೆ, ಕೇಂದ್ರ ಸರ್ಕಾರದ ವತಿಯಿಂದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ, ಆ ಕಾರ್ಯಕ್ರಮವೆಂದರೆ, ಎಂ.ಎನ್.ಪಿ. ಅಂದರೆ ಮಿನಿಮಮ್ ನೀಡ್ ಪ್ರೋಗ್ರಾಂ ಎಂದು ಆದರೆ ಈ ಯೋಜನೆಗೆ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 20 ಕೋಟಿ ರೂಪಾಯಿಗಳನ್ನು

ಖರ್ಚು ಮಾಡತಕ್ಕಂಥ ಒಂದು ಕಾರ್ಯಕ್ರಮ ಇತ್ತು. ಈ ಯೋಜನೆಯಲ್ಲಿ ಸುಮಾರು 501 ದೊಡ್ಡ ಗ್ರಾಮಗಳಿಗೆ ರಸ್ತೆ ಸೌಕರ್ಯವನ್ನು ಕಲ್ಪಿಸಿಕೊಡುವುದು ಮತ್ತು 1500 ಚಿಕ್ಕಗ್ರಾಮಗಳಿಗೆ ರಸ್ತೆ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಇದೆ. ಆದರೆ ಈ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಎಷ್ಟು ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿತ್ತೋ ಅಷ್ಟು ಪ್ರಯೋಜನ ಪಡೆದುಕೊಳ್ಳಲಿಲ್ಲ. 5ನೆ ಪಂಚವಾರ್ಷಿಕ ಯೋಜನೆಯಲ್ಲಿಟ್ಟಿರತಕ್ಕಂಥ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಯೇ ಎನ್ನುವುದನ್ನು ಕೂಡ ನಾವು ನೋಡಬೇಕಾಗುತ್ತದೆ. 1982ನೇ ಮಾರ್ಚಿ 31ನೇ ತಾರೀಖಿಗೆ ನಾವು ಸುಮಾರು 12.66 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಂತರ 1982-83ರ ವೇಳೆಗೆ ಸುಮಾರು 3.92 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೆ ನಾನು ಒಟ್ಟಿನಲ್ಲಿ ಹೇಳುವುದಾದರೆ, 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಪ್ರಮಾಣದ ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅಷ್ಟು ಪ್ರಮಾಣದ ಹಣವನ್ನು ನಾವು ಖರ್ಚು ಮಾಡಲಿಲ್ಲ. ನಮ್ಮ ಸರ್ಕಾರದಲ್ಲಿ ಖರ್ಚಾಗದೇ ಉಳಿದಿರತಕ್ಕಂಥ ಹಣವನ್ನು ಏನು ಮಾಡಿದ್ದಾರೆ. ಆದರೆ ಆ ಹಣವನ್ನು 6ನೇ ಪಂಚವಾರ್ಷಿಕ ಯೋಜನೆಯಲ್ಲಿಯಾದರೂ ಖರ್ಚು ಮಾಡುತ್ತಾರೆಯೇ ? ಆದರೆ ಆ ಬಗ್ಗೆ ಮಾನ್ಯ ಸಚಿವರು ವರದಿಯನ್ನು ನಮಗೆ ಕೊಟ್ಟಿಲ್ಲ. ಆದರೆ ನಾನು ಮಾನ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಕೇಂದ್ರ ಸರ್ಕಾರದ ಯಾವುದೇ ಒಂದು ಕಾರ್ಯಕ್ರಮವನ್ನು ನಾವು ಪೂರ್ತಿಗೊಳಿಸದಿದ್ದರೆ ಆ ಕಾರ್ಯಕ್ರಮಕ್ಕೆ ಮತ್ತೆ ನಮಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆಯೇ ? 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿಕೊಟ್ಟಿದ್ದಂಥ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡದೇ ಇರುವುದಕ್ಕೆ ಹಿಂದಿನ ಸರ್ಕಾರ ಕೂಡ ಜವಾಬ್ದಾರಿಯಾಗುತ್ತದೆ. ಆದರೆ ನಾನು ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುವುದಾದರೆ, ನಮ್ಮ ಕೇಂದ್ರ ಸರ್ಕಾರದ ಎಂ.ಪಿ.ಆರ್.ಆರ್. ಪ್ರೋಗ್ರಾಂ 1980-81ನೇ ಇಸವಿಯಲ್ಲಿ ಪ್ರಾರಂಭ ಮಾಡಿದೆ. ಇದಕ್ಕೆ ಒಂದು ದೊಡ್ಡ ಪ್ರಮಾಣದ ಮಾಸ್ಟರ್ ಪ್ಲಾನ್ ತಯಾರು ಮಾಡಿದ್ದಾರೆ. ಈ ಮಾಸ್ಟರ್‌ಪ್ಲಾನನ್ನು ನಮ್ಮ ಮುಖ್ಯ ಇಂಜನಿಯರ್ ಆದಂಥ ಶ್ರೀಮಾನ್ ಕೆ. ಸಿ. ರೆಡ್ಡಿಯವರು ಯಾರು ಮಾಡಿದ್ದಾರೆ. ಅವರಿಗೆ ನಾವು ಇವತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಈ ಒಂದು ಕಾರ್ಯಕ್ರಮದಲ್ಲಿ ಸುಮಾರು 900 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗುತ್ತದೆ. ಈ ಒಂದು ಮಾಸ್ಟರ್ ಪ್ಲಾನ್ ಪ್ರಕಾರ ನಮ್ಮ ರಾಜ್ಯದ ಪ್ರತಿಯೊಂದು ಗ್ರಾಮಕ್ಕೂ ರಸ್ತೆ ಸೌಕರ್ಯವನ್ನು ಕಲ್ಪಿಸಿಕೊಡುವಂತಹ ಯೋಜನೆ ಇದೆ. ಈ ಒಂದು ಕಾರ್ಯಕ್ರಮದಲ್ಲಿ ಈಗ ಸುಮಾರು 7721 ಕಿಲೋಮೀಟರ್ಸ್ ರಸ್ತೆ ಮಾತ್ರ ಆಗಿದೆ. ಇನ್ನು 26,871 ಕಿಲೋ ಮೀಟರ್ ರಸ್ತೆಯಾಗಬೇಕಾಗಿದೆ. 1980-81ನೇ ಇಸವಿಯಲ್ಲಿ ಈ ಯೋಜನೆಯ ಹಣ ಸುಮಾರು 2.25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮತ್ತೆ 1981-82ನೇ ಸಾಲಿನಲ್ಲಿ ಸುಮಾರು 1.14 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಈ ಎಂ.ಪಿ.ಆರ್. ಪ್ರೋಗ್ರಾಂನಲ್ಲಿ ಮುಖ್ಯವಾದಂಥ ಉದ್ದೇಶವಾದರೂ ಏನೆಂದರೆ, ಎಲ್ಲಾ ಗ್ರಾಮಗಳಿಗೂ ಕೂಡ ರಸ್ತೆ ಸೌಕರ್ಯವನ್ನು ಒದಗಿಸಿಕೊಡುವುದು. ಸುಮಾರು 1000 ಕೋಟಿ ರೂಪಾಯಿಗಳನ್ನು, ಸುಮಾರು 20 ವರ್ಷಗಳಲ್ಲಿ ತೊಡಗಿಸತಕ್ಕಂಥ ಯೋಜನೆ ಇದು. ಆದರೆ 1980-81ನೇ ಸಾಲಿನಲ್ಲಿ ನಾವು ಏನು ಸಾಧನೆ ಮಾಡಿದ್ದೇವೆಂದು ನೋಡಿದರೆ, ಅದೇ ಒಂದು ವೇಗದಲ್ಲಿ ನಾವು ಮುಂದುವರಿಯುವುದಾದರೆ, ನಾವು ಹಾಕಿಕೊಂಡಿರತಕ್ಕಂಥ ಯೋಜನೆ ಕೇವಲ 20 ವರ್ಷಗಳು ಅಲ್ಲ, ಇನ್ನು 80 ವರ್ಷಗಳಾದರೂ ಕೂಡ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಕೇಂದ್ರ ಸರ್ಕಾರದ ಮತ್ತೊಂದು ಕಾರ್ಯಕ್ರಮವೆಂದರೆ, ಅದು ಐ. ಸಿ. ಆರ್. ಸಿ. ಪ್ರೋಗ್ರಾಂ. ಈ ಒಂದು ಯೋಜನೆ 1972-73ನೇ ಇಸವಿಯಲ್ಲಿ ಪ್ರಾರಂಭವಾಗಿರತಕ್ಕಂಥದ್ದು. ಆದರೆ ಈ ಹಿಂದಿನ ವರದಿಗಳನ್ನೂ ಕೂಡ ನಾವು ತರಿಸಿ ನೋಡಬೇಕಾಗುತ್ತದೆ. ಆಗ ಏನು ಸಾಧನೆ ಮಾಡಿದ್ದಾರೆ ಎನ್ನತಕ್ಕಂಥಾದ್ದೂ ಕೂಡ ನಾವು ಗಮನಿಸತಕ್ಕಂಥ ವಿಚಾರ. Under the Programe new construction to the extent of 12500 k.m. road improvements 10,000 k.m. Progress at the end of March 1982. The expenditure upto 81-82 is Rs. 26 crores. ಆದರೆ ಸರ್ಕಾರದವರು ಖರ್ಚು ಮಾಡಬೇಕಾಗಿದ್ದ ಹಣ ಸುಮಾರು 48 ಕೋಟಿ ರೂಪಾಯಿಗಳು. ಮತ್ತೆ 1981-82ನೇ ಸಾಲಿನಲ್ಲಿ ಐ.ಸಿ.ಆರ್.ಸಿ. ಪ್ರೋಗ್ರಾಂನಲ್ಲಿ ಸುಮಾರು 26 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ಖರ್ಚು ಮಾಡಿರತಕ್ಕಂಥ ಹಣ ಕೇವಲ 1.50 ಲಕ್ಷ ರೂಪಾಯಿಗಳು ಮಾತ್ರ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರತಕ್ಕಂಥ ಯಾವುದೇ ಹಣ ಸಕಾಲದಲ್ಲಿ ಬರು

4-00 p.m.

ತ್ತಿಲ್ಲವೆಂದು ಅವರು ಹೇಳುತ್ತಾರೆ. ಆದ್ದರಿಂದ ಗ್ರಾಮಾಂತರ ರಸ್ತೆಗಳ ವಿಚಾರದಲ್ಲಿ ಎಷ್ಟು ಹಣ ಉಳಿದಿದೆ ಅದನ್ನು ಉಪಯೋಗಿಸಿಕೊಂಡು ಈ ಕೆಲಸಗಳನ್ನು ತ್ವರಿತ ಗತಿಯಿಂದ ಮಾಡಿ ಮುಗಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನಾನು ಮೇಜರ್ ಇರಿಗೇಷನ್ ಬಗ್ಗೆ ಮಾತನಾಡುವಾಗ, ಎಲ್ಲಾ ಪ್ರಾಜೆಕ್ಟ್‌ಗಳ ಬಗ್ಗೆ ಮಾತನಾಡುವ ಪ್ರಯತ್ನ ಮಾಡುವುದಿಲ್ಲ. ಮೇಜರ್ ಇರಿಗೇಷನ್ ಪ್ರಾಜೆಕ್ಟ್ ನನ್ನ ಕ್ಷೇತ್ರದಲ್ಲಿ ಬಹಳ ಮುಖ್ಯವಾಗಿರುವುದು ಎಂದರೆ ಭದ್ರಾ ಪ್ರಾಜೆಕ್ಟ್. ಇದು ನನ್ನ ಕ್ಷೇತ್ರದಲ್ಲಿ 68 ಸಾವಿರ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುತ್ತದೆ. ಆದರೆ ಈ ಪ್ರಾಜೆಕ್ಟ್ ವಿಚಾರದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಕೊಟ್ಟಿರತಕ್ಕಂಥ ವಾರ್ಷಿಕ ವರದಿಯನ್ನು ನೋಡುವುದಾದರೆ, Bhadra Project has been completed'' ಎಂದಲ್ಲದೆ ಬೇರೇನೂ ಬರೆದಿರುವುದಿಲ್ಲ. 1980 ರಿಂದಲೂ ಇದೇ ವಾಕ್ಯ ಪುನರುಕ್ತಿಯಾಗುತ್ತಲೇ ಇದೆ. 1981ರಲ್ಲಿ 1982ರಲ್ಲಿ ಇದೇ ವಾಕ್ಯ. The Bhadra Project has been completed in the year 1986 it lelf. ಅದು ಬಿಟ್ಟರೆ ಇನ್ನೇನೂ ಇಲ್ಲ. ಈ ಪ್ರಾಜೆಕ್ಟಿನ ನಿರ್ಮಾಣಕ್ಕಾಗಿ ಖರ್ಚು ಮಾಡಿದಂಥ ಹಣ 85 ಕೋಟಿ ರೂಪಾಯಿಗಳು ಇರಬಹುದು. ಇವತ್ತು ಭದ್ರಾ ಪ್ರಾಜೆಕ್ಟ್ ವಿಚಾರದಲ್ಲಿ ಹೇಳುವುದಾದರೆ, ಮೇನ್ ಕೆನಾಲ್ ಏನಿದೆ, ಅದು ಸಾಕಷ್ಟು ಭದ್ರವಾಗಿದೆ· ತುಂಗಭದ್ರಾ ರೀತಿಯಲ್ಲಿ ಅಲ್ಲ. ಆದರೆ ಡಿಸ್ಟ್ರಿಬ್ಯೂಟರೀಸ್ ಏನಿದೆ ಅದು ಸಂಪೂರ್ಣ ವಾಗಿ ನಿರ್ನಾಮವಾಗತಕ್ಕಂಥ ಸ್ಥಿತಿಯನ್ನು ಮುಟ್ಟಿದೆ. ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರೊಡನೆ ಕೆಲವುಕಡೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಸಂಪೂರ್ಣವಾಗಿ ಒಡೆದು ಚಲ್ಲಾಪಿಲ್ಲಿಯಾಗಿವೆ. ಫೀಲ್ಡ್ ಚಾನಲ್‌ಗಳು, ಡ್ರಾಪ್‌ಗಳನ್ನು ಕಿತ್ತುಹಾಕಲಾಗಿದೆ. ಇನ್ನು ಹತ್ತು ವರ್ಷ ಹೀಗೇ ಬಿಟ್ಟರೆ ಈ ಭದ್ರಾ ಪ್ರಾಜೆಕ್ಟ್ ನೀರು ಸಂಪೂರ್ಣವಾಗಿ ಅಸ್ತವ್ಯಸ್ತವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಪ್ರಾಜೆಕ್ಟ್ ವಿಚಾರದಲ್ಲಿ ಚಾನಲ್ ದುರಸ್ಥಿ ಮಾಡುವುದಕ್ಕೆ ನವೀಕರಣ ಮಾಡುವುದಕ್ಕೆ 52 ಕೋಟಿ ರೂಪಾಯಿ ಯೋಜನೆ ಸರ್ಕಾರದ ಮುಂದೆ ಇದೆ. ಇದರ ಕಡೆಗೆ ಸರ್ಕಾರ ಸ್ವಲ್ಪ ಗಮನ ಕೊಡಬೇಕು. 52 ಕೋಟಿ ರೂಪಾಯಿಗಳನ್ನು ವರ್ಲ್ಡ್ ಬ್ಯಾಂಕಿನಿಂದಾದರೂ ತಂದು ಇದನ್ನು ಮಾಡಿ ಮುಗಿಸಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಕೊಡುತ್ತಿದ್ದೇನೆ. ಇಲ್ಲದಿದ್ದರೆ ಇಂತಹ ದೊಡ್ಡ ಯೋಜನೆ, ಎರಡು ಲಕ್ಷ ಅರವತ್ತು ಸಾವಿರ ಎಕರೆ ಪ್ರದೇಶಕ್ಕೆ ನೀರು ಕೊಡತಕ್ಕಂಥ ಪ್ರಾಜೆಕ್ಟ್ ನಿರರ್ಥಕವಾಗಿಬಿಡುತ್ತದೆ. ಫೀಲ್ಡ್ ಚಾನಲ್ಸ್, ಡ್ರಾಪ್ಸ್ ಸಂಪೂರ್ಣ ವಾಗಿ ರಿಪೇರಿಯಾಗಿ, ಲೈನಿಂಗ್ ಆಗಬೇಕಾದರೆ 52 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಮಾನ್ಯ ಪಿ. ಡಬ್ಲ್ಯೂ. ಡಿ ಸಚಿವರು ನಮ್ಮಲ್ಲಿಗೆ ಬಂದಿದ್ದಾಗ ಏನಾದರೂ ಪ್ರಯತ್ನ ಮಾಡಿ ವಿಶ್ವ ಬ್ಯಾಂಕಿನಿಂದಾದರೂ ಹಣವನ್ನು ತರಿಸುವುದಕ್ಕೆ ಸಾಧ್ಯವಿದೆಯೋ ಎಂದು ಇಂಜಿನೀಯರ್‌ಗಳ ಹತ್ತಿರ ಸಮಾಲೋಚನೆ ಮಾಡಿದ ಸಂದರ್ಭವನ್ನು ನಾನು ನೋಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಇದ್ದಾರೆ. ಅತಿ ಮುಖ್ಯವಾದಂತಹ ಈ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಕಡೆಗೆ ಸರ್ಕಾರ ಗಮನ ಕೊಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಇನ್ನೊಂದು ಮುಖ್ಯವಾದ ವಿಷಯವನ್ನು ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡಬೇಕೆಂದಿರುವುದು ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಪಟ್ಟಿದ್ದು. ನನ್ನ ಜಿಲ್ಲೆಯಲ್ಲಿ ಮೂರು ಸಕ್ಕರೆ ಕಾರ್ಖಾನೆಗಳಿವೆ. ಸಕ್ಕರೆ ಕಂಪೆನಿಗಳಿಗೆ ಸಂಬಂಧಪಟ್ಟಂತೆ ಸರ್ಕಾರದ ವಾರ್ಷಿಕ ವರದಿಯಲ್ಲಿ ಈ ರೀತಿ ಹೇಳಿದೆ—

> "Development of roads in sugar factory areas-In order to ensure that development of roads in Sugar factory areas on a Planned and continuous, Government have raised the Purchase tax on Sugarcane by Rs. 2 per tonne and the extra revenue realised on this account is utilised for the development of roads in Sugarfactory areas. The proposed outlay for the year 1983-84 on construction of roads in Sugar Factory areas is Rs. 70 lakhs''

ಒಂದು ಸಲಹೆಯನ್ನು ನಾನು ಮಾನ್ಯ ಸಚಿವರಿಗೆ ಕೊಡುತ್ತಿದ್ದೇನೆ. ಅದೇನೆಂದರೆ, ಈ ಸೆಸ್‌ನಲ್ಲಿ ಬರತಕ್ಕಂಥ ಹಣವನ್ನು ಒಂದುಕಡೆ ಸೇರಿಸಿ ಎಲ್ಲಾ ಫ್ಯಾಕ್ಟರಿ ಪ್ರದೇಶಕ್ಕೆ ಹಂಚಬೇಕೆಂಬ ಪ್ರವೃತ್ತಿ ಇದೆ. ಇದರಲ್ಲಿ ಹೊಸದಾಗಿ ನಿರ್ಮಾಣವಾದಂಥ ಸಕ್ಕರೆ ಫ್ಯಾಕ್ಟರಿಗಳ ಏರಿಯಾದಲ್ಲಿರತಕ್ಕಂಥ ಕೆಟ್ಟ ರಸ್ತೆಗಳ ನಿರ್ಮಾಣಕ್ಕೆ ಹೆಚ್ಚು ಹಣ ಕೊಡಬೇಕು. ಅದು ಬಿಟ್ಟು ಎಲ್ಲ ಫ್ಯಾಕ್ಟರಿಗಳಿಗೂ ಒಂದೇ ರೀತಿಯಾಗಿ ಕೊಟ್ಟರೆ ಹೇಗೆ ?

ಶ್ರೀ ಎಚ್. ಡಿ. ಚೌಡಯ್ಯ.—ನಿಮ್ಮ ಪ್ರದೇಶದ ರಸ್ತೆಗಳಿಗೆಲ್ಲಾ ಟಾರ್ ಆಗಿದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ದಾವಣಗೆರೆ ಸಕ್ಕರೆ ಕಾರ್ಖಾನೆ ಪ್ರದೇಶದಲ್ಲಿ ನೋಡಿದರೆ ಲಾರಿಗಳಿಲ್ಲ, ಸುಮಾರು ಒಂದು ಫರ್ಲಾಂಗ್‌ವರೆಗೆ ತಲೆಮೇಲೆ ಕಬ್ಬು ಹೊತ್ತುಕೊಂಡು ಕಬ್ಬು ಸರಬರಾಜು ಮಾಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಹೀಗೆ ಹಣವನ್ನು ಹಂಚುವಾಗ ಎಲ್ಲರಿಗೂ ಸಮವಾಗಿ

ಹಂಚುವುದು ಸರಿಯಲ್ಲ. ಯಾವ್ಯಾವ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಎಷ್ಟರ ಮಟ್ಟಿಗೆ ರಸ್ತೆಗಳು ಕೆಟ್ಟಿವೆ ಎಂಬ ಬಗೆಗೆ ಅಲ್ಲಿ ಸರ್ವೆ ಮಾಡಿ ಅಂತಹಕಡೆ ಹೆಚ್ಚಿನ ಹಣ ಕೊಡಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಮಾಡ ಬಯಸುತ್ತೇನೆ.

ಇನ್ನು ಈ ಇಲಾಖೆಯ ಬಗ್ಗೆ ಹೇಳುವುದಾದರೆ, ಒಬ್ಬ ಸಮರ್ಥರಾದ ಸಚಿವರ ಕೈಯಲ್ಲಿ ಈ ಖಾತೆ ಇರುವುದು ಸಂತೋಷದ ವಿಷಯ. ತಮಗೆ ಗೊತ್ತಿದೆ, 1962ರಲ್ಲಿ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಒಂದು ವರದಿ ಇದೆ. ಅದು ರಿಪೋರ್ಟ್ ಆಫ್ ದಿ ಅಡ್ಮಿನಿಸ್ಟ್ರೇಷನ್ ಆಫ್ ಪಬ್ಲಿಕ್ ವರ್ಕ್ಸ್. ಆ ರಿಪೋರ್ಟ್‌ನಲ್ಲಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದುವರೆಗೂ ಅದರಲ್ಲಿ ಯಾವುದನ್ನೂ ಸಹ ಆಚರಣೆಗೆ ತಂದಿಲ್ಲ. ಆದರೆ ಒಂದನ್ನು ಮಾತ್ರ ಕಾರ್ಯಗತ ಮಾಡಿದ್ದಾರೆ. ಅದೇನೆಂದರೆ, ಮುಖ್ಯ ಇಂಜಿನೀಯರ್ ಇಲಾಖೆಯ ಕಾರ್ಯದರ್ಶಿಯಾಗಿರಬೇಕು ಎಂಬುದು ಆತ ಟೆಕ್ನಿಕಲ್ ಮನುಷ್ಯ ಆಗಿರುವುದರಿಂದ ಕೊ ಆರ್ಡಿನೇಶನ್ ಆಫ್ ವರ್ಕ್ಸ್ ಸಮರ್ಪಕವಾಗಿ ಆಗಲು ಸಾಧ್ಯವಾಗುತ್ತದೆ. ಪಿ. ಡಬ್ಲ್ಯೂ. ಡಿ ಇಲಾಖೆಗೆ ಒಬ್ಬ ತಜ್ಞರನ್ನು ಕಾರ್ಯದರ್ಶಿಯನ್ನಾಗಿ ಮಾಡಿರುವುದಕ್ಕೆ ಮಾನ್ಯ ಸಚಿವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ.

ಕೊನೆಯದಾಗಿ ಅಧ್ಯಕ್ಷರೇ, ಸಣ್ಣ ನೀರಾವರಿ ವಿಚಾರದಲ್ಲಿ ಹೊಸಹೊಸದಾಗಿ ಏತನೀರಾವರಿಯನ್ನು ನಾವು ಪತ್ತೆ ಹಚ್ಚುತ್ತಿದ್ದೇವೆ. ಅನೇಕರು ಹೊಸಬರು ಇಲ್ಲಿ ಶಾಸಕರಾಗಿ ಬಂದಿದ್ದೇವೆ. ಈ ಬಜೆಟ್‌ನಲ್ಲಿ ಸೇರದೇ ಇರತಕ್ಕ ಹೊಸ ಹೊಸ ಯೋಜನೆಗಳನ್ನು ನಾವು ಕಂಡುಕೊಂಡಿದ್ದೇವೆ. ಇದನ್ನು ಯಾವ ರೀತಿಯಲ್ಲಿ ಕಾರ್ಯಗತ ಮಾಡಬೇಕೆಂಬ ಪ್ರಯತ್ನವನ್ನು ಗಮನದಲ್ಲಿಟ್ಟುಕೊಳ್ಳಬೇಕು. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಹೇಳುವುದಾದರೆ, ಕೇವಲ ಹದಿಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಏಳು ನೂರು ಎಕರೆಯಷ್ಟು ನೀರಾವರಿಗೆ ಅನುಕೂಲವಾಗುವಂತಹ ಒಂದು ಏತನಿರಾವರಿಯೋಜನೆ. ಒಂದೊಂದು ಎಕರೆ ಜಮೀನು ಇರುವ ಬಡ ರೈತರಿಗೂ ಇದರಿಂದ ತುಂಬಾ ಉಪಯೋಗವಾಗುತ್ತದೆ. ನಮ್ಮ ಜಿಲ್ಲೆಗೆ ಬಂದಿದ್ದಾಗ ಮಾನ್ಯ ಮಂತ್ರಿಗಳಾದ ಶ್ರೀ ಬಸವಣ್ಣಪ್ಪನವರು ಇದನ್ನು ನೋಡಿದ್ದಾರೆ. ಪಿ. ಡಬ್ಲ್ಯೂ. ಡಿ ಮಂತ್ರಿಗಳೂ ಇದನ್ನು ನೋಡಿದ್ದಾರೆ. ಏತನೀರಾವರಿ ಎರಡನ್ನು ತೋರಿಸಿದ್ದೇನೆ. ಹೇಗಾದರೂ ಮಾಡಿ ಹಣವನ್ನು ಒದಗಿಸಿ ಇದನ್ನು ಕಾರ್ಯಗತ ಮಾಡಿಕೊಡುತ್ತೇನೆಂದು ಮಾನ್ಯ ಸಣ್ಣ ನೀರಾವರಿ ಮಂತ್ರಿಗಳಾದ ಶ್ರೀ ಲಕ್ಷ್ಮೀಪತಿಯವರು ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಇದನ್ನು ಈಡೇರಿಸಿಕೊಡಬೇಕೆಂದು ಒತ್ತಾಯಪಡಿಸುತ್ತೇನೆ. ಇನ್ನೂ ಹೇಳಬೇಕಾದ ಅನೇಕ ವಿಷಯಗಳು ಇವೆ. ಆದರೆ ಕಾಲಾವಕಾಶ ಬಹಳ ಕಡಿಮೆ ಇರುವುದರಿಂದ ನನ್ನ ಮಾತನ್ನು ಮುಕ್ತಾಯ ಮಾಡುತ್ತಾ, ಈ ಬೇಡಿಕೆಯನ್ನು ಸಮರ್ಥಿಸಿ, ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಯವರನ್ನು ವಂದಿಸಿ, ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಇಟ್ಟಿರತಕ್ಕಂಥ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ,

ಈಗ ಈ ಶಾಖೆಯ ಬಗ್ಗೆ ಮಾತನಾಡುವುದಕ್ಕೆ ಮುಂಚೆ ಕರ್ನಾಟಕ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾಗಿದ್ದ ದಿವಂಗತ ದೇವರಾಜ ಅರಸು ಅವರನ್ನು ನೆನಪು ಮಾಡಿಕೊಳ್ಳುತ್ತಿದ್ದೇನೆ. ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗುವುದಕ್ಕೆ ಮುಂಚೆ ಕರ್ನಾಟಕದಲ್ಲಿ ಹತ್ತು ಪರ್ಸೆಂಟ್ ಮಾತ್ರ ನೀರಾವರಿ ಸೌಲಭ್ಯ ಇತ್ತು, ಕರ್ನಾಟಕದಲ್ಲಿ ಒಟ್ಟು ಶೇಕಡಾ 45 ರಷ್ಟು ಇರಿಗೇಷನ್ ಪೊಟೆನ್‌ಶಿಯಲ್ ಇತ್ತು. ಆದರೆ ಅವರು ಬಂದನಂತರ ಕರ್ನಾಟಕ ರಾಜ್ಯದಲ್ಲಿ 12 ಪರ್ಸೆಂಟ್ ಜಾಸ್ತಿಯಾಯಿತು. ಒಟ್ಟು 22 ಪರ್ಸೆಂಟ್ ಆಯಿತು. ಇನ್ನೂ 20 ಪರ್ಸೆಂಟ್ ಇರಿಗೇಷನ್ ಪೊಟೇನ್‌ಶಿಯಲ್ ಕರ್ನಾಟಕ ರಾಜ್ಯದಲ್ಲಿದೆ. ಅದು ಆಗಬೇಕಾಗಿತ್ತು.

ಈ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆಂದರೆ, ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ರಾಜ್ಯದಲ್ಲಿ ನೀರಾವರಿಯನ್ನು ಹೆಚ್ಚು ಮಾಡಿ ರಾಜ್ಯದಲ್ಲಿ ಒಳ್ಳೆಯದನ್ನು ಮಾಡುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ, ಜನತೆಯಲ್ಲಿ ಹೇಳಿ ಅಧಿಕಾರಕ್ಕೆ ಬಂದಿದ್ದೀರಿ. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಷ್ಟು ನೀರಾವರಿ ಸೌಕರ್ಯವನ್ನು ಕಲ್ಪಿಸಿಕೊಟ್ಟಿದೆ ? ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಿಕೊಟ್ಟಿದೆ ? ಇದರಲ್ಲಿ ಮೈನರ್ ಇರಿಗೇಷನ್‌ಗೆ ಎಷ್ಟು ? ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗೆ ಎಷ್ಟು ಎಂಬುದನ್ನು ಅವರೇ ಕೊಟ್ಟಿರತಕ್ಕಂತಹ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ, ಇದರ ಜೊತೆಗೆ ಈಗ ಅಪ್ಪರ್ ಕೃಷ್ಣ ಯೋಜನೆಯಲ್ಲಿ ಕೆಲಸ ನಡೆಯುತ್ತಿದೆ. ಅಲ್ಲಿಯ ಕೆಲಸ ಬಹಳ ಮಂದ ಗತಿಯಲ್ಲಿ ನಡೆಯುತ್ತಿದೆ. ಅಪ್ಪರ್ ಕೃಷ್ಣ ಯೋಜನೆಯಲ್ಲಿ ಕೆಲಸ ಮಾಡತಕ್ಕಂತಹ ಕಂಟ್ರಾಕ್ಟುದಾರರು

ರಾಜಕೀಯ ಒತ್ತಡದಿಂದಾಗಿ ಎಕ್ಸಸ್ ಪೇಮೆಂಟ್ ಮಾಡಿಕೊಂಡಿದ್ದಾರೆ. ಈ ರೀತಿ ಕೋಟಿಗಟ್ಟಲೆ ಹಣವನ್ನು ರಾಜಕೀಯ ಒತ್ತಡದಿಂದ ಕಂಟ್ರಾಕ್ಟ್‌ದಾರರಿಗೆ, ಅಧಿಕಾರಿಗಳಿಗೆ ಎಕ್ಸಸ್ ಪೇಮೆಂಟ್ ಮಾಡಿದ್ದಾರೆ. ಆದರೆ ಕೆಲಸ ಮಾತ್ರ ಮಂದಗತಿಯಲ್ಲಿ ಸಾಗುತ್ತಿದೆ. ಡ್ಯಾಂ ಕೆಲಸ ಪೂರ್ತಿಯಾಗಿದ್ದರೆ ಚಾನಲ್ ಕೆಲಸ ಆಗಿಲ್ಲ. ನೀರಾವರಿಯಲ್ಲಿ ಈ ರೀತಿಯ ಅವ್ಯವಸ್ಥೆ ನಡೆಯುತ್ತಿದೆ. ಸರ್ಕಾರದವರು ಯಾವ ರೀತಿ ರೈತರಿಗೆ ನೀರಾವರಿ ಹೆಚ್ಚು ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದಾರೆ? ಇದರ ಜೊತೆಗೆ ಈಗ ಹರಿಜನ–ಗಿರಿಜನರು ಇರತಕ್ಕಂತಹ ಪ್ರದೇಶದಲ್ಲಿ ಕೆರೆ ಕಟ್ಟೆಗಳನ್ನು ಕಟ್ಟುವುದಕ್ಕೆ ನೀರಾವರಿ ಸೌಲಭ್ಯವನ್ನು ಮಾಡಿಕೊಡುವುದಕ್ಕೆ ಪೂರ್ತಿ ಹಣವನ್ನು ಕೇಂದ್ರ ಸರ್ಕಾರದಿಂದ ಕೊಡ ತಕ್ಕಂತಹ ಯೋಜನೆ ಇದೆ. ಇಂತಹ ಯೋಜನೆಗಳನ್ನು ರಾಜ್ಯದ ಯಾವ ಯಾವ ಭಾಗದಲ್ಲಿ ತೆಗೆದು ಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು. ಜೊತೆಗೆ ಇಷ್ಟರವರೆಗೆ ಇಂತಹ ಯೋಜನೆಗಳನ್ನು ತೆಗೆದು ಕೊಳ್ಳಬೇಕೆಂದು ಅಧಿಕಾರಿಗಳ ಮಟ್ಟದಿಂದ ಶಿಫಾರಸ್ಸು ಮಾಡಿದ್ದಾರೆಂಬುದನ್ನು ತಿಳಿಸಬೇಕು. ಏಕೆಂದರೆ ಇಂತಹ ಯೋಜನೆಯಲ್ಲಿ ರಾಜ್ಯದ ಬೊಕ್ಕಸದಿಂದ ಖರ್ಚು ಮಾಡತಕ್ಕಂತಹ ಹಣವಲ್ಲ. ಹರಿಜನ–ಗಿರಿ ಜನರು ಇರತಕ್ಕಂತಹ ಪ್ರದೇಶದಲ್ಲಿರತಕ್ಕಂತಹ ಹರಿಜನ–ಗಿರಿಜನರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿ ಕೊಡುವುದಕ್ಕೆ ಕೇಂದ್ರ ಸರ್ಕಾರ ಹಣವನ್ನು ಕೊಡುತ್ತದೆ. ಇದರ ಬಗ್ಗೆ ಈವರೆಗೆ ರಾಜ್ಯ ಸರ್ಕಾರದವರು ಎಷ್ಟು ಯೋಜನೆಗಳನ್ನು ತಯಾರು ಮಾಡಿ ಕೇಂದ್ರಕ್ಕೆ ಕಳುಹಿಸಿದ್ದಾರೆಂಬುದನ್ನು ತಿಳಿಸಬೇಕು. ಎಷ್ಟು ಯೋಜನೆಗಳು ಕಾರ್ಯಗತಗೊಳಿಸುವುದಕ್ಕೆ ಸಿದ್ಧವಾಗಿವೆ ಎಂಬುದನ್ನು ತಿಳಿಸಬೇಕು. ಇದರ ಜೊತೆಗೆ ಈಗ ಸಣ್ಣ ನೀರಾವರಿ ಯೋಜನೆಗಳಿಗೆ ವಿಶ್ವಬ್ಯಾಂಕಿನಿಂದ ಬೇಕಾದಷ್ಟು ಹಣವನ್ನು ಕೊಡುತ್ತಿದ್ದಾರೆ. ಆ ಯೋಜನೆಯಲ್ಲಿ ತೆಗೆದುಕೊಂಡಿರುವಂತಹ ಕೆಲಸಕಾರ್ಯಗಳು ಬಹಳ ಮಂದಗತಿಯಲ್ಲಿ ಸಾಗುತ್ತಿವೆ. ಏಕೆಂದರೆ ಸಕಾಲದಲ್ಲಿ ಈ ಯೋಜನೆಗಳನ್ನು ಮುಗಿಸಿ ಉತ್ಪತ್ತಿಯನ್ನು ಮಾಡದಿದ್ದರೆ ತೆಗೆದುಕೊಂಡಿರ ತಕ್ಕಂತಹ ಹಣಕ್ಕೆ ಬಡ್ಡಿಯನ್ನು ಕಟ್ಟಬೇಕಾಗಿದೆ. ಬಡ್ಡಿಯನ್ನು ಕೊಡತಕ್ಕಂತಹ ಜನ ಕರ್ನಾಟಕದವರು ಆದ್ದರಿಂದ ಇದರಲ್ಲಿ ತೆಗೆದುಕೊಂಡಿರತಕ್ಕಂತಹ ಯೋಜನೆಗಳನ್ನು ತ್ವರಿತಗತಿಯಲ್ಲಿ ಮುಗಿಸಬೇಕು. ಇದರ ಬಗ್ಗೆ ಹಿಂದೆ ದಿವಂಗತ ದೇವರಾಜ ಅರಸ್‌ರವರು ಒಂದು ಮಾತನ್ನು ಹೇಳಿದ್ದರು, ಅದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಏನೆಂದರೆ, ರೈತರಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ ಕೇಂದ್ರ ಸರ್ಕಾರದ ಸಹಾಯ ಬೇಕಾಗಿಲ್ಲ. ಎಲ್ಲಿಂದ ಹಣವನ್ನು ತರಬೇಕೆಂಬುದು ನನಗೆ ಗೊತ್ತಿದೆ ಅಂತ. ಆ ಒಂದು ಧೈರ್ಯದ ಮಾತನ್ನು ದಿವಂಗತ ದೇವರಾಜ ಅರಸ್‌ರವರು ಹೇಳಿದರು. ನಿಮಗೆ ಕೂಡ ಆ ಒಂದು ಧೈರ್ಯ, ಆ ಒಂದು ಛಾತಿ ಇಲ್ಲ ಅಂತ ನನಗನ್ನಿಸುತ್ತಿದೆ. ಏಕೆಂದರೆ ನಿಮ್ಮ ಪ್ರಾಮಾಣಿಕ ಪ್ರಯತ್ನವನ್ನು ನೋಡಿದರೆ ಎಷ್ಟರಮಟ್ಟಿಗೆ ಪ್ರಗತಿಯಾಗಬೇಕೆಂದು ನೀವು ಹೇಳುತ್ತಿದ್ದರೋ ಅಷ್ಟರ ಮಟ್ಟಿಗೆ ಯೋಜನೆಗಳನ್ನು ತ್ವರಿತಗೊಳಿಸಿ ಮುಗಿಸುವಂಥ ಕೆಲಸ ನಡೆಯುತ್ತಿಲ್ಲ.

ಇನ್ನು ನನ್ನ ಕ್ಷೇತ್ರದಲ್ಲಿ ಆಗಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ ಹೇಳುವುದಾದರೆ, ನನ್ನದು ಮೀಸಲು ಕ್ಷೇತ್ರ. ನನ್ನ ಕ್ಷೇತ್ರದಲ್ಲಿರತಕ್ಕಂತಹ ರಸ್ತೆಗಳನ್ನು ನೋಡಿದರೆ ಹಾಗೂ ಕೆರೆಕಟ್ಟೆಗಳನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿ ಶ್ರೀಮಾನ್ ದೇವೇಗೌಡರ ನೆನವು ಬರುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಶ್ರೀಮಾನ್ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದು ಯಾವಾಗ ?

ಶ್ರೀ ಕೆ. ಶಿವಮೂರ್ತಿ.—ಅವರು ಈ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಮುಂದೆ ಆಗ ಬಹುದು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈಗ ಆಗುವುದಿಲ್ಲ, ನವಂಬರ್‌ನಲ್ಲಿ ಆಗುತ್ತಾರೆಂದು ಪ್ರಜಾಪ್ರಭುತ್ವ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಶ್ರೀಮಾನ್ ಮೊಯ್ಲಿಯವರ ಪತ್ರಿಕೆಯಲ್ಲಿ ಶ್ರೀ ದೇವೇಗೌಡರು ಮುಖ್ಯಮಂತ್ರಿಗಳಾಗುವ ಸುದ್ದಿ ಬಂದಿದೆಯಂತೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈಗ ಆಗುವುದಿಲ್ಲ. ಮುಂದೆ ನವೆಂಬರ್‌ನಲ್ಲಿ ಆಗುತ್ತಾ ರೆಂಬ ಸುದ್ದಿ ಪ್ರಜಾಪ್ರಭುತ್ವ ಪತ್ರಿಕೆಯಲ್ಲಿ ಬಂದಿದೆ ಅಂತ ಹೇಳಿದ್ದೇನೆ.

ಉಪಾಧ್ಯಕ್ಷರು.—ಶಿವಮೂರ್ತಿಯವರು ಮಾತನಾಡುತ್ತಾ ದೇವೇಗೌಡರು ಮುಖ್ಯಮಂತ್ರಿ ಎಂಬುದಾಗಿ ಹೇಳಿದ್ದಕ್ಕೆ ಈ ಗೊಂದಲವಾಗಿದೆ.

ಶ್ರೀ ಎಚ್.ಡಿ. ದೇವೇಗೌಡ.—ಅವರು ಒಳ್ಳೆಯ ಮಾತನ್ನು ಹೇಳಿದ್ದಾರೋ, ಕೆಟ್ಟ ಮಾತನ್ನು ಹೇಳಿದ್ದಾರೋ ಅದು ಬೇರೆ ಪ್ರಶ್ನೆ. ಅವರು ಮುಖ್ಯಮಂತ್ರಿಗಳಿದ್ದಾರೆ. ಅವರ ಕೈಕೆಳಗೆ ನಾವು ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಈ ಪ್ರಶ್ನೆ ಅಷ್ಟೊಂದು ಲಘುವಾಗಿ ತೆಗೆದುಕೊಳ್ಳಬೇಕಾದ ಪ್ರಶ್ನೆಯಲ್ಲ. ಎಲ್ಲಿಯವರಿಗೆ ಅವರನ್ನು ನಾಯಕರನ್ನಾಗಿ ಮಾಡಿಕೊಂಡಿದ್ದೇವೆಯೋ ಆ ನಾಯಕರಿಗೆ ಬೆನ್ನಿನ ಹಿಂದೆ ಚೂರಿ ಹಾಕಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಗೋವಿಂದ ಪಿ. ವಡೆಯರಾಜ್.—ಅವರೇ ಒಪ್ಪಿ ಮಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.–ತಮಗೆ ಅಂತಹ ಒಂದು ಸದ್ಭಾವನೆ ಇದ್ದುದರಿಂದಲೇ ಅಂತಹ ಒಂದು ಒಳ್ಳೆಯ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಪತ್ರಿಕೆಗಳಲ್ಲಿ ಬಂದ ವರದಿಯನ್ನು ನೋಡಿರಬಹುದು ಅದಕ್ಕಾಗಿಯೇ ಹಾಗೆ ಅವರು ಹೇಳಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ಲೋಕೋಪಯೋಗಿ ಹಾಗೂ ನೀರಾವರಿ ಸಚಿವರಾದ ಶ್ರೀಮಾನ್ ದೇವೇಗೌಡರ ಬಗ್ಗೆ ನನಗೆ ಬಹಳ ಗೌರವ ಇದೆ. ನನ್ನ ಕ್ಷೇತ್ರಕ್ಕೆ ಹೋದಾಗ ಅಲ್ಲಿರತಕ್ಕಂತಹ ರಸ್ತೆಗಳನ್ನು ನೋಡಿ, ಅಲ್ಲಿರತಕ್ಕಂತಹ ಕೆರೆಕಟ್ಟೆಗಳನ್ನು ನೋಡಿ, ಪ್ರಣಾಳಿಕೆಯಲ್ಲಿ ಜನತೆಗೆ ಕೊಟ್ಟ ಮಾತಿನಂತೆ ಮಾಡುತ್ತೇವೆ, ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದೇನೆ. ಇದರ ಬಗ್ಗೆ ಬಹಳಷ್ಟು ಪತ್ರಗಳನ್ನೂ ಕೂಡ ಅವರಿಗೆ ಬರೆದಿದ್ದೇನೆ. ಅವರ ಕಿವಿಗೂ ಈ ಮಾತನ್ನು ಹೇಳಿದ್ದೇನೆ. ಆದರೆ ನನ್ನ ಕ್ಷೇತ್ರಕ್ಕೆ ಯಾವ ರೀತಿಯ ಆದ್ಯತೆಯನ್ನು ಕೊಟ್ಟಿದ್ದಾರೆಂದು ನನಗೆ ಕೊಟ್ಟಿರತಕ್ಕಂತಹ ಪಟ್ಟಿಯನ್ನು ನೋಡಿದಾಗ ಮನಸ್ಸಿಗೆ ಬಹಳ ನಿರಾಸೆಯಾಯಿತು. ನನ್ನ ಕ್ಷೇತ್ರದಲ್ಲಿ ಯಾವುದೇ ಒಂದು ಸಣ್ಣ ನೀರಾವರಿ ಯೋಜನೆಯನ್ನೂ ತೆಗೆದುಕೊಂಡಿಲ್ಲ. ಮತ್ತೆ ಯಾವುದೇ ಹೊಸ ಕೆರೆ ಕಟ್ಟೆಗಳ ಕೆಲಸವನ್ನೂ ತೆಗೆದುಕೊಂಡಿಲ್ಲ. ನಾವು ಚುನಾವಣೆಯ ಸಮಯದಲ್ಲಿ ಜನರಿಗೆ ಕೊಟ್ಟಂತಹ ಮಾತನ್ನು ಹೇಗೆ ಉಳಿಸಿಕೊಳ್ಳುವುದು ಎನ್ನತಕ್ಕಂತಹ ಭಯ ನನ್ನಲ್ಲಿದೆ. ನಮ್ಮ ಚಿತ್ರದುರ್ಗ ಜಿಲ್ಲೆಯ ದಾವಣಗೆರೆಯ ಸ್ವಲ್ಪ ಭಾಗ ಹಸಿರು ಭಾಗ. ಅದನ್ನು ಬಿಟ್ಟರೆ ಮಿಕ್ಕೆಲ್ಲ ಪ್ರದೇಶ ಬರಗಾಲ ಪ್ರದೇಶ. ಅಲ್ಲಿ ಮಳೆ ಬಂದರೆ ಮಾತ್ರ ಬೆಳೆ, ಇಲ್ಲದಿದ್ದರೆ ಇಲ್ಲ. ಒಂದುವೇಳೆ ಮಳೆ ಬರಲಿಲ್ಲ ಅಂದರೆ, ಜನಗಳು ತಮ್ಮಲ್ಲಿ ಇಟ್ಟುಕೊಂಡಿರತಕ್ಕಂತಹ ಹಸುಗಳು ಮತ್ತು ಎತ್ತುಗಳನ್ನು ಅರ್ಧಕ್ಕರ್ಧದಷ್ಟು ಬೆಲೆಗೆ ಮಾರಿಕೊಂಡು ಕೂಲಿನಾಲಿಗಾಗಿ, ಶಿವಮೊಗ್ಗದ ಕಡೆ ಹೊರಟು ಹೋಗುತ್ತಾರೆ. ನಮ್ಮ ಜಿಲ್ಲೆಯಲ್ಲಿರತಕ್ಕಂತಹ ನಮ್ಮ ನಾಯಕರು ಹಾಗೂ ರಾಜಕೀಯ ಹಿರಿಯ ನಾಯಕರು, ಚುನಾವಣೆಯ ಸಮಯದಲ್ಲಿ ಭಾಷಣ ಮಾಡಿದರು. ನಾವು ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದಿದ್ದೇ ಆದರೆ, ನಾವು ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕಂತಹ ಬರಗಾಲವನ್ನು ಪರಿಹಾರ ಮಾಡಲಿಕ್ಕಾಗಿ ಅಪ್ಪರ್ ಭದ್ರಾ ಯೋಜನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇದೇ ಮಾತನ್ನು ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಅಪ್ಪರ್ ಭದ್ರ ಯೋಜನೆಯ ಬಗ್ಗೆ ಚುನಾವಣೆಯ ಸಮಯದಲ್ಲಿ ಹೇಳಿದ್ದರು. ಆದರೆ ಇವತ್ತು ಅವರು ತಟಸ್ಥರಾಗಿರುವುದು ನನಗೆ ತಿಳಿಯಲಿಲ್ಲ. ಅವರ ಶಿಷ್ಯರಾಗಿರತಕ್ಕಂತ ಹಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇವತ್ತು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಆಶೀರ್ವಾದದಿಂದಲೇ ಇವತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿರುವಂತಹದ್ದು. ಅವರು ಗುರುವಿನ ಮಾತನ್ನು ಉಳಿಸಿ, ನಮ್ಮ ಜಿಲ್ಲೆಯ ಬಡವರ ಕೂಗನ್ನು ಕೇಳತಕ್ಕಂತಹ ಸರ್ಕಾರ ಬಂದಿದೆ ಎನ್ನತಕ್ಕಂತಹ ಭರವಸೆ ಇನ್ನೂ ಜನರಲ್ಲಿ ಮೂಡಿದೆ. ಆದ್ದರಿಂದ ಅಪ್ಪರ್ ಭದ್ರ ಯೋಜನೆಯನ್ನು ಕಾರ್ಯಗತ ಮಾಡುವುದರಿಂದ, ಆ ಭಾಗದಲ್ಲಿರತಕ್ಕಂತಹ ಬರಗಾಲ ಪರಿಹಾರವಾಗುತ್ತದೆ. ಜೊತೆಗೆ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರೂ ಸಿಕ್ಕುತ್ತದೆ, ನೀರಾವರಿಯನ್ನೂ ಕೂಡ ಮಾಡಿಕೊಳ್ಳಬಹುದು. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇದರ ಬಗ್ಗೆ ಒಂದು ಮಾತನ್ನು ಆಡಿಲ್ಲ. ಇದರಿಂದ, ಚಿತ್ರದುರ್ಗದ ಎಲ್ಲ ರಾಜಕೀಯ ಪ್ರತಿನಿಧಿಗಳೂ ಬಹಳ ನಿರಾಸರಾಗಿದ್ದಾರೆ ಹಾಗೂ ಬೇಸರಗೊಂಡಿದ್ದಾರೆ. ಅದಕ್ಕೋಸ್ಕರವಾಗಿ ಈಗ ಅಧಿಕಾರದಲ್ಲಿರತಕ್ಕಂಥಾ ಮಾನ್ಯ ಮಂತ್ರಿಗಳನ್ನು ಈ ಕೆಲಸಗಳನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದ ನೀರಾವರಿ ಯೋಜನೆಗಳ ಪೊಟೆನ್ಸಿಯಾಲಿಟಿ ತೆಗೆದುಕೊಂಡರೆ 20 ಪರ್ಸೆಂಟ್ ಬರುತ್ತದೆ ಆದುದರಿಂದ ಇದರ ಬಗ್ಗೆ ತುರ್ತಾದ ಕಾರ್ಯಕ್ರಮಗಳನ್ನು ಅತಿ ವೇಗವಾಗಿ ಆಗುವಂತೆ ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಜೊತೆಗೆ ನಮ್ಮ ಕಡೆ ಛಾನಲ್ ಸೌಕರ್ಯ ಮತ್ತು ಇತರೇ ಸೌಕರ್ಯಗಳನ್ನು ಸಹ ಒದಗಿಸಿಕೊಡಬೇಕು ಎಂದು ಹೇಳುತ್ತೇನೆ. ನಮ್ಮದು ಬರಗಾಲ ಪ್ರದೇಶವಾದುದರಿಂದ ನಮ್ಮ ಭಾಗದ ಜನರ ಮೇಲೆ ಅಭಿಮಾನ ಇಟ್ಟು ಈ ಕೆಲಸಗಳನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ರಸ್ತೆಗಳ ವಿಷಯ ಹೇಳುವುದಾದರೆ, ನಮ್ಮ ಭಾಗದ ರಸ್ತೆಗಳು ಬಹಳ ದುರ್ವ್ಯವಸ್ಥೆಯಲ್ಲಿವೆ. ಸ್ಕೂಲ್ ಕಟ್ಟಡಗಳನ್ನು ನೋಡಿದರೆ ಬಿದ್ದುಹೋಗುವ ಸ್ಥಿತಿಯಲ್ಲಿದೆ, ರಿಪೇರಿನೇ ಇಲ್ಲ. ಯಾವಾಗ ಮಳೆ ಬಂದು ಬಿದ್ದುಹೋಗುತ್ತದೋ ಗೊತ್ತಿಲ್ಲ. ಕೆಲವು ಶಾಲೆಗಳಲ್ಲಂತೂ ಕಟ್ಟಡಗಳು ಬಿದ್ದುಹೋಗಿ ಅಲ್ಲಿ ಸ್ಕೂಲೇ ನಡೆಯುತ್ತಾ ಇಲ್ಲ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಇನ್ನೂ ಕಾಳಜಿ ವಹಿಸಿಲ್ಲ. ನಮ್ಮ ಕಡೆ ರೋಡ್ಸ್ ಸರಿಯಿಲ್ಲ, ಚುನಾವಣೆ ಸಂದರ್ಭದಲ್ಲಿ ನಮ್ಮ ಭಾಗಕ್ಕೆ ಬಂದಾಗ ಪ್ರಚಾರ ಭಾಷಣ ಮಾಡಿದರೂ ಸಹ ಇನ್ನೂ ಆ ಬಗ್ಗೆ ಕಾಳಜಿ ವಹಿಸಿಲ್ಲ. ಹರಿಜನ–ಗಿರಿಜನರ ಬಗ್ಗೆ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಕೇಂದ್ರ ಸರ್ಕಾರದವರು ಏನು ಹಣ ಇಟ್ಟಿದ್ದಾರೆ ಅದನ್ನು ಪಡೆದು ಅವರಿಗೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುವುದಲ್ಲದೆ ಸರ್ಕಾರದವರು

ಆ ಹಣವನ್ನು ತಕ್ಷಣ ಬಿಡುಗಡೆ ಮಾಡಿ ಅವರ ಬಗ್ಗೆ ಏನೇನು ಯೋಜನೆಗಳು ಇವೆ, ಯಾವ್ಯಾವ ನೀರಾವರಿ ಸೌಲಭ್ಯಗಳು ಆಗಬೇಕೋ ಅದನ್ನು ಆದಷ್ಟು ಬೇಗ ಮಾಡಿಕೊಡಬೇಕೆಂದು ಮತ್ತು ಈಗ ಇರತಕ್ಕಂಥಾ ದುರಸ್ತಿ ಕೆಲಸಗಳನ್ನೂ ಸಹ ಮಾಡಿಕೊಡಬೇಕೆಂದು ಹೇಳಿ, ಮಾನ್ಯ ಸಚಿವರು ತಂದಿರ ತಕ್ಕಂಥಾ ಬೇಡಿಕೆಗಳನ್ನು ವಿರೋಧ ಮಾಡುತ್ತಾ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

. ಶ್ರೀ ಎಂ. ಎಂ. ನಾನಯ್ಯ (ಮಡಕೇರಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥಾ ಬೇಡಿಕೆಗಳ ಸಂಖ್ಯೆ 33, 34, 43, 44, 45, ಮತ್ತು 46 ಏನು ಇವೆ ಇವನ್ನು ಅನಿವಾರ್ಯವಾಗಿ ಮತ್ತು ಬೇಸರದಿಂದ ವಿರೋಧಿಸಬೇಕಾದ ಪ್ರಮೇಯ ಈವೊತ್ತು ಬಂದಿದೆ. ಕಾರಣ ನನ್ನ ಕ್ಷೇತ್ರ ಮಡಕೇರಿ, ಕೊಡಗು. ಇದು ಮಲೆನಾಡು ಪ್ರದೇಶ. ಅಲ್ಲಿ ವಿಶೇಷವಾದಂಥಾ ಸ್ಥಾನಮಾನಗಳು ಇವೆ. ನಮ್ಮಲ್ಲಿ ವರ್ಷಕ್ಕೆ ಸಾಧಾರಣವಾಗಿ 2725.5 ಮಿಲಿ ಮೀಟರ್ ಅಷ್ಟು ಮಳೆಯಾಗುತ್ತದೆ. ನಮ್ಮಲ್ಲಿ ಇರಿಗೇಷನ್ ಫೆಸಿಲಿಟೀಸ್ ಜಾಸ್ತಿ ಇಲ್ಲ. ನಮ್ಮಲ್ಲಿ ಹಾರಂಗಿ ಡ್ಯಾಮ್ ಏನು ಇದೆ ಅದು ಹೊರಗಡೆ ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ. ಆದರಿಂದ ನಮ್ಮ ಜಿಲ್ಲೆಗೆ ಉಪಯೋಗವಿಲ್ಲ. ನಮ್ಮ ಏರಿಯಾ ಲೆಕ್ಕ ಹಾಕಿದರೆ 4, 102-00 ಸ್ಕ್ವೇರ್ ಕಿಲೋಮೀಟರ್ಸ್ ಅಷ್ಟು ಇದೆ. ಕಲ್ಟಿವೇಟ್‌ಡ್ ಲ್ಯಾಂಡ್ 1,43, 137 ಹೆಕ್ಟಾರ್ಸ್ ಅದೇ ಅನ್‌ಕಲ್ಟಿವೇಟೆಡ್ ಲ್ಯಾಂಡ್ 73, 716 ಹೆಕ್ಟಾರ್ಸ್, ಫಾರೆಸ್ಟ್ ಲ್ಯಾಂಡ್ 4319 ಹೆಕ್ಟಾರ್ಸ್, ನೆಟ್ ಇರಿಗೇಷನ್ ಲ್ಯಾಂಡ್ 4163 ಎಕರೆ ಮಾತ್ರ ಇದೆ. ನಮ್ಮ ಭಾಗದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇದ್ದರೂ ಕೂಡ ಅದನ್ನು ಸರಿಯಾಗಿ ಉಪಯೋಗ ಮಾಡುತ್ತಾ ಇಲ್ಲ. ಅದನ್ನು ಉಪಯೋಗ ಮಾಡುವ ಹಾಗೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು 33ನೇ ಡಿಮ್ಯಾಂಡ್. ಸಣ್ಣ ನೀರಾವರಿ ಕೆಲಸಕ್ಕೆ 33, 25,00,000 ಕೋಟಿ ರೂಪಾಯಿಗಳನ್ನು ಏನು ಒದಗಿಸಿದ್ದಾರೆ ಅದರಲ್ಲಿ ಕೊಡಗಿಗೆ ಬಡ್ಜೆಟ್‌ನಲ್ಲಿ ಕೊಟ್ಟಿರುವುದು 24,02,000 ರೂಪಾಯಿಗಳನ್ನು ಗ್ರಾಂಟ್ ಮಾಡಿದ್ದಾರೆ. ಅಂದರೆ ಅದು 0.01 ಪರ್ಸೆಂಟ್ ಕೂಡ ಆಗುವುದಿಲ್ಲ. ಇಷ್ಟು ಕಡಿಮೆ ಪ್ರಮಾಣದಲ್ಲಿ ನಮ್ಮ ಭಾಗಕ್ಕೆ ಹಣ ಕೊಟ್ಟಿದ್ದಾರೆ. ಹೀಗಾದರೆ ನಮ್ಮ ಭಾಗದಲ್ಲಿ ಅಭಿವೃದ್ಧಿ ಕಾರ್ಯಕ್ರಮ ಹೇಗಾಗುತ್ತದೆ. ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ನಮ್ಮ ಕೊಡಗಿಗೆ ಮೇಜರ್, ಮೈನರ್ ಇರ್ರಿಗೇಷನ್ ಬೇಕಾಗಿಲ್ಲ. ಸಣ್ಣ ಸಣ್ಣ ಪಿಕಅಪ್ಸ್‌ಗಳು ಎರಡು ತಿಂಗಳಿಗೋಸ್ಕರವಾಗಿ ಹೆಚ್ಚು ಹೆಚ್ಚು ಬೇಕಾಗುತ್ತದೆ. ಇದನ್ನು ಮಾಡಿಕೊಡಿ ಎಂದು ತಾಲ್ಲೂಕು ಬೋರ್ಡ್‌ನವರನ್ನು ಕೇಳಿದರೆ ಲೋಕೋಪಯೋಗಿ ಇಲಾಖೆಯವರು ಮಾಡಿಕೊಡಬೇಕು ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ತಾಲ್ಲೂಕ್ ಬೋರ್ಡ್‌ನವರು ಮಾಡಬೇಕು ಎಂದು ಹೇಳುತ್ತಾರೆ. ಮತ್ತು ಈಗ ಏನು ಲಿಫ್ಟ್ ಇರ್ರಿಗೇಷನ್ ನಮ್ಮ ಭಾಗದಲ್ಲಿ ಇದೆ, ಅದರ ಜೊತೆಗೆ ಇನ್ನೂ 3-4 ಲಿಫ್ಟ್ ಇರಿಗೇಷನ್ ಕೆಲ ಮಾಡಿಕೊಡಬೇಕು ಎಂದು ಹೇಳುತ್ತೇನೆ. ತಾಲ್ಲೂಕು ಬೋರ್ಡ್‌ನವರನ್ನು ಈ ಕೆಲಸಗಳನ್ನು ಮಾಡಿಸಿಕೊಡಿ ಎಂದು ಕೇಳಿದರೆ 10 ಸಾವಿರ ರೂಪಾಯಿಗಿಂತ ಜಾಸ್ತಿ ಇರತಕ್ಕಂಥ ಕೆಲಸವನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರೇ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ತಾವಾದರೂ ಈ ಕೆಲಸಗಳನ್ನು ತೆಗೆದುಕೊಂಡು ಒಂದೊಂದು ಕಡೆಯಲ್ಲಿ 10-10 ಪಿಕಅಪ್‌ಗಳನ್ನು ಕಟ್ಟಿದರೆ ಸಾಕು. ಜೊತೆಗೆ 4-5 ಲಿಫ್ಟ್ ಇರಿಗೇಷನ್ ಆಗಬೇಕು. ಇದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟು ಈ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ನಮ್ಮ ಭಾಗಕ್ಕೆ ತಾವು ಏನು ಹಣ ಗ್ರಾಂಟ್ ಮಾಡಿದ್ದೀರೋ ಅದನ್ನು ಲೆಕ್ಕ ಹಾಕಿ ನೋಡಿದರೆ 0.1 ಪರ್ಸೆಂಟ್-ಏನೇನೂ ಸಾಲದು, ಅದನ್ನು 2 ಪರ್ಸೆಂಟ್‌ಗಾದರೂ ಏರಿಸಿದರೆ ಅನುಕೂಲವಾಗುತ್ತದೆ. ಹಾಗೆ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು 34ನೇ ಡಿಮ್ಯಾಂಡ್ ನೀರಾವರಿ ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಹವಾ ನಿಯಂತ್ರಣಕ್ಕೆ ಸಂಬಂಧಪಟ್ಟದ್ದು. ನಾನು ಒಳಚರಂಡಿ ವ್ಯವಸ್ಥೆ ಬಗ್ಗೆ ಹೇಳುತ್ತೇನೆ. ಇದು ನಮ್ಮ ಭಾಗದ ಜನರ ಒಂದು ಜೀವನಾಡಿಯ ಪ್ರಶ್ನೆ. ಆದುದರಿಂದ ನಮ್ಮ ಕೊಡಗಿನ ಮುಖ್ಯಪಟ್ಟಣಗಳಾದ ಮಡಿಕೇರಿ, ವೀರಾಜಪೇಟೆ, ಗೋಣಿಕೊಪ್ಪಲ್ ಮತ್ತು ಸೋಮವಾರಪೇಟೆ, ಶನಿವಾರ ಸಂತೆ ಇವು ಯಾವುದಕ್ಕೂ ಕೂಡ ಒಳಚರಂಡಿ ವ್ಯವಸ್ಥೆ ಇಲ್ಲ. ಮೊದಲು ಮಡಕೇರಿಗೆ ಈ ಬಗ್ಗೆ ಒಂದು ಯೋಜನೆಗೆ ಮಂಜೂರಾತಿ ಮಾಡಿದ್ದರು. ಆದರೆ ಅದರ ಕಾರ್ಯಕ್ರಮ ಪ್ರಾರಂಭವಾಗಲೇ ಇಲ್ಲ. ಈಗಲಾದರೂ ಕೂಡ ಈ ಯೋಜನೆಗಳಿಗೆ ಎಷ್ಟು ಹಣ ಇಟ್ಟಿದ್ದೀರೋ ಅದಕ್ಕೆ ಬೇಗ ಮಂಜೂರಾತಿ ಕೊಟ್ಟು ಆ ಕೆಲಸಗಳನ್ನು ಮಾಡಿಕೊಡಬೇಕು ಎಂದು ಕೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಈಗ್ಗೆ ಎರಡು ವರ್ಷದ ಹಿಂದೆ ಪ್ರವಾಹ ನಿಯಂತ್ರಣದ ಬಗ್ಗೆ ಅದನ್ನು ತಡೆಗಟ್ಟಲು ಒಂದು ಯೋಜನೆಯನ್ನು ಕಳುಹಿಸಿತ್ತು. ಈ ಪ್ರವಾಹದಲ್ಲಿ ನಮ್ಮ ಭಾಗದಲ್ಲಿ ಯಾವ್ಯಾವ

ರಸ್ತೆಗಳು, ಸೇತುವೆಗಳು ಮುಳುಗಡೆಯಾಗುತ್ತಿತ್ತು ಅದನ್ನು ತಡೆಗಟ್ಟುವ ದೃಷ್ಟಿಯಿಂದ 6 ಕಡೆಗಳಲ್ಲಿ ಆ ನದಿಗೆ ಅಡ್ಡಲಾಗಿ ಸೇತುವೆಯನ್ನು ಹಾಕಿ ಎತ್ತರಿಸುವುದಕ್ಕೆ ಸುಮಾರು 60 ಲಕ್ಷ ರೂಪಾಯಿಗಳ ಯೋಜನೆಯನ್ನು ಹಾಕಿ ಕಳುಹಿಸಿದ್ದಾರೆ. ಅದರಲ್ಲಿ ಯಾವುದು ಇದೆ ಎಂದರೆ (1) ಬಲಮುರಿ ಯೋಜನೆ 30 ಲಕ್ಷ, ಜೊಳ್ಳಮೂಡು ಯೋಜನೆಯೂ ಸೇರಿದೆ, (2) ಕೆ.ಬಿ.ಡಬ್ಲ್ಯು. ಯೋಜನೆ 2 ಲಕ್ಷ, (3) ಕಡಲಬೇತಮಾಡು ಯೋಜನೆ 5 ಲಕ್ಷ (4) ಕಡಗೇರಿ ಡಿವಿಷನ್ ಮರ್ಕರಾ ಯೋಜ ಯೋಜನೆಗೆ 5 ಲಕ್ಷ, (5) ಕುಶಾಲನಗರ ಮೈಸೂರು ಇದಕ್ಕೆ 5 ಲಕ್ಷ, (6) ಮಡಕೇರಿ–ಬಾಗ ಮಂಡಲ ಯೋಜನೆಗೆ 13 ಲಕ್ಷ-ಒಟ್ಟು 60 ಲಕ್ಷ ರೂಪಾಯಿಗಳ ಯೋಜನೆ. ಇಲ್ಲಿ ಸೇತುವೆಗಳನ್ನು ಕಟ್ಟಲು ತಮಗೆ ಒಂದು ಪ್ರಪೋಸಲ್ ಬಂದಿದೆ. ಆದರೆ ಇದುವರೆಗೂ ಕೂಡ ಅದರ ಬಗ್ಗೆ ಯಾವ ಕ್ರಮಗಳನ್ನೂ ಕೈಗೊಂಡಿಲ್ಲ. ಈಗಲಾದರೂ ಸಹ ಇದರ ಬಗ್ಗೆ ಗಮನಹರಿಸಿ ಆ ಸೇತುವೆಗಳನ್ನು ಕಟ್ಟಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 43 ಇದಕ್ಕೆ 59, 64, 74,000 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇದರಲ್ಲಿ ಅನೇಕ ತರಹದ ಕಾಮಗಾರಿ ಕೆಲಸಗಳನ್ನು ಮಾಡಿಸಬೇಕಾಗಿದೆ. ಅತ್ಯಂತ ಪ್ರಮುಖವಾದ ವಿಷಯ ಏನೆಂದರೆ, ಈ ಇಲಾಖೆಯಲ್ಲಿ 10–15 ವರ್ಷದಿಂದ ಗ್ಯಾಂಗ್‌ಮನ್ಸ್‌ಗಳು ಏನು ಕೆಲಸ ಮಾಡುತ್ತಿದ್ದಾರೋ ಅವರನ್ನು ಇನ್ನೂ ಕನ್‌ಫರ್ಮ್ ಮಾಡಿಲ್ಲಾ. ಅವರಿಗೆ ಬರತಕ್ಕಂಥ ಸಂಬಳ ನೋಡಿದರೆ ಬಹಳ ಕಡಿಮೆ. ಅವರನ್ನು ನೋಡಿದರೆ ಅವರ ಮೈಯಲ್ಲಿ ಬರೇ ಮೂಳೆ ಮತ್ತು ಚರ್ಮ ಮಾತ್ರ ಕಾಣುತ್ತದೆ. ಅವರಿಗೆ ವಾಸ ಮಾಡುವುದಕ್ಕೂ ಮನೆ ಇಲ್ಲ. ದುದರಿಂದ ಆಅವರ ಬಗ್ಗೆ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ರೋಡ್ ರೋಲರ್ಸ್ ಡ್ರೈವರ್ಸ್ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಏತಕ್ಕೆಂದರೆ, ಆ ಬಡಜನರ ಬಗ್ಗೆ ಹೇಳದೇ ಹೋದರೆ ಶಾಸಕರಾದವರು ಅವರ ಕಷ್ಟಸುಖ ಕೇಳದೇ ಹೋದರೆ ಅಧರ್ಮವಾಗುತ್ತದೆ. ಅವರ ಬಗ್ಗೆ ಹೇಳುವುದಾದರೆ, ಅವರಿಗೆ ಇನ್ನೂ ಪೆನಷನ್ ಸೆಟಲ್ ಆಗಿಲ್ಲಾ, ಅವರನ್ನು ಪರ್ಮನೆಂಟ್ ಮಾಡಬೇಕು ಮತ್ತು ಟೆಂಪರರಿ ಇರುವವರನ್ನೆಲ್ಲಾ ಖಾಯಂ ಮಾಡ ಬೇಕು. ಇವರ ಬಗ್ಗೆ ತಾವು ಒಂದು ಹೆಚ್ಚಿನ ಆಸಕ್ತಿ ಇಟ್ಟು ಅವರಿಗೆ ಅನುಕೂಲಗಳನ್ನು ಮಾಡಿಕೊಡ ಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಕೊಡಗಿನಲ್ಲಿ ಯಾವುದಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ಬಹಳ ನಿಧಾನ ಮಾಡುತ್ತಾರೆ. ಕೇಳಿದರೆ ಟಾರ್ ಇಲ್ಲ, ಸಿಮೆಂಟ್ ಇಲ್ಲ, ಹಾಗೆ ಹೀಗೆ ಎಂದು ಹೇಳುತ್ತಾರೆ. ಆದುದರಿಂದ ಇನ್ನು ಮೇಲಾದರೂ ಕೂಡ ಆ ಮಲೆನಾಡು ವಿಭಾಗಕ್ಕೆ ಮಾಡುವಂಥ ಕೆಲಸವನ್ನು ವಿಳಂಬ ಮಾಡದೇ ತೀವ್ರವಾಗಿ ಗಮನ ಹರಿಸಿ ಕೆಲಸ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ನಮ್ಮ ಭಾಗಕ್ಕೆ ಕೊಡಗಿಗೆ ಕಟ್ಟಡದ ಬಗ್ಗೆ ಏನು ಹಣ ಕೊಟ್ಟಿದ್ದಾರೆ ಅದನ್ನು ಲೆಕ್ಕ ಹಾಕಿ ನೋಡಿದರೆ ಅದು ಕೇವಲ 7 ಪರ್ಸೆಂಟ್ ಮಾತ್ರ ಆಗುತ್ತದೆ. ಇದು ಏನೇನೂ ಸಾಕಾಗುವುದಿಲ್ಲ. ಸ್ವಲ್ಪ ಇನ್ನೂ ಹೆಚ್ಚು ಮಾಡಬೇಕು. ಮತ್ತು ನಮ್ಮ ಭಾಗದಲ್ಲಿ 240 ದಿವಸವೂ ಮಳೆ ಆಗುವುದರಿಂದ ನಮ್ಮ ಭಾಗಕ್ಕೆ ಯಾವ ಕೆಲಸಗಳನ್ನು ತೆಗೆದು ಕೊಂಡರೂ ಕೂಡ ಅದು ಅರ್ಥಂಬರ್ಥವಾಗುತ್ತದೆ. ಅಲ್ಲದೇ ವಿಳಂಬ ಮಾಡುತ್ತಾರೆ. ಮುಂದೆ ಹಾಗೆ ಮಾಡದೇ ಇರುವ ಹಾಗೆ, ಆ ಕೆಲಸಕ್ಕೆ ತಕ್ಷಣವೇ ಮಂಜೂರಾತಿ ಕೊಟ್ಟು ಆ ಕೆಲಸವನ್ನು ತೀವ್ರವಾಗಿ ಮಾಡುವ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

4–30 p.m.

ಇವತ್ತು ತಾವು ಜುಡಿಷಿಯಲ್ ಡಿಪಾರ್ಟಮೆಂಟ್‌ಗೆ 10,59,000 ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ, ಆದರೆ ಕೊಟ್ಟಿರುವುದು 3.67 ಸಾವಿರ ರೂಪಾಯಿಗಳು. ಅದೇ ರೀತಿಯಲ್ಲಿ ಪೋಲೀಸ್ ಇಲಾಖೆಗೆ 4.30 ಸಾವಿರ ರೂಪಾಯಿಗಳನ್ನು ಒದಗಿಸಿದ್ದು ಕೇವಲ ಒಂದು ಲಕ್ಷ ರೂಪಾಯಿ ಗಳನ್ನು ಮಾತ್ರ ಕೊಟ್ಟಿದ್ದೀರಿ. ಡಿ. ಎ. ಆರ್. ಗೆ 11,60 ಸಾವಿರ ರೂಪಾಯಿಗಳನ್ನು ಒದಗಿಸಿದ್ದು 1.50 ಸಾವಿರ ರೂಪಾಯಿಗಳನ್ನು ಇದುವರೆಗೂ ಕೊಟ್ಟಿದ್ದೀರಿ. ನಮ್ಮ ತಾಲ್ಲೂಕಿನ ಕರ್ಕೆಯಲ್ಲಿ ಒಂದು ಪೋಲೀಸ್ ಸ್ಟೇಷನ್ ಇಲ್ಲ. ಅಲ್ಲಿ ಸಬ್ ಇನ್ಸ್‌ಪೆಕ್ಟರ್ ಉಳಿಯಲ್ಲಿಕ್ಕೆ ಮನೆಯಿಲ್ಲ, ಸ್ಟೇಷನ್ ಇಲ್ಲ, ದಾರಿಯಲ್ಲಿ ಅವರು ಗುಡಿಸಲು ಹಾಕಿಕೊಂಡು ಸ್ಟೇಷನ್ ನಡೆಸುವುದು ಪರಿಸ್ಥಿತಿ ಇದೆ. ಇದಕ್ಕೆ ಒಂದು ಕಟ್ಟಡವನ್ನು ಸರ್ಕಾರದವರು ಅತಿ ಜಾಗ್ರತೆಯಾಗಿ ಕಟ್ಟಿ ಕೊಡಬೇಕು ಎಂದು ಈ ಸಂದರ್ಭ ದಲ್ಲಿ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಸ್ಟೇಷನ್ ಕಟ್ಟಡ ಕಟ್ಟಿದ ಮೇಲೆ ಅಲ್ಲಿ ಒಂದು ಕ್ವಾರ್ಟಸ್ ಕೂಡ ಇನ್ಸ್‌ಪೆಕ್ಟರಿಗೆ ಕಟ್ಟಿಕೊಟ್ಟು ಅಲ್ಲಿ ಒಂದು ಪೋಲಿಸ್ ಫೋರ್ಸ್ ಇದೆ ಎನ್ನುವ ರೀತಿಯಲ್ಲಿ ಮಾಡಬೇಕು. ಇದೇ ರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಮಡಕೇರಿಯ ಪೋಲೀಸ್ ಸ್ಟೇಷನ್ ಕಟ್ಟಡ ಹಳೆಯ ಕಾಲದ್ದು ಅನೇಕ ವರ್ಷಗಳಿಂದ ಇದಕ್ಕೆ ರಿಪೇರಿಯಿಲ್ಲದೆ ಬಹಳ ತೊಂದರೆಯಾಗಿದೆ.

ಈ ಕಟ್ಟಡದ ರಿಪೇರಿಗಾಗಿ ಒದಗಿಸಿರುವ ಹಣ ಸಾಲದು. ಇದನ್ನು ಇನ್ನೂ ಹೆಚ್ಚು ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಫಂಕ್ಷನಲ್ ಬಿಲ್ಡಿಂಗ್ಸ್—ಪ್ರಾಥಮಿಕ ವಿದ್ಯಾಭ್ಯಾಸದ ಕಟ್ಟಡಕ್ಕಾಗಿ ಸರ್ಕಾರದವರು 3.58 ಸಾವಿರ ರೂಪಾಯಿಗಳ ಬೇಡಿಕೆ ಇದ್ದು ಕೇವಲ 85 ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸುಮಾರು ಪ್ರಾಥಮಿಕ ಕಟ್ಟಡಗಳ ಅವಶ್ಯಕತೆ ಇದ್ದು ಇದಕ್ಕೆ ಒದಗಿಸಿರುವ ಹಣದಿಂದ ಒಂದು ಕಟ್ಟಡವನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸುಮಾರು 20 ಕಟ್ಟಡಗಳಾದರೂ ಬೇಕಾಗುತ್ತದೆ. ಇದಕ್ಕೆ ಒದಗಿಸಿರುವ ಹಣ ಏನೇನೂ ಸಾಲದು ಮತ್ತು ಇದನ್ನು ಹೆಚ್ಚಿಸಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದಕ್ಕೆ ಸರ್ಕಾರದವರು ಕೊಡುವಂಥ ನಾಲ್ಕು ಸಾವಿರ ರೂಪಾಯಿಗಳ ಗ್ರಾಂಟ್ ಏನು ಇದೆ ಅದು ಖಂಡಿತವಾಗಿಯೂ ಸಾಲುವುದಿಲ್ಲ. ಇದನ್ನು ಕನಿಷ್ಟ 15 ಸಾವಿರ ರೂಪಾಯಿಗಳವರಿಗೆ ಆದರೂ ಹೆಚ್ಚಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ನಮ್ಮ ಜಿಲ್ಲೆಯಲ್ಲಿ ಸುಮಾರು 7 ಹೈಸ್ಕೂಲು ಕಟ್ಟಡಗಳು, 8 ಕಾಲೇಜು ಕಟ್ಟಡಗಳು ಆಗಬೇಕಾಗಿದೆ. ಇವುಗಳನ್ನು ಆದ್ಯತೆಯ ಮೇಲೆ ಕುಶಾಲನಗರ, ಶುಂಠಿಕೊಪ್ಪದಲ್ಲಿ ಆದಷ್ಟು ಜಾಗ್ರತೆ ಇದೇ ವರ್ಷ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ. ಹಾಗೆಯೇ ಕುಶಾಲನಗರದ ಮೊದಲನೆಯ ದರ್ಜೆ ಕಾಲೇಜಿಗೆ ಕಟ್ಟಡ ಇಲ್ಲ. ಹಿಂದಿನ ಮುಖ್ಯಮಂತ್ರಿಗಳು ಇದರ ಬಗ್ಗೆ ಆದಷ್ಟು ಜಾಗ್ರತೆಯಾಗಿ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದರು, ತಾವು ಇದರ ಅವಶ್ಯಕತೆಯನ್ನರಿತು ಕುಶಾಲನಗರದ ಮೊದಲನೆಯ ದರ್ಜೆಯ ಕಾಲೇಜು ಕಟ್ಟಡವನ್ನು ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಆಮೇಲೆ ಮಡಕೇರಿಯ ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಯ ಕಟ್ಟಡಕ್ಕೆ ಮೊದಲನೆಯ ಹಂತಕ್ಕೆ ಸರ್ಕಾರದವರು ಸುಮಾರು 30 ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಲಾಗಿದ್ದು ಇದುವರೆಗೆ ಸುಮಾರು 8 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ವರ್ಷದ ಆಯವ್ಯಯದಲ್ಲಿ ಸುಮಾರು 7.40 ಲಕ್ಷ ರೂಪಾಯಿಗಳ ಅವಕಾಶವನ್ನು ಮಾಡಿದ್ದಾರೆ. ಈ ಹಣದಿಂದ ಅಲ್ಲಿಯ ಕೆಲಸ ನಾವು ನಿರೀಕ್ಷಿಸಿದ ಮಟ್ಟಿಗೆ ಆಗುವುದಿಲ್ಲ. ಆಸ್ಪತ್ರೆಗೆ ಜನ ಬಂದು ಸೇರುತ್ತಿರುತ್ತಾರೆ. ಅಲ್ಲಿ ವರಾಂಡದಲ್ಲಿಯೂ ಕೂಡ ರೋಗಿಗಳನ್ನು ಇಟ್ಟುಕೊಳ್ಳುವುದಕ್ಕೆ ಸ್ಥಳ ಇರುವುದಿಲ್ಲ. ಆಮೇಲೆ ಮಡಕೇರಿ ಆಸ್ಪತ್ರೆಯ ಒಂದು ವೈಶಿಷ್ಟ್ಯ ಎಂದರೆ, ಇದರ ಕೆಲವು ಭಾಗದ ಕಟ್ಟಡ ರಸ್ತೆಯ ಮೇಲಿನ ಆಸ್ಪತ್ರೆಯಿಂದ ಸೇರಲು ರಾಜ್ಯದ ಹೆದ್ದಾರಿ ಅಡ್ಡ ಬರುವುದರಿಂದ ಇದಕ್ಕೆ ಓವರ್ ಬ್ರಿಡ್ಜ್ ಮಾಡಬೇಕಾದ ಅವಶ್ಯಕತೆ ಬಹಳ ಇದೆ. ಇಲ್ಲಿಗೆ ರೋಗಿಗಳು ದಾದಿಯರು ಮತ್ತು ಡಾಕ್ಟರುಗಳು ಬರುವುದಕ್ಕೆ ಬಹಳ ತೊಂದರೆ ಇದೆ. ರಸ್ತೆಯನ್ನು ದಾಟುವಾಗ ವಾಹನಗಳ ಅಪಾಯ ಬಹಳ ಇದೆ. ಆದ್ದರಿಂದ ಇಲ್ಲಿ ಒಂದು ಓವರ್ ಬ್ರಿಡ್ಜ್ ಬಹಳ ಅಗತ್ಯವಾಗಿ ಬೇಕಾಗಿರುತ್ತದೆ. ಮತ್ತೆ ನಮ್ಮ ಮಡಕೇರಿಯಲ್ಲಿ ಅನೇಕ ಸರ್ಕಾರಿ ಇಲಾಖೆಗಳಿಗೆ ಕಟ್ಟಡಗಳು ಇಲ್ಲ. ಸಬ್ ಟ್ರಷರಿಯ ಕಟ್ಟಡ ಇಲ್ಲ, ಅನಿಮಲ್ ಹಸ್ಬೆಂಡರಿ ಇಲಾಖೆಯ ಕಚೇರಿಗೆ ಕಟ್ಟಡ ಇರುವುದಿಲ್ಲ. ಎಕ್ಸೈಸ್ ಆಫೀಸ್ ಕಟ್ಟಡ ಇಲ್ಲ, ಇವೆಲ್ಲವೂ ಕೂಡ ಒಂದು ಸಣ್ಣ ಜನತಾ ಮನೆಯಲ್ಲಿ ನಡೆಯುತ್ತಿವೆ. ಇದರ ಬಗ್ಗೆ ಸರ್ಕಾರದವರು ಆಸಕ್ತಿ ವಹಿಸಿ ನಮ್ಮ ಜಿಲ್ಲಾ ಇಲಾಖೆಯ ಕಟ್ಟಡಗಳನ್ನು ಆದಷ್ಟು ಜಾಗ್ರತೆಯಾಗಿ ಕಟ್ಟಿಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಮತ್ತೆ ಕಟ್ಟಡಗಳ ದುರಸ್ತಿಯ ಬಗ್ಗೆ ಸರ್ಕಾರದವರು ಚೀಫ್ ಇಂಜನಿಯರ್ ಅವರಿಗೆ ಹಣ ಖರ್ಚು ಮಾಡಲು ಅಧಿಕಾರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಹೇಳುವುದಾದರೆ, 1940ನೇ ಇಸವಿಯಲ್ಲಿ ಅದಕ್ಕೂ ಮುಂಚಿತವಾಗಿ ಕಟ್ಟಿದ ಕಟ್ಟಡಗಳಿಗೆ ಆರು ಪರ್ಸೆಂಟ್, 1975ರ ಮುಂಚಿತವಾಗಿ ಕಟ್ಟಿದ ಕಟ್ಟಡಗಳಿಗೆ 5 ಪರ್ಸೆಂಟ್ ಮತ್ತು 75ರ ನಂತರ ಕಟ್ಟಿದ ಕಟ್ಟಡಗಳಿಗೆ ಮೂರು ಪರ್ಸೆಂಟ್ ಹಣವನ್ನು ಕೊಟ್ಟುಕೊಂಡು ಹೋಗಬೇಕು ಎಂದು ಮಾಡಿದ್ದಾರೆ. ಇದನ್ನು ಕೊಡಗು ಜಿಲ್ಲೆಗೆ ಅನ್ವಯ ಮಾಡಿದರೆ ಅಲ್ಲಿ ಏನೊಂದು ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆರು ಪರ್ಸೆಂಟ್‌ಗೆ ಬದಲಾಗಿ 10 ಪರ್ಸೆಂಟ್ ಹಣವನ್ನು ಮಂಜೂರು ಮಾಡಿಕೊಟ್ಟರೆ ಅಲ್ಲಿ ಸ್ವಲ್ಪವಾದರೂ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಮೇಲೆ ನಮ್ಮ ಕೊಡಗಿನಲ್ಲಿರುವ ಹಳೆಯ ವಿಧಾನ ಸಭಾಂಗಣದ ದುರಸ್ತಿಗಾಗಿ ಸರ್ಕಾರದವರು 2.50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಕೇವಲ 50 ಸಾವಿರ ರೂಪಾಯಿಗಳನ್ನು ಮಾತ್ರ ಮುಂಗಡ ಪತ್ರದಲ್ಲಿ ತೋರಿಸಿದ್ದಾರೆ. ಈ ಹಣದಿಂದ ಏನನ್ನೂ ಮಾಡಲಿಕ್ಕೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಂಜೂರು ಮಾಡಿದ ಪೂರಾ ಹಣವನ್ನು ಒಂದೇ ಗಂಟಿನಲ್ಲಿ ಕೊಟ್ಟರೆ ಅದರ ಕೆಲಸವನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ ಮತ್ತು ಮಡಕೇರಿಯಲ್ಲಿ ಸಭಾಂಗಣದಲ್ಲಿ ಸಭೆಗಳನ್ನು ನಡೆಸುವುದಕ್ಕೆ ತಾವು ಸಹಾಯ ಮಾಡಿದಂತಾಗುತ್ತದೆಂದು ನಾನಾದರೂ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊಡಗಿನಲ್ಲಿ ಮಳೆ ಜಾಸ್ತಿಯಾಗಿ ಬರುವುದರಿಂದ ಸರ್ಕಾರದವರು ಕಟ್ಟಡಗಳಿಗೆ ಹಣವನ್ನು ಕೊಡಬೇಕಾದುದು ಅತ್ಯಾವಶ್ಯಕ.

ರಸ್ತೆ ಮತ್ತು ಸೇತುವೆಗಳಿಗಾಗಿ ಸರ್ಕಾರದವರು 69.25 ಕೋಟಿ ರೂಪಾಯಿಗಳ ಡಿಮ್ಯಾಂಡ್‌ನ್ನು ಇಟ್ಟಿದ್ದಾರೆ. ಇದರಲ್ಲಿ 59.35 ಲಕ್ಷ ರೂಪಾಯಿಗಳ ಅಂದಾಜು ವೆಚ್ಚ ಎಂದು ಹೇಳಿ 16.31 ಲಕ್ಷ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ತೋರಿಸಿದ್ದಾರೆ. ಸೇತುವೆಗಳಿಗಾಗಿ 22.05 ಲಕ್ಷ ರೂಪಾಯಿಗಳನ್ನು ಅಂದಾಜು ವೆಚ್ಚದಲ್ಲಿ ತೋರಿಸಿದ್ದು 5.05 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಲಾಗಿದೆ. ಇದರಲ್ಲಿ ನಮಗೆ ಸುಮಾರು 0.7 ಪರ್ಸೆಂಟ್ ಹಣ ಬಂದಿದೆ. ಇದರಲ್ಲಿ ಏನೂ ಕೆಲಸಗಳನ್ನು ಮಾಡಲಿಕ್ಕಾಗುವುದಿಲ್ಲ. ನಮ್ಮಲ್ಲಿ ಕಾವೇರಿ ಜಾತ್ರೆ ನಡೆಯುತ್ತದೆ, ಅನೇಕ ಯಾತ್ರಿಕರು ಇಲ್ಲಿಗೆ ಬರುತ್ತಾರೆ ಹೋದ ವರ್ಷ ರಸ್ತೆ ಸರಿಯಾಗಿಲ್ಲದಿದ್ದರಿಂದ ಮದ್ರಾಸಿನ ಕೆಲವು ಬಸ್‌ಗಳು ವಾಪಸ್ ಹೋಗಬೇಕಾಯಿತು. ಆದ್ದರಿಂದ ರಸ್ತೆ ಮತ್ತು ಸೇತುವೆಗಳಿಗೆ ಸರ್ಕಾರದವರು ಏನು ಹಣವನ್ನು ಇಟ್ಟಿದ್ದಾರೆ ಅದಕ್ಕಿಂತ ಎರಡು ಪರ್ಸೆಂಟ್ ಹೆಚ್ಚು ಹಣವನ್ನು ಒದಗಿಸಿ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ಇಡುವುದಕ್ಕೆ ಅನುಕೂಲ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ. ಬೈರೇಗೌಡ.—1980 ರಿಂದ 1983ರ ಜನವರಿಗೆ ಕೊಡಗಿನಲ್ಲಿ ಎಷ್ಟು ಕೆಲಸವಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ಎಂ. ಎಂ. ನಾನಯ್ಯ.—ಅದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಕಳೆದ ಮೂರು ವರ್ಷಗಳಿಂದ ಕೊಡಗಿನ ಜಿಲ್ಲೆಯವರಾದ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದರು. ಬಹುಶಃ ಅವರು ಇವತ್ತಿನ ದಿವಸ ಮುಖ್ಯಮಂತ್ರಿಯಾಗಿದ್ದರೆ ನಾನು ಶಾಸಕನಾಗಿದ್ದಿದ್ದರೆ ಐದು ವರ್ಷಗಳ ಅವಧಿಯಲ್ಲಿ ಕೊಡಗನ್ನು ಚಿನ್ನದ ಗಣಿಯನ್ನಾಗಿ ಮಾಡುತ್ತಿದ್ದೆ. ಇನ್ನು ಹತ್ತು ವರ್ಷಗಳಲ್ಲಿ ಏನು ಮಾಡುವುದಕ್ಕೆ ಸಾಧ್ಯವೋ ಅದನ್ನು ಐದು ವರ್ಷಗಳಲ್ಲಿ ಮಾಡುತ್ತಿದ್ದೆ.

ಇನ್ನು ಕೊಡಗಿನಲ್ಲಿ ನ್ಯಾಷನಲ್ ಹೈವೇಸ್, ಸ್ಟೇಟ್ ಹೈವೇಸ್‌ಗಳು ಇವೆ. ಮೇಜರ್ ಡಿಸ್ಟ್ರಿಕ್ಟ್ ರೋಡುಗಳು, ವಿಲೇಜ್ ರೋಡುಗಳು ಇವೆ, ಇವುಗಳಿಗೆ ಮೇಂಟೇನ್ ಮಾಡುವುದಕ್ಕಾಗಿ 17.61 ಸಾವಿರ ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಸುಮಾರು 54 ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ಹಣದಿಂದ ಖಂಡಿತವಾಗಿಯೂ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಗ್ರಾಮಾಂತರ ಪ್ರದೇಶದ ರಸ್ತೆಗಳಿಗೆ 1600 ರೂಪಾಯಿಗಳನ್ನು ರಿಪೇರಿಗಾಗಿ ಕೊಟ್ಟಿದ್ದಾರೆ. ಇದರಿಂದ ಯಾವ ರಿಪೇರಿಯ ಕೆಲಸವನ್ನು ಅಲ್ಲಿ ಮಾಡಲಿಕ್ಕಾಗುವುದಿಲ್ಲ. ಇದನ್ನು ಸುಮಾರು ಆರು ಸಾವಿರ ರೂಪಾಯಿಗಳಿಗಾದರೂ ಜಾಸ್ತಿ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊಡಗಿನಲ್ಲಿ ಐ.ಸಿ.ಆರ್.ಸಿ. ರೋಡುಗಳು ಸುಮಾರು 252 ಕಿಲೋಮೀಟರ್ ಇದೆ. ಈ ರಸ್ತೆಗೆ ದೊರಕುವ ಗ್ರಾಂಟ್ 11.59 ಲಕ್ಷ ರೂಪಾಯಿಗಳು. ಇದನ್ನು ಬ್ಲಾಕ್ ಟಾಪಿಂಗ್ ಮಾಡಬೇಕಾಗಿರುತ್ತದೆ, ಇದಕ್ಕೆ ಸುಮಾರು ಒಂದು ಲಕ್ಷ ರೂಪಾಯಿಗಳಾದರೂ ಬೇಕಾಗುತ್ತದೆ. ಸುಮಾರು 250 ಕಿಲೋಮೀಟರ್ ದೂರದ ರಸ್ತೆಯನ್ನು ಮೆಟಲಿಂಗ್ ಮಾಡಬೇಕಾಗಿದೆ. ಇದಕ್ಕೆ ಎರಡು ಲಕ್ಷ ರೂಪಾಯಿಗಳಾದರೂ ಬೇಕಾಗುತ್ತದೆ. ಆದ್ದರಿಂದ ಪ್ರತಿ ವರ್ಷವೂ ಸರ್ಕಾರದವರು 80 ಲಕ್ಷ ರೂಪಾಯಿಗಳಂತೆ ಐದು ವರ್ಷಗಳವರೆಗೆ ಹಣವನ್ನು ಒದಗಿಸುವುದಾದರೆ ಐದು ವರ್ಷಗಳಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕೋ ಅವುಗಳನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಇದಲ್ಲದೆ ಕೆಲವು ರಸ್ತೆಗಳನ್ನು ಟ್ರೈಬಲ್ ಕಾಲೋನಿಗಳಲ್ಲಿ ಮಾಡಬೇಕಾಗಿರುತ್ತದೆ. ಮಿನಿಮಂ ನೀಡ್ ಪ್ರೋಗ್ರಾಂ ಏನು ಇದೆ ಅದನ್ನು ಮತ್ತು ಇಂಟಿಗ್ರೇಟೆಡ್ ಕಾಂಪ್ರಹೆನ್ಸೀವ್ ರೂರಲ್ ಕಮ್ಯುನಿಕೇಷನ್ ಪ್ರೋಗ್ರಾಂನಲ್ಲಿ ರಸ್ತೆಗಳನ್ನು ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಹೇಳಿ, ನಾನು ಹೇಳಿರುವ ಈ ಕೆಲಸಗಳನ್ನು ಸರ್ಕಾರದವರು ಮಾಡುತ್ತಾರೆಂದು ನನಗೆ ವಿಶ್ವಾಸವಿದೆ. ಆದರೂ ಕೂಡ ಕೆಲವು ಕೆಲಸಗಳನ್ನು ಮುಂಗಡಪತ್ರದಲ್ಲಿ ಸೇರಿಸದ ಕಾರಣ ನಾನು ಈ ಬೇಡಿಕೆಯನ್ನು ವಿರೋಧಿಸಿ, ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ಸಭಾಧ್ಯಕ್ಷರೆ, ಈ ಜನತಾ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಎಷ್ಟು ಒಳ್ಳೆಯ ಕೆಲಸಮಾಡಿದೆ ಎಂಬ ಅಂಕಿಅಂಶಗಳನ್ನು ಇಡುವುದಾದರೆ ನಾನು ಒಂದು ನಿದರ್ಶನವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಇಂಜನಿಯರಾಗತಕ್ಕವರು ಅದೇ ಹುದ್ದೆಯಲ್ಲಿ ಉನ್ನತ ಮಟ್ಟದಲ್ಲಿತಕ್ಕ ವ್ಯವಸ್ಥೆ ಮಾಡಿರತಕ್ಕಂಥಾದ್ದು ಪ್ರಥಮಬಾರಿಗೆ ಆಗಿರತಕ್ಕಂಥಾದ್ದು. ಇದಕ್ಕಾಗಿ ಸರ್ಕಾರವನ್ನು ಮತ್ತು ಈ ಇಲಾಖೆಯ ಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಇದೇ ಮಾದರಿಯನ್ನು ಎಲ್ಲಾ ಇಲಾಖೆಯಲ್ಲೂ ಮಾಡಿದರೆ ಬಹುಶಃ ಆಯಾ ಇಲಾಖೆಗಳಲ್ಲಿ ಹೆಚ್ಚು ನುರಿತಿತಕ್ಕ,

ಪರಿಣಿತರಾಗಿರತಕ್ಕ ಅಧಿಕಾರಿಗಳು ದೊರೆತಾಗ ಅವರಿಗೆ ಅರಿವು ಚೆನ್ನಾಗಿ ಇದ್ದಾಗ, ಯಾವ ರೀತಿಯಲ್ಲಿ ಕೆಲಸಮಾಡಬೇಕು ಎಂದು ಗೊತ್ತಿರುತ್ತದೆ, ಆ ದಿಶೆಯಲ್ಲಿ ಅವರು ಕೆಲಸಮಾಡಿಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆ. ಈಗ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯಗಳನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. 1959–60 ರಲ್ಲಿ ಭದ್ರ ಅಣೆಕಟ್ಟಿನಲ್ಲಿ ನರಸಿಂಹರಾಜಪುರ ತಾಲ್ಲೂಕಿನಲ್ಲಿ 6 ಊರುಗಳಲ್ಲಿ ಸಾವಿರಾರು ಜನರಿಗೆ ಪುನರ್ವಸತಿಗೆ ಏರ್ಪಾಟು ಮಾಡಿದರು. ಆದರೆ ನಾನು ತಮಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ಒಂದು ಅಣೆಕಟ್ಟಿನಿಂದ ದಾವಣಗೆರೆ, ಶಿವಮೊಗ್ಗಕ್ಕೆ ಅನುಕೂಲವಾಯಿತು, ಸಂತೋಷ. ಆದರೆ ಒಂದು ಹೊಳೆ ಇದ್ದಾಗ ಅದರ ಕೆಳಗಡೆ ಇರತಕ್ಕ ಜನರಿಗೆ ಸೌಲಭ್ಯ ಒದಗಿಸಿಕೊಡಬೇಕಾಗುತ್ತದೆ. ಆದರೆ ಮುಳುಗಡೆಯಾಗಿರತಕ್ಕ ಜನರ ಪರಿಸ್ಥಿತಿ ಏನು ಎನ್ನುವುದರ ಬಗ್ಗೆ ಸರ್ಕಾರದವರು ಯೋಚನೆ ಮಾಡಲಿಲ್ಲ. ಅಲ್ಲಿ 600,800 ರೂಪಾಯಿ ಕಂದಾಯ ಕಟ್ಟತಕ್ಕ ಜನರು ಏನಿದ್ದಾರೆ ಅವರಿಗೆ ತೊಂದರೆಯಾಗತಕ್ಕ ಪರಿಸ್ಥಿತಿ ಇದೆ. ಹಿಂದಿನ ಆಡಳಿತದ ವೈಖರಿ ಇದಕ್ಕೆ ಕಾರಣ ಎಂದು ನಾನು ಹೇಳುತ್ತಿದ್ದೇನೆ. ಈ ಅಣೆಕಟ್ಟಿನ ಪಕ್ಕದಲ್ಲಿರತಕ್ಕ ಜನರಿಗೆ ರಸ್ತೆ ಮಾಡಿದ್ದಾರೆ, ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ, ರಾಮಮಂದಿರಗಳನ್ನು ಕಟ್ಟಿದ್ದಾರೆ, ಶಾಲೆಗಳನ್ನು ಕಟ್ಟಿದ್ದಾರೆ. ಆದರೆ ಆ ಶಾಲೆಗಳ ಮೇಲ್ವಿಚಾರಣೆ ಸರಿಯಿಲ್ಲ. ಇದೆಲ್ಲಾ ಮೇಲ್ವಿಚಾರಣೆಯನ್ನು ನೋಡತಕ್ಕ ಜವಾಬ್ದಾರಿಯನ್ನು ಭದ್ರ ಜಲಾಶಯದ ಆಡಳಿತಕ್ಕೆ ವಹಿಸಿಕೊಂಡಿರುವುದರಿಂದ ಸರಿಯಾದ ವ್ಯವಸ್ಥೆ ಇಲ್ಲದೆ ಜನರು ಕಷ್ಟದಲ್ಲಿದ್ದಾರೆ. ಬಹಳ ವರ್ಷಗಳಿಂದ ನಾವು ಕೆಲಸಮಾಡಿದ್ದೇವೆ ಎಂದು ಹೇಳತಕ್ಕ ಜನರಿಗೆ, ಮುಳುಗಡೆಯಾಗಿರತಕ್ಕ ಜನರಿಗೆ ಸೌಲತ್ತನ್ನು ಒದಗಿಸದೇ ಇದ್ದಾಗ, ಅವರು ತೊಂದರೆ ಪಡುತ್ತಿರುವಾಗ ಅದನ್ನು ಪರಿಹಾರ ಮಾಡುವ ಜವಾಬ್ದಾರಿ ವಹಿಸಲಿಲ್ಲವಲ್ಲ ಎಂದು ತುಂಬಾ ಬೇಜಾರು ಆಗುತ್ತದೆ. ಆದುದರಿಂದ ಸಂಬಂಧಪಟ್ಟಿರತಕ್ಕ ಮಂತ್ರಿಗಳು ಮತ್ತು ಇಲಾಖೆಯ ಮುಖ್ಯಾಧಿಕಾರಿಗಳು ಸಾಧ್ಯವಾದಷ್ಟು ಜಾಗ್ರತೆ ಅವರ ಬೇಡಿಕೆಗಳನ್ನು ನೇರವೇರಿಸಿ ಕೊಡದೇ ಹೋದರೆ ಆ ಜನರ ಶಾಪಕ್ಕೆ ತುತ್ತಾಗಬೇಕಾಗುತ್ತದೆ, ಸರ್ಕಾರ ಇದನ್ನು ಮನಗಾಣಬೇಕು. ಮಲೆನಾಡಿನಿಂದ ಬಂದಿರತಕ್ಕ ಮಾನ್ಯ ನಾನಯ್ಯನವರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ತಮಗೆ ಗೊತ್ತಿರುವಹಾಗೆ, ಮಲೆನಾಡಿನಲ್ಲಿ 6 ರಿಂದ 8 ಇಂಚು ಮಳೆಯಾಗುತ್ತದೆ. ಅದು ಸಣ್ಣ ಸಣ್ಣ ಹೊಳೆಗಳು, ಜರಿಗಳು ಹರಿಯತಕ್ಕ ಪ್ರದೇಶ. ಅಲ್ಲಿ ಜೂನ್ ತಿಂಗಳಲ್ಲಿ ಮಳೆ ಪ್ರಾರಂಭವಾದರೆ ಆಗಸ್ಟ್, ಸೆಪ್ಟೆಂಬರ್‌ವರೆಗೆ ಮಳೆ ಬರುತ್ತಾ ಇರುತ್ತದೆ. ಆ ಸಂದರ್ಭದಲ್ಲಿ, ಹೊಳೆಗಳು ಹರಿಯತಕ್ಕ ಸಂದರ್ಭದಲ್ಲಿ ಸೇತುವೆಗಳು ಆಗದೇಹೋದರೆ ಜನರಿಗೆ ತೊಂದರೆಯಾಗುತ್ತದೆ. ಕೊಪ್ಪ, ನರಸಿಂಹರಾಜಪುರ, ಶೃಂಗೇರಿಯಲ್ಲಿ 10–20 ಸೇತುವೆಗಳ ಅವಶ್ಯಕತೆ ಇದೆ. ನಾಲ್ಕೈದು ವರ್ಷಗಳಿಂದ 2–3 ಸೇತುವೆಗಳು ಮಾತ್ರ ಆಗಿದೆ; ಹೆಚ್ಚಿನ ಸಂಖ್ಯೆಯಲ್ಲಿ ಸೇತುವೆಗಳು ಆಗಿಲ್ಲ. ಆದುದರಿಂದ ದಯವಿಟ್ಟು ಆ ಕಡೆ ಗಮನ ಕೊಡದೇಹೋದರೆ ಬಹಳ ತೊಂದರೆಯಾಗುತ್ತದೆ, ಅಲ್ಲಿ ದ್ವೀಪದಂತೆ ಇರಬೇಕಾಗುತ್ತದೆ, ಮಕ್ಕಳು ಶಾಲೆಗಳಿಗೆ ಹೋಗುವುದಕ್ಕಾಗುವುದಿಲ್ಲ, ಜನರು ಪೇಟೆಗೆ ಬರುವುದಕ್ಕಾಗುವುದಿಲ್ಲ. ಆದುದರಿಂದ ಮಲೆನಾಡಿನಲ್ಲಿ ಸೇತುವೆಗಳು ಆಗಬೇಕಾಗಿದೆ. ಜೊತೆಗೆ ರಸ್ತೆ ಸೌಲಭ್ಯ ಒದಗಿಸಿಕೊಡುವುದಕ್ಕೆ ಸರ್ಕಾರ ಏನು ಹಣ ಕೊಡುತ್ತದೆ ಅದು ಬಯಲು ಸೀಮೆಗೂ, ಮಲೆನಾಡಿಗೂ ಒಂದೇ ಸಮನಾಗಿ ಕೊಟ್ಟರೆ ಆಗುವುದಿಲ್ಲ. ಮಲೆನಾಡಿನ ರಸ್ತೆಗಳಲ್ಲಿ ಜಲ್ಲಿ ಹಾಕಿದ ಮೇಲೆ 2–3 ವರ್ಷಗಳಲ್ಲಿ ಟಾರ್ ಹಾಕದೇ ಹೋದರೆ ಪುನ: ಅಷ್ಟು ಹಣವನ್ನು ಖರ್ಚುಮಾಡಬೇಕಾಗುತ್ತದೆ. ಸಂಬಂಧಪಟ್ಟ ಇಲಾಖೆಯವರು ಏನು ಜಲ್ಲಿ ಹಾಕುತ್ತಾರೆ ಅದಕ್ಕೆ ಸಾಧ್ಯವಾದಷ್ಟು ಒಂದೆರಡು ವರ್ಷಗಳಲ್ಲಿ ಟಾರ್ ಹಾಕಿಸಿದರೆ ಹೆಚ್ಚು ಖರ್ಚು ವರ್ಷೇ ವರ್ಷೇ ಬೀಳುವುದಿಲ್ಲ. ಆದುದರಿಂದ ಈ ಕಡೆಗೆ ಹೆಚ್ಚು ಗಮನಕೊಡಬೇಕು, ಈ ಒಂದು ವ್ಯವಸ್ಥೆ ಮಾಡಿಕೊಡಬೇಕು ಎಂದು ಹೇಳುತ್ತೇನೆ. ರೂರಲ್ ಕಮ್ಯುನಿಕೇಷನ್‌ನಲ್ಲಿ ಆರ್.ಸಿ. ರಸ್ತೆಗಳು ಹಿಂದೆ ಆಗಿದೆ. ಆ ರಸ್ತೆಗಳ ಮೇಲ್ವಿಚಾರಣೆ ನೋಡತಕ್ಕ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡಿನವರು ಮಾಡಿಲ್ಲ; ಲೋಕೋಪಯೋಗಿ ಇಲಾಖೆಯವರಿಂದಲೂ ಸಹ ಆಗಿಲ್ಲ. ಹೀಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಹಿಂದೆ ಮಾಡಿರತಕ್ಕ ರಸ್ತೆಗಳು ಈಗ ಹಾಳಾಗಿವೆ. ಆಗಿರತಕ್ಕ ರಸ್ತೆಗಳ ಮೇಲ್ವಿಚಾರಣೆ ನೋಡತಕ್ಕ ಜವಾಬ್ದಾರಿಯನ್ನು ಸರ್ಕಾರ ವಹಿಸಬೇಕು. ಇನ್ನೂ ನಾನು ಅನೇಕ ವಿಚಾರಗಳನ್ನು ಹೇಳಬೇಕು ಎಂದು ಇದ್ದೆ, ಮಾನ್ಯ ನಾನಯ್ಯನವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಲೆನಾಡಿನ ಪರಿಸ್ಥಿತಿ ಒಂದು ರೀತಿಯದಾಗಿದೆ. ಮಲೆನಾಡಿನ ಪರಿಸ್ಥಿತಿಗೂ, ಬಯಲು ಸೀಮೆಯ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಯಾವುದಾದರೂ ಕಾನೂನನ್ನು ಜಾರಿಗೆ ತರುವುದಾದರೆ ಮಲೆನಾಡಿನ ಪರಿಸ್ಥಿತಿಯನ್ನು ತಿಳಿದುಕೊಂಡು ಅಧಿಕಾರಿಗಳು ಮತ್ತು ಸರ್ಕಾರದವರು ಹೆಚ್ಚಿನ ಆದ್ಯ ಗಮನಕೊಡಬೇಕು. ಶಾಲಾಕಟ್ಟಡಗಳ ಬಗ್ಗೆ ಮಾನ್ಯ ನಾನಯ್ಯನವರು ಹೇಳಿದರು. ಕೊಪ್ಪ, ನರಸಿಂಹರಾಜಪುರ, ಶೃಂಗೇರಿಗಳಲ್ಲಿ ಶಾಲೆಗಳು ತುಂಬ ದುರವಸ್ಥೆಯಲ್ಲಿ ಜೂನಿಯರ್ ಕಾಲೇಜಿನಲ್ಲಿ ಬೆಳಿಗ್ಗೆ 8 ರಿಂದ 11 ಗಂಟೆವರೆಗೆ ಒಂದು ಶಿಫ್ಟ್ ನಂತರ 11 ಗಂಟೆಯಿಂದ 5 ಗಂಟೆವರೆಗೆ ಒಂದು ಶಿಫ್ಟ್ ಇದೆ, ಹೀಗಾಗಿ ಶಾಲಾ ಕಟ್ಟಡಗಳ ಸೌಲಭ್ಯವಿಲ್ಲದೆ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ಸ್ಥಿತಿ. ನಮಗೆ ಶಾಸಕರ ಜವಾಬ್ದಾರಿ ಸ್ಥಾನ

ಬಂದಿದೆ, ಜನತಾ ಸರ್ಕಾರ ನವ ಮಾಡಿದೆ. ಈ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುವುದು, ಈಗ ನಾವು ಹೇಗೆ ಮಾಡುವುದು ಎಂಬ ದುಃಖ ಇದೆ; ಆದರೂ ಮಾಡುತ್ತೇವೆಂಬ ಧೈರ್ಯ ನಮಗೆ ಇದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು, ಸರ್ಕಾರ ಸೂಕ್ತ ವ್ಯವಸ್ಥೆ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಈ ಬೇಡಿಕೆಗಳು ಬಹಳ ಇವೆ. ತಾವು ತಿಳಿದುಕೊಳ್ಳಬೇಕು, ಮಾರ್ಚಿ 31ರೊಳಗೆ ಬಡ್ಜೆಟ್ ಇರತಕ್ಕಂಥಾದ್ದು. ಅನೇಕ ಜನ ಕಾಮೆಂಟ್ ಮಾಡಿದರು. 3-4 ತಿಂಗಳಲ್ಲಿ ಏನೂ ಸಾಧಿಸುವುದಕ್ಕೆ ಆಗುವುದಿಲ್ಲ. ಸುಮ್ಮನೆ ಬಾಯಲ್ಲಿ ಹೇಳಬಹುದು, ಆದರೆ ಕೆಲಸಮಾಡುವುದು ಕಷ್ಟವಿದೆ. ಕೆಲಸಮಾಡಿದವರಿಗೆ ಒಂದು ರೀತಿಯಾಗಿ ಹೇಳಿದಾಗ ಅವರ ಮನಸ್ಸಿಗೆ ನೋವಾಗುತ್ತದೆ. ಮನುಷ್ಯನಾದವನಿಗೆ ತನ್ನ ಕರ್ತವ್ಯದ ಬಗ್ಗೆ ಪ್ರಜ್ಞೆ ಇದ್ದಾಗ ಲೋಪವಾಗುವುದಿಲ್ಲ. ನಾನು ಹೆಚ್ಚಿಗೆ ಕಾಲ ತೆಗೆದುಕೊಳ್ಳುವುದಿಲ್ಲ, ನನಗೆ ಮಾತನಾಡುವುದಕ್ಕೆ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್)— ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ಸಾಕಷ್ಟು ಸದಸ್ಯರು ಸಾಕಷ್ಟು ಹೇಳಿದ್ದಾರೆ. ಈ ಬಗ್ಗೆ ಬರೀ ನಮ್ಮ ಬೀದರ್ ವಿಷಯದಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆಯಬೇಕು ಎಂದು ಇದ್ದೇನೆ. ಮತ್ತು ಈ ಬಗ್ಗೆ ಕೆಲವು ಮಾತುಗಳನ್ನು ಆಡಬೇಕು ಎಂದು ಇಚ್ಛೆಪಡುತ್ತಾ ಇದ್ದೇನೆ. ಮೊದಲನೆಯದಾಗಿ, ಮೈನರ್ ಇರಿಗೇಷನ್ ವಿಷಯದಲ್ಲಿ ಹೇಳುವುದಾದರೆ, ಇಡೀ ಕರ್ನಾಟಕ ರಾಜ್ಯಕ್ಕೆ ಬೀದರ್ ಜಿಲ್ಲೆಯನ್ನು ಹೋಲಿಸಿ ನೋಡಿದಾಗ ಬೀದರ್ ಜಿಲ್ಲೆಗೆ ಬರೀ ಐದೇ ಐದು ಟ್ಯಾಂಕ್‌ಗಳನ್ನು ಬಡ್ಜೆಟ್‌ನಲ್ಲಿ ಇಟ್ಟಿದ್ದಾರೆ. ನಿಜವಾಗಿಯೂ ನೋಡಿದರೆ ಬೀದರ್ ಜಿಲ್ಲೆಯಲ್ಲಿ ಸಣ್ಣ ಸಣ್ಣ ಕೆರೆಗಳು ಆಗುವ ಸಲುವಾಗಿ ಬಹಳಷ್ಟು ಸೌಕರ್ಯವಿದೆ, ಸಾಕಷ್ಟು ಸಣ್ಣ ಸಣ್ಣ ಕೆರೆಗಳು ಆಗಬಹುದು. ಹಿಂದಕ್ಕೆ ಅಂದರೆ ಮೊದಲು ನಿಜಾಮರ ಸರ್ಕಾರವಿದ್ದಾಗ ಸಾಕಷ್ಟು ಸಣ್ಣ ಸಣ್ಣ ಕೆರೆಗಳು ಇದ್ದುವು. ಆದರೆ ಕೆಲವು ಜನರು ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿದ್ದರಿಂದ ಅದೆಲ್ಲಾ ಅಗ್ರಿಕಲ್ಚರಲ್ ಲ್ಯಾಂಡಾಗಿ ರೂಪಾಂತರಗೊಂಡಿವೆ. ಇಂತಹ ಕೆರೆಗಳು ಸಾಕಷ್ಟು ಅಲ್ಲಿ ಆಗಲಿಕ್ಕೆ ಸಾಧ್ಯವಿದೆ; ಅದಕ್ಕೆ ಸಾಕಷ್ಟು ಕೆಪಾಸಿಟಿ ಇದೆ. ಆದರೂ ಕೂಡ ಆ ಜಿಲ್ಲೆಯಲ್ಲಿ ಬರೀ ಐದೇ ಐದು ಕೆರೆಗಳನ್ನು ತೆಗೆದುಕೊಂಡಿರುವುದರಿಂದ ಆ ಜಿಲ್ಲೆಗೆ ಅನ್ಯಾಯವಾಗಿದೆ ಎಂದು ನಾನು ಹೇಳಬಯಸುತ್ತೇನೆ. ನಮ್ಮಲ್ಲಿ ದೊಡ್ಡ ನೀರಾವರಿ ಯೋಜನೆ ಎಂದರೆ ಕಾರಂಜಿ ಪ್ರಾಜೆಕ್ಟ್ ಒಂದೇ. ತಮಗೆ ಗೊತ್ತಿರುವಹಾಗೆ, ಈ ಪ್ರಾಜೆಕ್ಟ್ ಸುಮಾರು 10 ವರ್ಷಗಳ ಹಿಂದೆ ಪ್ರಾರಂಭವಾಗಿದೆ. ಆದರೂ ಅದು ಮುಗಿಯುವಂಥ ಪರಿಸ್ಥಿತಿಯಲ್ಲಿಲ್ಲ. ಅದಕ್ಕೆ ಈ ವರ್ಷದ ಬಜೆಟ್ಟಿನಲ್ಲಿ ಕೇವಲ 3 ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಈ ರೀತಿಯಾದರೆ ಈ ಕೆಲಸ ಯಾವಾಗ ಮುಗಿಯುತ್ತದೋ ನಮಗೆ ಸಂಶಯವಾಗುತ್ತಿದೆ. ಮಾನ್ಯ ದೇವೇಗೌಡರು ಬೀದರ್ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಾಗ ಮುಂದಿನ ವರ್ಷ ಜೂನ್ ಒಳಗಾಗಿ ಒಂದು ಸಾವಿರ ಹೆಕ್ಟೇರ್ ಭೂಮಿಗೆ ನೀರು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಅದು ಸಾಧ್ಯವಾಗುವ ಬಗ್ಗೆ ನನಗಂತೂ ವಿಶ್ವಾಸವಿಲ್ಲ. ಈ ಪ್ರಾಜೆಕ್ಟ್ ಮುಗಿಸುವುದಕ್ಕೆ ಹೆಚ್ಚು ಹಣ ಒದಗಿಸಬೇಕು. ಇದರ ಬಗೆ ಗಮನ ಹರಿಸಿ ಕೆಲಸ ಬೇಗ ಆಗುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ರಸ್ತೆಗಳ ಬಗ್ಗೆ ಹೇಳಬೇಕೆಂದರೆ, ಮಾನ್ಯ ಮಂತ್ರಿಗಳು ನಮ್ಮ ಭಾಗಕ್ಕೆ ಬಂದಿದ್ದಾಗ ಅವರಿಗೆ ತೋರಿಸಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಟಾರ್ ರಸ್ತೆಗಳು ಕಡಿಮೆ ಇದ್ದು ಕಚ್ಚಾ ರಸ್ತೆಗಳೇ ಜಾಸ್ತಿ ಇವೆ. ಅದರ ಮೇಲೆ ಮನುಷ್ಯರು ನಡೆಯುವುದಕ್ಕೆ ಸಾಧ್ಯವಿಲ್ಲ. ಮನುಷ್ಯರೇ ನಡೆಯುವುದಕ್ಕಾಗದಿದ್ದ ಮೇಲೆ ವಾಹನಗಳು ಹೇಗೆ ಓಡಾಡುತ್ತವೆ ಎಂಬುದನ್ನು ಯೋಚನೆ ಮಾಡಬೇಕು. ಬೀದರ್ ಜಿಲ್ಲೆಯಲ್ಲಿನ ರಸ್ತೆ ಬಗ್ಗೆ ನಾನು ಹೇಳಬೇಕಾಗಿಲ್ಲ. ಈಗಿನ ಸರ್ಕಾರದಲ್ಲಿರುವ ಮಂತ್ರಿಗಳಾಗಲೀ ಹಿಂದಿನ ಸರ್ಕಾರದಲ್ಲಿದ್ದ ಮಂತ್ರಿಗಳಾಗಲೀ ನಮ್ಮ ಜಿಲ್ಲೆಗೆ ಬಂದಾಗ ಏನಪ್ಪ ನಿಮ್ಮ ರಸ್ತೆ ಪರಿಸ್ಥಿತಿ ಹೀಗಿದೆ ಎಂದು ಕೇಳುತ್ತಾರೆ. ಆದರೆ ರೋಡಿನ ಸಲುವಾಗಿ ಬಜೆಟ್ ಪ್ರಾವಿಷನ್ ಹೆಚ್ಚಾಗಿ ನಮಗೆ ಕೊಡುತ್ತಿಲ್ಲ. ಆದ್ದರಿಂದ ರಸ್ತೆ ವಿಷಯವಾಗಿ ವಿಶೇಷ ಗಮನ ವಹಿಸಬೇಕೆಂದು ಹೇಳುತ್ತೇನೆ. ನಮ್ಮ ಕಡೆ ಲಿಂಕ್ ರೋಡ್‌ಗಳಿವೆ. ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ಬರಬೇಕಾದರೆ ಕೆಲವು ಲಿಂಕ್ ರೋಡ್‌ಗಳಿವೆ. ನಾರಂಜಾ ನದಿ ಮೇಲೆ ಆಂಧ್ರ ಪ್ರದೇಶದವರು 12 ಲಕ್ಷ ರೂಪಾಯಿ ಖರ್ಚು ಮಾಡಿ ಸೇತುವೆ ಕಟ್ಟಿದ್ದಾರೆ. ಆದರೆ ಇತ್ತ ಕಡೆ ರಸ್ತೆ ಕೆಲಸ ಮಾಡಿಲ್ಲ. ಆ ಕೆಲಸ ಹಾಗೇ ಪೆಂಡಿಂಗ್ ಇದೆ. ಅದೇ ತರಹ ಮಾಂದ್ರ ಹತ್ತಿರ, ಬೀದರ್ ತಾಲ್ಲೂಕಿನ ಚಿಲ್ಲಂಗಿ ಹತ್ತಿರ ಆಂಧ್ರ ಪ್ರದೇಶದವರು 90 ಲಕ್ಷ ರೂಪಾಯಿ ಖರ್ಚು ಮಾಡಿ ಸೇತುವೆ ಕಟ್ಟುವ ಹಂತದಲ್ಲಿದ್ದಾರೆ. ನಮ್ಮ ಸರ್ಕಾರಕ್ಕೆ ಆ ಪ್ರಪೋಸಲ್ ಬಂದಿದ್ದು ನಮ್ಮ ಸರ್ಕಾರದ ಒಪ್ಪಿಗೆ ಸಿಕ್ಕಿದರೆ ಲಿಂಕ್ ರೋಡ್ ಆಗುತ್ತದೆ. ಅದನ್ನು ಮಾಡಿದರೆ ಬೀದರ್‌ಗೆ ಸಾಕಷ್ಟು ಕಮರ್ಷಿಯಲ್ ಇಂಪಾರ್ಟೆನ್ಸ್ ಸಿಗುತ್ತದೆ. ಆದ್ದರಿಂದ ಈ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಅದೇರೀತಿ ಕಟ್ಟಡಗಳ ಬಗ್ಗೆ ಹೇಳುವುದಾದರೆ, ಹಿಂದಿನ ಸರ್ಕಾರದಲ್ಲಿ ನಮ್ಮ ಭಾಗದ ಮಂತ್ರಿಗಳಿದ್ದರೂ ಈ ಬಗ್ಗೆ ಅಷ್ಟೊಂದು ಗಮನ ಕೊಟ್ಟಿಲ್ಲ ಎಂದೆನಿಸುತ್ತಿದೆ. ಆದ್ದರಿಂದ ಈಗ

ಲಾದರೂ ನಮ್ಮ ಭಾಗಕ್ಕೆ ಬಜೆಟ್ಟಿನಲ್ಲಿ ಹೆಚ್ಚು ಪ್ರಾವಿಷನ್ ಮಾಡಿ ಆ ಕಡೆ ಗಮನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಕೆಲವು ಸಾರಿ ಬಜೆಟ್ಟಿನಲ್ಲಿ ಹಣ ಇದ್ದರೂ ಬೇರೆ ಬೇರೆ ಕಾರಣಗಳಿಂದ ಕೆಲಸಗಳು ಆಗುವುದಿಲ್ಲ. ಉದಾಹರಣೆಗೆ, ರಸ್ತೆ ಕೆಲಸ ಏತಕ್ಕೆ ಆಗಲಿಲ್ಲ ಎಂದು ಅಧಿಕಾರಿಗಳನ್ನು ಕೇಳಿದರೆ ರೋಲರ್ ಇಲ್ಲ, ಮತ್ತೊಂದಿಲ್ಲ ಎಂದು ಕಾರಣ ಹೇಳುತ್ತಾರೆ. ಹೀಗಾಗಿ ಬಜೆಟ್ಟಿನಲ್ಲಿ ಹಣ ಸ್ಯಾಂಕ್ಷನ್ ಆಗಿದ್ದರೂ ಲ್ಯಾಪ್ಸ್ ಆಗಿ ವಾಪಸ್ ಹೋಗುತ್ತದೆ. ನಮ್ಮ ಬೀದರ್ ಕಡೆ ಈರೀತಿ ಲ್ಯಾಪ್ಸ್ ಆಗುವ ಸನ್ನಿವೇಶ ಬಹಳ ಇದೆ. ಲೋಕೋಪಯೋಗಿ ಇಲಾಖೆ ಕೆಲಸಗಳು ನಮ್ಮ ಕಡೆ ಶೂನ್ಯಾವಸ್ಥೆಯಲ್ಲಿವೆ. ಈ ಬಗ್ಗೆ ವಿಚಾರ ಮಾಡಿ ಈ ಇಲಾಖೆ ಚೆನ್ನಾಗಿ ಕೆಲಸ ಮಾಡುವಂತೆ ಗಮನ ಕೊಡಬೇಕೆಂದು ಹೇಳಿ, ಈ ಬೇಡಿಕೆಗೆ ಬೆಂಬಲ ಸೂಚಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ಚೌಡಯ್ಯ (ಕೆರಗೋಡು).—ಮಾನ್ಯ ಉಪಾಧ್ಯಕ್ಷರೆ, ಈ ಲೋಕೋಪಯೋಗಿ ಇಲಾಖೆ ಬೇಡಿಕೆ ಮೇಲೆ....

ಉಪಾಧ್ಯಕ್ಷರು.—ಇವತ್ತು ಚರ್ಚೆ ಮುಗಿಸಿಬಿಡೋಣ, ಎಷ್ಟು ಹೊತ್ತಾದರೂ ಕುಳಿತುಕೊಂಡು ಮುಗಿಸೋಣ. ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನಾಳೆಯೂ ಚರ್ಚೆ ಮುಂದುವರೆಸಬೇಕು. ಏಕೆಂದರೆ ಚರ್ಚೆಗಿಂತ ಬೇರೆ ವಿಷಯಕ್ಕೇ ಹೆಚ್ಚು ಸಮಯ ಹೋಗಿದೆ.

ಉಪಾಧ್ಯಕ್ಷರು.—ನಾನು 9 ಗಂಟೆವರೆಗೂ ಕುಳಿತುಕೊಳ್ಳುವುದಕ್ಕೆ ತಯಾರಿದ್ದೇನೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಮಂಚೇಗೌಡ.—ನಾಳೆಯೂ ಚರ್ಚೆ ಮುಂದುವರೆಯಲಿ.

ಉಪಾಧ್ಯಕ್ಷರು.—ನಾಳೆ ಬೇರೆ ಬಿಸಿನೆಸ್ ಇದೆಯಲ್ಲ ?

ಶ್ರೀ ಆರ್. ಎನ್. ನಾಯಕ್.—ಬೇರೆ ವಿಚಾರಗಳಿಗೇ ಹೆಚ್ಚು ಸಮಯ ಹೋಗಿದೆ. ಆದ್ದರಿಂದ ನಾಳೆಯೂ ಮುಂದುವರೆಸಬೇಕು.

ಉಪಾಧ್ಯಕ್ಷರು.—ನಾನು ಹತ್ತು ಗಂಟೆಯಾದರೂ ಇವತ್ತು ಇರುವುದಕ್ಕೆ ತಯಾರಾಗಿದ್ದೇನೆ. ಚರ್ಚೆ ಇವತ್ತೇ ಮುಗಿಸೋಣ.

ಶ್ರೀ ಎಚ್.ಡಿ. ಚೌಡಯ್ಯ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದೆ 6 ಬೇಡಿಕೆಗಳಿವೆ. ಅದೆಲ್ಲದರ ಬಗ್ಗೆ ಮಾತನಾಡಬೇಕಾದರೆ ಬಹಳ ಕಾಲ ಬೇಕಾಗುತ್ತದೆ, ಆದರೆ ಕಾಲದ ಮಿತಿಗನುಗುಣವಾಗಿ ಕೇವಲ ಎರಡು ಮೂರು ಬೇಡಿಕೆಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ, ಮೊದಲನೆಯದಾಗಿ, ರಸ್ತೆ ಮತ್ತು ಸೇತುವೆಗಳ ಬಗ್ಗೆ ಹೇಳುತ್ತೇನೆ, ನಿಮ್ಮ ಇಲಾಖೆಯವರು ಕೊಟ್ಟಿರತಕ್ಕ ವರದಿಯಲ್ಲಿ ರಸ್ತೆ ಸೇತುವೆಗಳು ಈ ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇಕಡ 98ರಷ್ಟು ಆವರಿಸಿದೆ ಎಂದು ಹೇಳಿದ್ದೀರಿ. ಇದು ಸತ್ಯವಾದ ವಿಚಾರ. ರಸ್ತೆಗಳ ಅಂಕಿಅಂಶವನ್ನು ಕೊಡುವಾಗ ಕ್ಲಾಸಿಫಿಕೇಷನ್ ಆಫ್ ರೋಡ್ಸ್ ಎಂದು 6 ವಿಭಾಗಗಳನ್ನಾಗಿ ಮಾಡಿದ್ದಾರೆ. ನ್ಯಾಷನಲ್ ಹೈವೇ, ಸ್ಟೇಟ್ ಹೈವೇ, ಎಂ.ಡಿ.ಆರ್; ಒ.ಡಿ.ಆರ್ ; ವಿಲೇಜ್ ರೋಡ್ಸ್ ಮತ್ತು ರೂರಲ್ ಕಮ್ಯುನಿಕೇಷನ್ ರೋಡ್ಸ್ ಎಂದು 6 ವರ್ಗಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಕೊಡುತ್ತೇನೆ; ತಾವು ಒ.ಡಿ.ಆರ್. ಮತ್ತು ಎಂ.ಡಿ.ಆರ್, ಎಂದು ಏನು ಪ್ರತ್ಯೇಕವಾಗಿ ಮಾಡಿದ್ದೀರಿ ಅದರ ಬದಲು ಒಂದೇ ಹೆಸರಿನಲ್ಲಿ ಇಡತಕ್ಕದ್ದು ಸೂಕ್ತವೆಂದು ನನ್ನ ಭಾವನೆ. ಇವತ್ತು ಶೇಕಡ 75ರಿಂದ 80 ಭಾಗ ಜನ ಹಳ್ಳಿಗಾಡಿನಲ್ಲಿದ್ದು ವ್ಯವಸಾಯದಲ್ಲಿ ತೊಡಗಿರತಕ್ಕ ಸಂದರ್ಭದಲ್ಲಿ ಕ್ಲಾಸಿಫಿಕೇಷನ್ ಆಫ್ ರೋಡ್ಸ್‌ನಲ್ಲಿ ಬಹುಮುಖ್ಯವಾದುದು ವಿಲೇಜ್ ರೋಡ್‌ಗಳು. ನಮ್ಮ ಮಂಡ್ಯ ಜಿಲ್ಲೆ ತೆಗೆದುಕೊಳ್ಳುವುದಾದರೆ, ಶ್ರೀಮಾನ್ ಪರಮೇಶ್ವರಪ್ಪನವರು ಅಲ್ಲಿ ಹೆಚ್ಚು ರಸ್ತೆಗಳಿವೆ ಎಂದು ಹೇಳುತ್ತಿದ್ದರು. ಅವರು ಮಂಡ್ಯ ಬೆಂಗಳೂರು ರೋಡಿನಲ್ಲಿ ಕಾರು ಬಸ್ಸಿನಲ್ಲಿ ಓಡಾಡಿರಬಹುದು. ಅವರೇ ಹೇಳಿರುವುದರಲ್ಲಿ ಒಂದು ಮಾತು ನಿಜ. ಮಂಡ್ಯ ಜಿಲ್ಲೆಯಲ್ಲಿ ಇರತಕ್ಕ ರಸ್ತೆಗಳು ಬೇರೆ ಯಾವ ಜಿಲ್ಲೆಯಲ್ಲೂ ರಸ್ತೆಗಳು ಇಲ್ಲ. ಸಕ್ಕರೆ ಕಾರ್ಖಾನೆ ಪ್ರದೇಶದಲ್ಲಿ ಸುಮಾರು 4 ಸಾವಿರ ಕಿಲೋಮೀಟರ್ ರಸ್ತೆ ಇದೆ. ಆದರೆ ಆ –ಸ್ತೆಗಳ ಪರಿಸ್ಥಿತಿ ಹೇಗಿದೆ ಎಂದರೆ ಬಹಳ ದುಸ್ಥಿತಿಯಲ್ಲಿವೆ. ಕೆಲವು ರಸ್ತೆಗಳು ಜಲ್ಲಿ ಕಂಡು 15 ವರ್ಷಗಳಾಗಿವೆ. ಅಲ್ಲಿ ನಡೆಯುವುದಕ್ಕೆ ಜನ ಕಣ್ಣೀರು ಬೀಳುವುದಲ್ಲ ಗಾಡಿಯನ್ನು ಎಳೆಯತಕ್ಕ ದನಗಳು ಕಣ್ಣೀರನ್ನು ಇಡತಕ್ಕ ಸನ್ನಿವೇಶ ಇದೆ. ಕಬ್ಬು, ಗೊಬ್ಬರ ಮತ್ತು ವ್ಯವಸಾಯೋತ್ಪನ್ನಗಳನ್ನು ಎಳೆಯತಕ್ಕ ಎತ್ತುಗಳು ಬಹಳ ಕಷ್ಟಪಟ್ಟು ಗಾಡಿ ಎಳೆಯುತ್ತಿವೆ.

5 p. m.

ಆ ಕೆಲಸಕ್ಕೆ ಒದಗಿಸಿರತಕ್ಕದ್ದು ಒಂದು ಕಿಲೋಮೀಟರ್ ರಸ್ತೆಗೆ 1500 ರೂಪಾಯಿಗಳು ಮಾತ್ರ. ಬಹುಶಃ ರಸ್ತೆ ಪಕ್ಕದಲ್ಲಿರತಕ್ಕ ಗಿಡಗಳನ್ನು ಕೀಳುವುದಕ್ಕೆ ಅಥವಾ ರಸ್ತೆಗೆ ಮಣ್ಣು ಹಾಕು

ವುದಕ್ಕೆ ಅಷ್ಟು ಹಣ ಸಾಲದು. ಒಂದು ಕಿಲೋಮೀಟರ್ ದೂರದ ರಸ್ತೆಯನ್ನು ಮೆಟಲಿಂಗ್ ಮಾಡ ಬೇಕಾದರೆ 15 ಸಾವಿರ ರೂಪಾಯಿ ಬೇಕಾಗುತ್ತದೆ. ಗ್ರಾಮೀಣ ರಸ್ತೆಗಳೇನಿವೆ ಅವುಗಳನ್ನು ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಒ.ಡಿ.ಆರ್. ಅಥವಾ ಎನ್.ಡಿ.ಆರ್. ದರ್ಜೆಗೆ ಏರಿಸತಕ್ಕದ್ದು ಮತ್ತು ಒಂದು ಕಿಲೋಮೀಟರ್ ರಸ್ತೆಗೆ 5 ಸಾವಿರ ರೂಪಾಯಿಗಳನ್ನಾದರೂ ಮೆಯಿಂಟೆನೆನ್ಸ್ ಗ್ರಾಂಟ್ ಎಂದು ಕೊಟ್ಟರೆ ರಸ್ತೆಗಳನ್ನು ಸ್ವಲ್ಪ ಮಟ್ಟಿಗೆ ದುರಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯದಲ್ಲಿ ಹೇಳುತ್ತಾಹೋದರೆ ಗಂಟೆಗಟ್ಟಲೆ ಹೇಳಬಹುದು. ಆದರೆ ಸರ್ಕಾರಕ್ಕೆ ಒಂದು ಸಲಹೆ ಮಾತ್ರ ಕೊಡಬಯಸುತ್ತೇನೆ. ಹಳ್ಳಿಗಾಡಿನಲ್ಲಿ ಕಳೆದ 30-35 ವರ್ಷಗಳಿಂದ ಬೇಕಾದಷ್ಟು ರಸ್ತೆಗಳಾಗಿವೆ. ಅವು ಸ್ಕೇರ್ಸಿಟಿ ರಿಲೀಫ್‌ನಲ್ಲಿ ಎನ್‌ಆರ್‌ಡಿಪಿ ಯೋಜನೆಯಲ್ಲಿ ರೂರಲ್ ಕಮ್ಯುನಿಕೇಷನ್ ಗ್ರಾಂಟ್ಸ್‌ನಲ್ಲಿ ಆಗಿವೆ. ಹೀಗೆ ಹತ್ತಾರು ಏಜನ್ಸಿಗಳಿಂದ ಆಗಿರತಕ್ಕ ರಸ್ತೆಗಳನ್ನು ನೋಡಿದರೆ ಹಳ್ಳಿಗಾಡಿನಿಂದ ಬಾದಿರತಕ್ಕ ತಮಗೆ ಗೊತ್ತಾಗುತ್ತದೆ. ಅನೇಕ ಗ್ರಾಮಗಳಲ್ಲಿ ರಸ್ತೆಗಳು ಇದ್ದವು ಎಂದು ಹೇಳುವುದಕ್ಕೆ ಕೂಡ ಆಗುವುದಿಲ್ಲ. ಏಕೆಂದರೆ ಅವು ಅಷ್ಟು ಮಾಸಿಹೋಗಿವೆ. ಆದ್ದರಿಂದ, ಈ ಬಗ್ಗೆ ಸರ್ಕಾರದವರು ಸಮಗ್ರ ಕಾರ್ಯಕ್ರಮ ಹಾಕಿಕೊಂಡು ರಸ್ತೆಗಳನ್ನು ಸರಿಯಾದ ಸ್ಥಿತಿಗೆ ತರಬೇಕೆಂದು ಹೇಳಬಯಸುತ್ತೇನೆ, ಪ್ರತಿ ತಾಲ್ಲೂಕು ಬೋರ್ಡಿನಲ್ಲಿ ಸುಮಾರು 2-3 ಕಿಲೋ ಮೀಟರ್ ರಸ್ತೆಗಳಿವೆ. ಕಳೆದ ಸರ್ಕಾರ ಅವುಗಳ ಸಲುವಾಗಿ ಒಂದು ಯೋಜನೆಯನ್ನು ತಯಾರಿಸಿತ್ತು. ಬಹುಶಃ ಅದು ಸರ್ಕಾರದಲ್ಲಿ ಪೆಂಡಿಂಗ್ ಇದೆ ಎಂದು ಕಾಣಿಸುತ್ತದೆ. ತಾಲ್ಲೂಕುಬೋರ್ಡ್ ರಸ್ತೆ ಗಳನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡು ಅವುಗಳನ್ನು ಮೆಯಿಂಟೇನ್ ಮಾಡ ತಕ್ಕ ಕಾರ್ಯಕ್ರಮವನ್ನು ಮಾನ್ಯ ಸಚಿವರು ಹಾಕಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ, ಇನ್ನು ಮೆಷಿನರಿ ಮತ್ತು ಎಕ್ವಿಪ್‌ಮೆಂಟ್ಸ್ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಎಲ್ಲರಿಗೂ ಅನುಭವ ಇದೆ. ನಾನು ಇದರ ಬಗ್ಗೆ ಕಳೆದ 5-6 ವರ್ಷಗಳಿಂದ ಅನೇಕ ಸಾರಿ ಉನ್ನತ ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ ಮತ್ತು ಹಿಂದಿನ ಸಚಿವರ ಗಮನಕ್ಕೂ ತಂದಿದ್ದೇನೆ ಹಾಗೂ ಹಾಲಿ ಇರತಕ್ಕ ಸಚಿವರ ಗಮನಕ್ಕೂ ತಂದಿ ದ್ದೇನೆ. ಆ ರಸ್ತೆಗಳನ್ನು ದುರಸ್ತಿ ಮಾಡಲು ಬೇಕಾದ ರೋಲರ್ಸ್ ಮತ್ತು ಅಸ್ಫಾಲ್ಟಿಂಗ್ ಮಾಡಲು ಬೇಕಾದ ಎಕ್ವಿಪ್‌ಮೆಂಟ್ಸ್ ಅಭಾವ ಬಹಳವಾಗಿದೆ. ಯಾವ ಸಬ್-ಡಿವಿಜನಲ್ ಅಥವಾ ಡಿವಿಜನ್ನಿಗೆ ಹೋದರೂ ನಮಗೆ ರೋಲರ್ಸ್ ಇಲ್ಲ, ಎಕ್ವಿಪ್‌ಮೆಂಟ್ಸ್ ಇಲ್ಲವೆಂಬ ಮಾತನ್ನು ಕೇಳುತ್ತಿದ್ದೇವೆ. ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡತಕ್ಕದ್ದು ಸೂಕ್ತವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಣ್ಣ ನೀರಾವರಿ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸುಮಾರು 400 ಸಣ್ಣ ನೀರಾವರಿ ಕಾಮಗಾರಿಗಳನ್ನು 15 ಕೋಟಿ ರೂಪಾಯಿಗಳಲ್ಲಿ ತೆಗೆದುಕೊಳ್ಳಬೇಕೆಂದು ಈ ಸಾರಿಯ ಆಯವ್ಯಯದಲ್ಲಿ ಸೇರಿಸಿದ್ದಾರೆ. ಕಳೆದ ಹತ್ತಾರು ವರ್ಷಗಳ ಅನುಭವವನ್ನು ನೋಡಿದರೆ ಇದರಿಂದ ಏನೂ ಪ್ರಯೋಜನವಾಗಿಲ್ಲವೆಂದು ಹೇಳುತ್ತೇನೆ. ಏಕೆಂದರೆ ಬಡ್ಜೆಟ್ಟಿನಲ್ಲಿ ಕೆಲವು ಕಾಮ ಗಾರಿಗಳನ್ನು ಸೇರಿಸಿ ಟೆಕ್ನಿಕಲ್ ಫೀಸಿಬಿಲಿಟಿ ಇಲ್ಲ, ಅಡ್ಮಿನಿಸ್ಟ್ರೇಟೀವ್ ಫೀಸಿಬಿಲಿಟಿ ಇಲ್ಲವೆಂದು ತಳ್ಳಿ ಹಾಕುತ್ತಾರೆ, ಕಳೆದ ನಾಲ್ಕಾರು ವರ್ಷಗಳಿಂದ ಬಂದಿರತಕ್ಕ ಅನೇಕ ಕಾಮಗಾರಿಗಳು ಈರೀತಿ ಆಗುತ್ತಿವೆ. ಯಾವುದೇ ಒಂದು ಸಣ್ಣ ನೀರಾವರಿ ಕಾಮಗಾರಿಗೆ ಮಂಜೂರಾತಿ ಕೊಡಬೇಕಾದರೆ ಟೆಕ್ನಿಕಲ್ ಮತ್ತು ಅಡ್ಮಿನಿಸ್ಟ್ರೇಟೀವ್ ಫೀಸಿಬಿಲಿಟಿ ಇರಬೇಕೆಂಬ ನಾರ್ಮ್ಸ್ ಏನಿದೆ ಇವು ಓಬಿರಾಯನ ಕಾಲದ ನಾರ್ಮ್ಸ್. ಇದರಲ್ಲಿ ಆಮೂಲಾಗ್ರವಾದ ಬದಲಾವಣೆಗಳು ಆಗಬೇಕು. ಇಲ್ಲದಿದ್ದರೆ ಅನೇಕ ಕಾಮಗಾರಿಗಳಿಗೆ ಅಡ್ಮಿನಿಸ್ಟ್ರೇಟೀವ್ ಫೀಸಿಬಿಲಿಟಿಯಾಗಲಿ ಟೆಕ್ನಿಕಲ್ ಫೀಸಿಬಿಲಿಟಿಯಾಗಲಿ ದೊರೆಯುವುದಿಲ್ಲ. ಟೆಕ್ನಿಕಲ್ ಫೀಸಿಬಿಲಿಟಿ ಬರಬೇಕಾದರೆ ಇಷ್ಟು ನೀರು ಬರಬೇಕು, ಇಷ್ಟು ನೀರು ತುಂಬಬೇಕು ಎಂದು ಹೇಳುತ್ತೀರಿ, ಮತ್ತೆ ಮಳೆ ಆಸರೆ ಬೇರೆ ತೆಗೆದುಕೊಳ್ಳುತ್ತೀರಿ. ಇದನ್ನೆಲ್ಲ ಗಣನೆಗೆ ತೆಗೆದುಕೊಳ್ಳುವಾಗ 400ರಲ್ಲಿ 50-60 ಕಾಮಗಾರಿಗಳಿಗೆ ಮಾತ್ರ ಫೀಸಿಬಿಲಿಟಿ ಬರಬಹುದು. ಆದ್ದರಿಂದ ಹೊಸ ನಾರ್ಮ್ ಗೊತ್ತು ಮಾಡತಕ್ಕ ಕಾಲದಲ್ಲಿ ಏನೇನು ಗಮನಿಸಬೇಕೆಂಬುದಕ್ಕೆ ನನ್ನ ಸಲಹೆ ಏನೆಂದರೆ, ಉತ್ಪಾದನಾ ಸಾಮರ್ಥ್ಯ ಏನಿದೆ ಅದನ್ನು ತೆಗೆದುಕೊಳ್ಳತಕ್ಕದ್ದು ಸೂಕ್ತ ಎಂದು. ಒಂದು ಕೆರೆಯನ್ನು ಕಟ್ಟಿದಾಗ ಯಾವುದು ಅಚ್ಚುಕಟ್ಟು ಪ್ರದೇಶವಾಗುತ್ತದೆ ಅಲ್ಲಿ ರಾಗಿಯನ್ನು ಬೆಳೆಯುವುದಕ್ಕಾಗುವುದಿಲ್ಲ. ಒಂದು ಕೆರೆ ಕಟ್ಟಿದ ಮೇಲೆ ಆ ಕೆರೆ ನೀರಿನ ಆಶ್ರಯದಿಂದ ಒಂದು ಎಕರೆ ಜಮೀನಿನಲ್ಲಿ 5-6 ಕ್ವಿಂಟಾಲ್ ರಾಗಿ, ಜೋಳ ಬೆಳೆಯುವುದಕ್ಕೆ ಸಾಧ್ಯವಾದರೆ ಆಗ ಉತ್ಪಾದನಾ ಸಾಮರ್ಥ್ಯ ಜಾಸ್ತಿ ಆದಂತಾಗುತ್ತದೆ. ಇದನ್ನು ಗಮನಕ್ಕೆ ತೆಗೆದುಕೊಂಡು, ಇದನ್ನೇ ಅಳತೆಗೋಲಾಗಿ ಇಟ್ಟುಕೊಂಡು ಸಣ್ಣ ನೀರಾವರಿ ಕಾಮಗಾರಿ ಗಳನ್ನು ಮಂಜೂರುಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಸಣ್ಣ ನೀರಾವರಿ ಕಾಮಗಾರಿಗಳನ್ನು ರಿಪೇರಿ ಮಾಡತಕ್ಕ ಕೆಲಸ ಏನಿದೆ ಇದರ ಹೆಡ್ ಆಫ್ ಅಕೌಂಟ್ 306 ಎಂದು ಹೇಳುತ್ತಾರೆ. ಇದರಿಂದ ನಮ್ಮ ಕ್ಷೇತ್ರದಲ್ಲಿ ಮಾತ್ರವಲ್ಲ ಎಲ್ಲ ಕ್ಷೇತ್ರಗಳಲ್ಲೂ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ನಮ್ಮಲ್ಲಿ

ಕ್ರಮಾಂಕ No............83

ಮೊನ್ನೆ ಭಾನುವಾರ ಬಹಳ ಅಪರೂಪಕ್ಕೆ ಮಳೆಯಾಯಿತು. ನಿನ್ನೆ ನಾನು ರೈತರನ್ನು ಕೇಳಿದಾಗ ಅವರು ಹೇಳಿದರು. ಮಳೆ ಏನೋ ಬಂತು, ಆದರೆ ಬಂದ ನೀರು ಬಂದಹಾಗೆ ಹೋಗುತ್ತಿದೆ ಎಂದು ಹೇಳಿದರು. ಏಕೆಂದರೆ ಅಲ್ಲಿ ಕಂಟ್ರೋಲಿಂಗ್ ಅರೇಂಜ್‌ಮೆಂಟ್ಸ್ ಇಲ್ಲ. ಇದರ ಬಗ್ಗೆ ನಾನು ಚೀಫ್ ಇಂಜಿನಿಯರ್‌ರವರಿಂದ ಹಿಡಿದು ಅಸಿಸ್ಟೆಂಟ್ ಇಂಜಿನಿಯರ್‌ರವರೆಗೆ ಮಾತನಾಡಿದ ಸಂದರ್ಭದಲ್ಲಿ ಹೇಳುತ್ತಾರೆ, '306ರ ಹೆಡ್ ಆಫ್ ಅಕೌಂಟ್ಸ್‌ನಲ್ಲಿ ನಮಗೆ ಗ್ರಾಂಟ್ ಇಲ್ಲ, ಎಂದು. ನನ್ನ ಕ್ಷೇತ್ರದಲ್ಲಿ ಅರ್ಧಭಾಗ ಖುಷ್ಕಿ ಮತ್ತು ಅರ್ಧ ಭಾಗ ತರಿ ಜಮೀನು ಇದೆ. ಇದಕ್ಕೆ ನೀರಿನ ಅಗತ್ಯ ಬಹಳ ಆದರೆ ನನ್ನ ತಾಲ್ಲೂಕಿನಲ್ಲಿರತಕ್ಕ ಸುಮಾರು 150–200 ಕೆರೆಗಳ ಪೈಕಿ 4–5ಕ್ಕೆ ಮಾತ್ರ ಕಂಟ್ರೋಲಿಂಗ್ ಅರೇಂಜ್‌ಮೆಂಟ್ ಇದೆ ಎಂದು ಹೇಳುತ್ತೇನೆ. ಇದು ಇಲ್ಲದಿದ್ದರೆ ನೀರೆಲ್ಲ ನಷ್ಟವಾಗುತ್ತದೆ. ಇದು ರಾಷ್ಟ್ರೀಯ ನಷ್ಟ. ಬಂದ ಮಳೆ ನೀರನ್ನು ಸಂಗ್ರಹಣೆ ಮಾಡಿ ಇಟ್ಟುಕೊಂಡು ಭೂಮಿಗೆ ಉಪಯೋಗಿಸ ತಕ್ಕ ವ್ಯವಸ್ಥೆ ಮಾಡದೆ ಹೋದರೆ ನಿಜವಾಗಿ ಇದು ಯಾರ ಅಪರಾಧ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಯಾವ ಕೆರೆಗೇ ಆಗಲೀ ಕಂಟ್ರೋಲಿಂಗ್ ಅರೇಂಜ್‌ಮೆಂಟನ್ನು ಸುವ್ಯವಸ್ಥಿತ ವಾಗಿ ಮಾಡತಕ್ಕ ಕ್ರಮವನ್ನು ಅತಿ ಜಾಗ್ರತೆಯಾಗಿ ಮಾಡಬೇಕು. 2–3 ತಿಂಗಳು ಕಳೆದು ಮಾಡುತ್ತೀ ವೆಂದರೆ ಪ್ರಯೋಜನವಾಗುವುದಿಲ್ಲ. ಏಕೆಂದರೆ ನಮಗೆ ಮಳೆ ವರ್ಷವೆಲ್ಲ ಬರುವುದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಎಲ್ಲ ಕೆರೆಗಳಿಗೂ ಕಂಟ್ರೋಲಿಂಗ್ ಅರೇಂಜ್‌ಮೆಂಟನ್ನು ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರದ ಒಂದು ಕೆರೆ ಭಾನುವಾರ ಒಡೆಯಿತು. ಅದನ್ನು ವಿಶೇಷ ಕಾರ್ಯದರ್ಶಿಯವರ ಗಮನಕ್ಕೆ ತಂದಿದ್ದೇನೆ ಮತ್ತು ಇಂದು ಬೆಳಗ್ಗೆ ಸಚಿವರ ಗಮನಕ್ಕೂ ತಂದೆ. ಆಗ ಅವರು, ನೀವು ಊರಿಗೆ ಹೋಗುವುದರೊಳಗೆ ಆ ಕೆಲಸವನ್ನು ಪ್ರಾರಂಭ ಮಾಡುವಂತೆ ಮಾಡುತ್ತೇನೆಂದು ಭರವಸೆ ಕೊಟ್ಟರು; ಅದರಿಂದ ನನಗೆ ಬಹಳ ಖುಷಿ ಆಯಿತು. ಅದಕ್ಕೆ ನಾನು ಅವರಿಗೆ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ಬೆಳಿಗ್ಗೆ ಪ್ರಶ್ನೋತ್ತರ ವೇಳೆಯಲ್ಲಿ ಕೆರೆ ಬ್ರೀಚ್ ಆಗಿ ಎಷ್ಟೋ ತಿಂಗ ಳಾಯಿತು, ಇನ್ನೂ ಅದನ್ನು ಸರಿಮಾಡಿಲ್ಲವೆಂದು ಒಬ್ಬರು ಸ್ನೇಹಿತರು ಹೇಳಿದರು. ಆ ಸ್ಥಳಕ್ಕೆ ಜಿಲ್ಲಾಧಿಕಾರಿಗಳು, ಎಕ್ಸಿಕ್ಯೂಟಿವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳೆಲ್ಲ ಹೋಗಿ ಬಂದಿದ್ದಾರೆ; ಆದರೆ ಸೂಚನೆ ಕೊಟ್ಟು ಕೆಲಸ ಮಾಡಿಸಿಲ್ಲ. ಇದಕ್ಕೆ ಕಾರಣ ಏನೆಂದರೆ, ಹೆಡ್ ಆಫ್ ಅಕೌಂಟ್‌ನಲ್ಲಿ ದುಡ್ಡಿದೆಯೋ ಇಲ್ಲವೋ, ಎಲ್ಲಾದರೂ ಕೆಲಸ ಪ್ರಾರಂಭ ಮಾಡಿದರೆ ನಮಗೆ ಏನು ತೊಂದರೆಯಾಗುತ್ತದೋ ಏನೋ ಎಂದು ಹೆದರುತ್ತಾರೆ. ಆದ್ದರಿಂದ, ಇಂಥ ಸಂದರ್ಭಗಳಲ್ಲಿ ಸರ್ಕಾರ ದವರು ಅತಿ ಜರೂರಾಗಿ ಕ್ರಮ ಕೈಗೊಳ್ಳತಕ್ಕದ್ದು ಸೂಕ್ತವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಭಾರಿ, ಮತ್ತು ಮಧ್ಯಮ ನೀರಾವರಿ ಯೋಜನೆಯ ವಿಷಯವಾಗಿ ಹೇಳುವುದಾದರೆ, ಸ್ವಾಮಿ ನಾನೂ ಸಹ ಅಂದಾಜು ಸಮಿತಿಯ ಸದಸ್ಯನಾಗಿದ್ದೇನೆ, ನಮ್ಮ ಅಂದಾಜು ಸಮಿತಿಯ ಅಧ್ಯಕ್ಷ ರಾದ ಶ್ರೀ ರಾಮದೇವರವರು ಇಲ್ಲಿ ಇಲ್ಲ. ನಾವು ಸುಮಾರು 2-3 ದಿವಸಗಳ ಕಾಲ ಆ ಸಮಿತಿಯಲ್ಲಿ ಕುಳಿತುಕೊಂಡು ಆನ್ ಗೋಯಿಂಗ್ ಪ್ರಾಜೆಕ್ಟ್ಸ್ ಏನಿದೆ ಅದರಲ್ಲಿ ಪ್ಲಾನ್ ಮತ್ತು ನಾನ್ ಪ್ಲಾನ್ ಏನಿದೆ ಅದರ ಬಗ್ಗೆ ಸುದೀರ್ಘವಾಗಿ ನಮ್ಮ ಹಿರಿಯ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಇಲ್ಲಿ ಇದ್ದಿದ್ದರೆ ಬಹಳ ಉಪಯುಕ್ತವಾಗುತ್ತಿತ್ತು ಎಂದು ನನಗನ್ನಿಸು ತ್ತದೆ. ಇವರು ಏನು ಯಾದಿಯನ್ನು ಕೊಟ್ಟಿದ್ದಾರೆ ಇದರಲ್ಲಿ 7 ನೇ ಪಂಚವಾರ್ಷಿಕ ಯೋಜನೆಯ ಕೊನೆಯ ಹೊತ್ತಿಗೆ ಅಂದರೆ 1890 ನೇ ಇಸ್ವಿಯ ಕೊನೆಯಲ್ಲಿ ನಮ್ಮ ರಾಜ್ಯದಲ್ಲಿ ನಮ್ಮ ಸರ್ಕಾರದವರು ಕೈಗೊಂಡಿರತಕ್ಕ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಬರತಕ್ಕ ಭಾರೀ ನೀರಾವರಿ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾದರೆ 2, ಸಾವಿರದ 200 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರ ಬಗ್ಗೆ ಅಂಕಿಅಂಶಗಳನ್ನೇ ಇಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ ನಾವು ಅಂದಾಜು ಸಮಿತಿಯಲ್ಲಿ ಬಹಳ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ. ಆದರೆ ಇವ ತ್ತಿನ ದಿವಸ ಇದು ಏನಾಗಿದೆ ಎಂದರೆ, ನನ್ನ ಜೇಬಿನಲ್ಲಿ 5 ರೂಪಾಯಿಗಳನ್ನು ಇಟ್ಟುಕೊಂಡು ಮಂಡ್ಯಾ ದಿಂದ ಬೆಂಗಳೂರಿಗೆ ಬಂದ ಹಾಗಾಗಿದೆ. ಇವತ್ತಿನ ದಿವಸ ಮಂಡ್ಯಾದಿಂದ ಬೆಂಗಳೂರಿಗೆ ಬಂದು ವಾಪಸ್ಸು ಹೋಗಬೇಕಾಗಿದ್ದರೆ ಕನಿಷ್ಟ ಪಕ್ಷ ನಮ್ಮ ಜೇಬಿನಲ್ಲಿ 25–30 ರೂಪಾಯಿಗಳಾದರೂ ಇರಬೇಕಾ ಗುತ್ತದೆ. ಇಲ್ಲಿಗೆ ಬಂದರೆ ಕಾಫಿ ತಿಂಡಿ, ವಗೈರೆಗೆ ಬೇಕಾಗಿರುತ್ತದೆ. ಹಾಗೆಯೇ ಇವತ್ತಿನ ದಿವಸ ನಮ್ಮ ಪ್ರಾಜೆಕ್ಟ್‌ಗಳ ಗತಿಯಾಗಿದೆ. ನಮ್ಮ ಕೈಯಲ್ಲಿ ಸಾಕಷ್ಟು ಕೆಲಸವಿದೆ, ಆದರೆ ಹಣವಿಲ್ಲ. ಇದಕ್ಕಾಗಿ ನಾನು ಯಾರನ್ನೂ ದೂಷಿಸುತ್ತಿಲ್ಲ. ಇದಕ್ಕೆ ಹಿಂದಿನ ಸರ್ಕಾರದವರು ಹೊಣೆಯಲ್ಲ, ಅಥವಾ ಇಂದಿನ ಸರ್ಕಾರದವರು ಹೊಣೆಯಲ್ಲ. ಇದು ಎಲ್ಲರ ಮೇಲಿರತಕ್ಕ ಹೊಣೆಯಾಗಿದೆ. ಆದುದರಿಂದ ಕನಿಷ್ಟ 1890 ರೊಳಗಾದರೂ ನಮ್ಮ ಕೈಯಲ್ಲಿರತಕ್ಕ ಎಲ್ಲಾ ಯೋಜನೆಗಳನ್ನೂ ಮುಗಿಸಬೇಕೆಂದರೆ ಅದಕ್ಕಾಗಿ ನಮ್ಮ ಸರ್ಕಾರದವರು ಸತತವಾಗಿ ಪ್ರಯತ್ನ ಮಾಡಿದ್ದೇ ಆದರೆ, ಅದಕ್ಕಾಗಿ ಸಂಪನ್ಮೂಲಗಳನ್ನು, ಹಣಕಾಸನ್ನು ಯಾವರೀತಿಯಾಗಿ ಕ್ರೋಢೀಕರಿಸಬೇಕು ಎನ್ನತಕ್ಕದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ. ಬರೀ ಚಿಂತನೆಯಲ್ಲ, ಭಾರೀ ಆಳವಾದ ಚಿಂತನೆಯನ್ನು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಎಂ.

ಸೂರ್ಯನಾರಾಯಣ ರಾವ್ ರವರು ನಮ್ಮ ಸಮಿತಿಯಲ್ಲಿ ಒಂದು ಮಾತನ್ನು ಹೇಳಿದ್ದರು. ರಷ್ಯಾ ದೇಶದಲ್ಲಿ ಒಂದು ಪ್ರಾಜೆಕ್ಟ್‌ನ್ನು ಮಂಜೂರು ಮಾಡಿದರೆ ಅದಕ್ಕೆ 75–50 ಕೋಟಿ ರೂಪಾಯಿಗಳು ಖರ್ಚು ಆಗುವ ಹಾಗಿದ್ದರೆ ಅಷ್ಟು ಹಣವನ್ನು ಒಂದು ಬ್ಯಾಂಕ್‌ನಲ್ಲಿ ಡಿಪಾಜಿಟ್ ಆಗಿ ಇಡುತ್ತಾರೆ. ಮತ್ತೆ 2–3 ವರ್ಷಗಳ ನಂತರ ಆ ಕೆಲಸಕ್ಕೆ ಎಸ್ಕಲೇಷನ್ ಆಗಿ ಪ್ರೈಜ್ ಹೆಚ್ಚಾದರೆ ಅದನ್ನು ಬ್ಯಾಂಕ್‌ನಿಂದ ಬಂದಿರತಕ್ಕ ಇಂಟ್ರೆಸ್ಟ್‌ನಿಂದ ತಾಳೆ ಮಾಡುತ್ತಾರಂತೆ ಆ ರೀತಿಯಾಗಿ ಅಲ್ಲಿ ಹೆಚ್ಚುವರಿ ಆಗತಕ್ಕ ಹಣವನ್ನು ಮೀಟ್ ಮಾಡುತ್ತಾರೆಂದು ಕೇಳಿದ್ದೇನೆ. ಈ ರೀತಿಯಾದ ವ್ಯವಸ್ಥೆಯನ್ನಾದರೂ ಫಾಲೋ ಮಾಡಿ ಅಥವಾ ಇನ್ನು ಯಾವುದೇ ವ್ಯವಸ್ಥೆಯನ್ನು ಮಾಡಿ ರೈತನಿಗೆ ಅನುಕೂಲಮಾಡಿ ಕೊಡಿ. ರೈತರು ಎಂದರೆ ನಮ್ಮ ಶ್ರೀ ದೊಡ್ಡಬೋರೇಗೌಡರಿದ್ದಾರಲ್ಲಾ, ಆ ರೀತಿಯ ರೈತರಲ್ಲಾ. ಸ್ವತ: ನಾನೇ ಒಬ್ಬ ರೈತನಾಗಿ ಈ ಮಾತನ್ನು ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದೇನೆಂದರೆ, ಈ ನೀರಾವರಿ ಕಾಮಗಾರಿಗಳ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟು ಮುಂದುವರಿಸಿದ್ದೇ ಆದರೆ ಬಹುಶಃ ನಮ್ಮ ರಾಜ್ಯಕ್ಕೆ ಮುಕ್ತಿ, ಇಲ್ಲದಿದ್ದರೆ ಇಲ್ಲ ಎನ್ನತಕ್ಕ ಮಾತನ್ನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಸನ್ಮಾನ್ಯ ಸಚಿವರೂ ಸಹ ಇದರಲ್ಲಿ ತಂತ್ರಜ್ಞಾನ ಹೊಂದಿರತಕ್ಕವರೇ ಆಗಿದ್ದಾರೆ, ಅವರೂ ಸಹ ಸ್ವತಃ ರೈತರಾಗಿದ್ದಾರೆ, ಅನುಭವ ಪಡೆದಿರತಕ್ಕವರು ಆಗಿದ್ದಾರೆ. ಬಹುಶಃ ತಮ್ಮ ಕಾಲದಲ್ಲಿಯಾದರೂ ಇದರ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಬಹಳ ಕಷ್ಟವಾಗುತ್ತದೆ. ಇವತ್ತು ತಾವು 500 ಕೋಟಿ ರೂಪಾಯಿಗಳನ್ನು ಪ್ಲಾನಿಂಗ್‌ನಲ್ಲಿ ಕೊಡುತ್ತೀರಾ ಆದರಲ್ಲಿ ಸುಮಾರು 150 ಕೋಟಿ ರೂಪಾಯಿಗಳು ಎಸ್ಕಲೇಷನ್‌ಗೆ ಖರ್ಚಾಗುತ್ತದೆ, 150 ಕೋಟಿ ರೂಪಾಯಿಗಳು ಎಸ್ಟಾಬ್ಲಿಶ್‌ಮೆಂಟ್‌ಗೆ ಹೋಗುತ್ತದೆ, ಇನ್ನು 200 ಕೋಟಿ ರೂಪಾಯಿಗಳನ್ನು ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡಿದರೆ ಅದರಿಂದ ಪೊಟೆನ್‌ಷಿಯಾಲಟಿ ಎಲ್ಲಿ ಬರುತ್ತದೆ ? ಆದುದರಿಂದ ತಾವು ಒಂದೊಂದು ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಬಹಳ ಆಳವಾಗಿ ಯೋಚನೆ ಮಾಡಬೇಕಾಗಿದೆ. ಆದುದರಿಂದ ಇದರ ಬಗ್ಗೆ ಯಾವ ರೀತಿಯಾಗಿ ಯೋಚನೆ ಮಾಡಬೇಕು, ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕದರ ಬಗ್ಗೆ ಮಾನ್ಯ ಸಚಿವರಿಗೇ ಅದನ್ನು ಬಿಡುತ್ತೇನೆ. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟದ್ದು ಹೇಳುವುದಾದರೆ, ಹೇಮಾವತಿ ಮತ್ತು ಕೆ. ಆರ್. ಎಸ್. ಎರಡು ಪ್ರಾಜೆಕ್ಟ್‌ಗಳು ಇವೆ. ಕೆ.ಆರ್.ಎಸ್. ಬಹಳ ಹಳೆಯ ಪ್ರಾಜೆಕ್ಟ್. 1952–53 ನೇ ಇಸ್ವಿಯಲ್ಲಿ ಆಗಿರತಕ್ಕಂಥದ್ದು. ಹೇಮಾವತಿ ಹೊಸ ಪ್ರಾಜೆಕ್ಟ್. ಇದು ಆನ್ ಗೋಯಿಂಗ್ ಪ್ರಾಜೆಕ್ಟ್. ಇದನ್ನು 1890 ರಲ್ಲಿ ಮುಗಿಸುತ್ತೇವೆಂದು ನಿಮ್ಮ ಇಲಾಖೆಯವರು ಹೇಳಿದ್ದಾರೆ. ಈ ವಿಷಯದ ಬಗ್ಗೆ ನಮ್ಮ ಜಿಲ್ಲೆಯವರನ್ನು ಮತ್ತು ಮಾನ್ಯ ಮಂತ್ರಿಯವರ ಜಿಲ್ಲೆಯವರನ್ನು ಮತ್ತು ತುಮಕೂರು ಜಿಲ್ಲೆಯ ಶಾಸಕರನ್ನು ಕರೆದು ಒಂದು ಸಭೆಯನ್ನು ಸಹ ಮಾಡಿದ್ದಾರೆ. ನಮ್ಮನ್ನೆಲ್ಲಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಚರ್ಚೆ ಮಾಡಿದ್ದಾರೆ. ಆದರೂ ಕೂಡ ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಆ ಹೇಮಾವತಿ ಪ್ರದೇಶದ ಜನ ಇವತ್ತು ಕಣ್ಣೀರು ಸುರಿಸತಕ್ಕ ಒಂದು ಕರ್ಮಕಾಂಡದ ಕಥೆಯಾಗಿದೆ. ಬಹುಶಃ ಇನ್ನು 4–5 ವರ್ಷಗಳಾದರೂ ಕೂಡ ಈ ಹೇಮಾವತಿ ಎಡದಂಡೆ ನಾಲೆ ಮುಗಿಸಲಿಕ್ಕೆ ಕ್ರಮ ತೆಗೆದುಕೊಳ್ಳದೇ ಇದ್ದರೆ ಬಹುಶಃ ಆ ಜನ ನಿರಾಶ್ರಿತರಾಗುತ್ತಾರೆ. ಆ ರೀತಿಯಾಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಈ ಕೆ. ಆರ್. ಎಸ್. ನ ಎಡದಂಡೆ ನಾಲೆಯ ಆಧುನೀಕರಣ ಯೋಜನೆಗೆ ಸಂಬಂಧಪಟ್ಟ ಹಾಗೆ ಅಂಕಿಅಂಶಗಳನ್ನೂ ಕೂಡ ತಾವು ಕೊಟ್ಟಿದ್ದೀರಿ. ಎರಡನೇ ಸ್ಟೇಜ್ ಮುಗಿಸಬೇಕಾಗಿದ್ದರೆ 1970–80 ರ ಎಸ್. ಆರ್ ಪ್ರಕಾರವಾಗಿ 60 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ ನೀವು ಕಳೆದ 5 ವರ್ಷಗಳಲ್ಲಿ ಇದಕ್ಕೆ ಎಷ್ಟು ಒದಗಿಸಿದ್ದೀರಿ ಎನ್ನುವ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದೀರಿ ಅದರಲ್ಲಿ 1979–80 ರಲ್ಲಿ 30 ಲಕ್ಷ, 1981–82 ರಲ್ಲಿ 40 ಲಕ್ಷ ಹೀಗೆ ಒದಗಿಸಿ ಕಳೆದ ವರ್ಷ ಮಾತ್ರ 80 ಲಕ್ಷ ಒದಗಿಸಿದ್ದೀರಿ. ಈ ರೀತಿಯಾಗಿ ಹಣವನ್ನು ಒದಗಿಸುತ್ತಾ ಹೋದರೆ ಇದನ್ನು ಮುಗಿಸಬೇಕಾದರೆ 120 ವರ್ಷಗಳು ಬೇಕಾಗುತ್ತದೆ. ಆದರೆ ಮಾನ್ಯ ಸಚಿವರು ದೊಡ್ಡ ಉಪಕಾರ ಸಹಾಯ ಮಾಡಿದ್ದಾರೆ. ಅದು ಏನೆಂದರೆ, ಈ ಯೋಜನೆಗೆ 2 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ ಇದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಇದರಿಂದ ಆ ಯೋಜನೆಯನ್ನು 60 ವರ್ಷಕ್ಕೆ ಕಡಿಮೆಗೆ ಇಳಿಸಿದ ಹಾಗಾಯಿತು. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಅದನ್ನು ಕನಿಷ್ಟ ಪಕ್ಷ 6 ವರ್ಷಕ್ಕೆ ಇಳಿಸಿದರೂ ನನಗೆ ಸಮಾಧಾನವಿಲ್ಲ. ಅದನ್ನು ಎರಡೇ ವರ್ಷದಲ್ಲಿ ಮಾಡಬೇಕು ಎಂದು ಹೇಳುವುದಿಲ್ಲ. ಅದಕ್ಕೆ ಇನ್ನು 2–2 ಕೋಟಿ ರೂಪಾಯಿಗಳನ್ನು ಕೊಟ್ಟರೆ ಅದು ಇನ್ನೂ ಬೇಗ ಮುಗಿಯುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ, ಈ ಪ್ರಾಜೆಕ್ಟ್ ಆದಷ್ಟು ಬೇಗ ಆಧುನೀಕರಣವಾದರೆ ಟೇಲ್ ಎಂಡ್‌ನಲ್ಲಿರತಕ್ಕ ಪ್ರದೇಶದ ಜನರಿಗೆ ಪ್ರಯೋಜನವಾಗುತ್ತದೆ. ಆದುದರಿಂದ ಇದು ಅತ್ಯಗತ್ಯವಾಗಿ ಆಗಬೇಕಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಸುಮಾರು 250 ಎಕರೆ ಅಚ್ಚುಕಟ್ಟು ಪ್ರದೇಶ ಬರುತ್ತದೆ. ಅಲ್ಲಿ ತಾವು ಲಿಫ್ಟ್ ಇರಿಗೇಷನನ್ನು ಕೋ-ಅಪರೇಟಿವ್

ಸೊಸೈಟಿಗಳ ಮುಖಾಂತರವಾಗಿ ಮಾಡುವುದಕ್ಕೆ ಹೊರಟಿದ್ದೀರಿ. ಇದು ಸರಿಯಲ್ಲ, ನಮ್ಮಲ್ಲಿ ಒಂದು ಜಮೀನಿಗೂ ಮತ್ತೊಂದು ಜಮೀನಿಗೂ ಅಡ್ಡಗಲ್ಲು ಹಾಕಿರುತ್ತಾರೆ. ಅಲ್ಲಿಯೇ ವ್ಯಾಜ್ಯಗಳು ಶುರುವಾಗುತ್ತದೆ. ಅಂಥಾದ್ದರಲ್ಲಿ ಈ ವಿಷಯವನ್ನೂ ಸಹ ತಾವು ಕೋ ಅಪರೇಟಿವ್ ಸೊಸೈಟಿಗಳ ಮುಖಾಂತರ ಮಾಡತಕ್ಕದ್ದು ಸೂಕ್ತವಲ್ಲವೆಂದು ಮಾನ್ಯ ಮಂತ್ರಿಗಳವರಲ್ಲಿ ಮನವಿ ಮಾಡಿಕೊಳ್ಳಬಯಸುತ್ತೇನೆ. ಸನ್ಮಾನ್ಯ ಸಚಿವರಿಗೆ ಒಂದೆರಡು ತಿಂಗಳ ಹಿಂದೆಯೇ ಮನವಿ ಮಾಡಿಕೊಂಡಿದ್ದೇನೆ. ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕೆಂದು ಹೇಳಿದ್ದೇನೆ. ಇದು ಒಂದೇ ಅಲ್ಲ ಇಂತಹ ನೂರಾರು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳು ಏನು ಇವೆ ಇವುಗಳನ್ನು ಮುಂದುವರಿಸುತ್ತಾ ಹೋದರೆ ಟೇಲ್ ಎಂಡ್‌ನಲ್ಲಿರುವವರಿಗೆ ನೀರನ್ನು ಒದಗಿಸುವುದಕ್ಕೆ ಕಷ್ಟವಾಗುತ್ತದೆಂದು ಹೇಳಿದ್ದೇನೆ. ಇನ್ನು ಇವತ್ತು ನನ್ನ ಕ್ಷೇತ್ರದಲ್ಲಿ ಈ 1983–84ರ ಬಜೆಟ್‌ನಲ್ಲಿ ಸಣ್ಣ ಎರಡು ಕಾಮಗಾರಿಗಳನ್ನು ದೊಡ್ಡ ಮನಸ್ಸು ಮಾಡಿ ಸಣ್ಣ ನೀರಾವರಿ ಮಂತ್ರಿಗಳು ಸೇರಿಸಿದ್ದಾರೆ. ಈಗಾಗಲೇ ಇದನ್ನು ಕೊಟ್ಟು 5–6 ತಿಂಗಳು ಆಗುತ್ತಾ ಬಂದಿತು. ಅದು ಎನ್ನೂ ಗತಿಯನ್ನು ಕಂಡಿಲ್ಲ. ಅದು ಇನ್ನೂ ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿಯೇ ಇದೆ. ನಮ್ಮ ಸ್ನೇಹಿತರು ಒಬ್ಬರು ಹೇಳಿದರು, ಮೊದಲ ವರ್ಷ ಇನ್‌ವೆಸ್ಟಿಗೇಷನ್ ಆಗುತ್ತದೆ, ಆ ಮೇಲೆ ಅದು ಎಸ್ಟಿಮೇಟ್ ಆಗಿ ಮುಖ್ಯ ಎಂಜಿನಿಯರ್‌ರವರ ಬಳಿಗೆ ಹೋಗಿ ಅದು ಸರ್ಕಾರಕ್ಕೆ ಬರಬೇಕಾದರೆ 2 ವರ್ಷವಾಗುತ್ತದೆ ಎಂದು ಹೇಳಿದರು. ಈ ಮಧ್ಯೆ ಎಕ್ಸಲೇಷನ್ ಎಷ್ಟು ಆಗುತ್ತದೆ ಎಂಬುದನ್ನು ನೋಡಬೇಕು. ಆ ನಂತರ ಇದು ಮುಂಜೂರಾತಿ ಪಡೆದು ಆದಮೇಲೆ ಏಜೆನ್ಸಿಯನ್ನು ಫಿಕ್ಸ್ ಮಾಡಬೇಕಾದರೇ 3-4 ವರ್ಷಗಳ ಬೇಕಾಗುತ್ತದೆಯೆಂದರೆ ಇದರಲ್ಲಿ ನೂರಕ್ಕೆ ನೂರರಷ್ಟು ಎಕ್ಸಲೇಷನ್ ಆಗಿರುತ್ತದೆ. ಆದುದರಿಂದ ದಯಮಾಡಿ ಈ ಎರಡು ಕಾಮಗಾರಿಗಳನ್ನು ಆದಷ್ಟು ಬೇಗ ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರಸ್ತೆ ಮತ್ತು ಸೇತುವೆಗಳ ವಿಷಯದಲ್ಲಿ ಹೇಳಬೇಕೆಂದರೆ, ಮಾನ್ಯ ಬಂಗಾರಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಒಂದು ಮಾಸ್ಟರ್ ಪ್ಲಾನನ್ನು ಮಾಡಿದ್ದಾರೆ. ಇದಕ್ಕೆ ಸುಮಾರು 1,000 ಕೋಟಿ ರೂಪಾಯಿಗಳು ಬೇಕಾಗಬಹುದು. ಈ ಮಾಸ್ಟರ್ ಪ್ಲಾನನ್ನು ಪೀಸ್ ಮೀಲ್ ಆಗಿ ಕಿತ್ತು ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ತಾವು ಹಾಗೆ ಮಾಡುವುದರಿಂದ ಇದು ಕಿತ್ತು ಹರಿದು ಹೋಗುತ್ತದೆ. ಇದನ್ನು ತಾವು ಕೀಳಬಾರದು. ನಮ್ಮ ಮಾನ್ಯ ದೇವೇಗೌಡರು ಇದನ್ನು ಒಂದು ಸಮಗ್ರ ಯೋಜನೆಯನ್ನಾಗಿ ಮಾಡಿ ಇದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳಾಗಲೀ, 2 ಸಾವಿರ ಕೋಟಿ ರೂಪಾಯಿಗಳಾಗಲೀ ಅದನ್ನು ರಿಸರ್ವ್ ಬ್ಯಾಂಕಿನಿಂದ ಅಥವಾ ಹೊರ ದೇಶದಿಂದ ಸಹಾಯ ಪಡೆದು ತಂದು ಇದನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ಇನ್ನೂ ಅನೇಕ ವಿಷಯಗಳನ್ನು ಹೇಳಬೇಕೆಂದಿದ್ದೆ. ಆದರೆ ಕಾಲಾವಕಾಶ ಇಲ್ಲ. ಇವತ್ತಿನ ದಿವಸ ನಮ್ಮ ಪಕ್ಕದ ರಾಜ್ಯಗಳಾದ ತಮಿಳುನಾಡು, ಮಹಾರಾಷ್ಟ್ರ ಅದರಲ್ಲೂ ಆಂಧ್ರಪ್ರದೇಶವನ್ನು ನೋಡಿದರೆ ಅಲ್ಲಿ ನೀರಾವರಿಯಲ್ಲಿ ಎಷ್ಟು ಪೊಟೆನ್‌ಷಿಯಾಲಿಟಿಯಾಗಿದೆ ಅದನ್ನು ನೋಡಿದರೆ ನಾವು ನಿಜವಾಗಿಯೂ ತಲೆತಗ್ಗಿಸಬೇಕಾದ ವಿಷಯವಾಗಿದೆ. ನೀರಾವರಿಯಲ್ಲಿ ಹೆಚ್ಚಿನ ಒಂದು ಸಾಧನೆಯಾಗಬೇಕಾಗಿದೆ. ಮಾನ್ಯ ರಾಮ್‌ದೇವ್ ಅವರು ಈಗ ಬಂದರು. ಅವರೂ ನಾವೂ ಅಂದಾಜು ಸಮಿತಿಯಲ್ಲಿ ಆನ್ ಗೋಯಿಂಗ್ ವರ್ಕ್ ಬಗ್ಗೆ ಬೇಕಾದಷ್ಟು ಚರ್ಚೆ ಮಾಡಿದ್ದೇವೆ. ಇವುಗಳಿಗೇ ಸುಮಾರು 2 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆಂದು ...

ಶ್ರೀ ದೊಡ್ಡಬೋರೇಗೌಡ.—ನೀರಾವರಿ ಯೋಜನೆಗಳು ಕಳೆದ ನಾಲ್ಕೈದು ತಿಂಗಳಿಂದ ಮಾತ್ರ ಸ್ಥಗಿತವಾಗಿದೆಯೇ ?

ಶ್ರೀ ಎಚ್. ಡಿ. ಚೌಡಯ್ಯ.—ಕಳೆದ ಹತ್ತಾರು ವರ್ಷಗಳಿಂದ ಎಂದು ನಾನು ಹೇಳುತ್ತಿದ್ದೇನೆ. ರೈತರ ವಿಷಯವಾಗಿ ಮಾತನಾಡುವಾಗ ನಾನು ಯಾವ ಪಕ್ಷದಲ್ಲೇ ಇರಲಿ ಅವರ ಬಗ್ಗೆ ಮಾತನಾಡಿದ್ದೇನೆ. ಆದುದರಿಂದ ನಾನು ಮತ್ತೊಮ್ಮೆ ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಏನು ಆನ್ ಗೋಯಿಂಗ್ ವರ್ಕ್ಸ್ ದೊಡ್ಡ ಹಾಗೂ ಭಾರಿ ನೀರಾವರಿ ಯೋಜನೆಗಳು ಇವೆ, ಅವುಗಳನ್ನು ಕೊನೇ ಪಕ್ಷ 7ನೇ ಪಂಚವಾರ್ಷಿಕ ಯೋಜನೆಯೊಳಗೆ ನಿರ್ದಿಷ್ಟವಾಗಿ ಮುಗಿಸುವಂತೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಬಗ್ಗೆ ಒಂದು ನಿಯಮಿತ ಕಾರ್ಯವನ್ನು ಎಸಗಬೇಕೆಂದು ಹೇಳಿ, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri R.S. Mane (Belgaum).—Mr. Speaker Sir, at the outset, I express dissatisfaction on behalf of the people of Belgaum in general and of the people of border areas in particular regarding the working of the P.W. Department in my part. There are two major irrigation projects in the District of Belgaum. One is, Ghataprabha

and the other is Malaprabha. So far as Ghataprabha project is concerned, 3,06,190 acres of irrigable land is there in Belgaum District. Whereas, the total irrigable area in Bijapur District is 3,88,000 acres. Malaprabha project is also located in Belgaum District. The irrigable capacity is 1,15,732 acres in respect of Belgaum District, whereas the irrigable capacity is 3,73,624 acres of land in Dharwad and Bijapur Districts. Mr. Speaker Sir, for bringing about these two projects, the people of Belgaum District have sacrificed their lands and villages. Totally about 403 villages were submerged affecting 41,000 people. But, the share of benefits is given to Belgaum District is very meagre when compared to the share given to Bijapur and Dharwad districts. There are no medium irrigation projects which are worth mentioning as far as Belgaum District is concerned. As far as, minor irrigation is concerned, the Belgaum District is totally neglected by the Department. In Belgaum District, lift irrigation at Kudchi village was completed in the year 1978, but since 4-5 years, that has been abandened and there is no irrigation in this village. Similarly, Halga is another village where a minor lift irrigation scheme has been completed, but it is not put to work at all. Similar is the case with Kangralli lift irrigation scheme. Since six years this irrigation scheme is not in use. The Government has no funds to replace the pipes and see that people get water through this irrigation scheme. Sindholi is another village which finds place in the Budget, but it has not seen the light of the day. There is no irrigation at all in this village. Now, I come to Khanapur Taluka. I may point out to the House that Khanapur Taluka being a jungle area, is totally neglected and particularly western parts of Khanapur Taluka where there are villages which are not at all connected by roads. This has been totally ignored by the Department and there is no irrigation work in this taluka. There was a big project surveyed as far back as in the British Regime viz., putting a major irrigation project near Asoga on the Malaprabha river. This was surveyed during the British regime, but it is not known why the Project was not taken up by the Government still there is time for the Government to take up

5-30 p.m.

this project and establish one major irrigation project at Asoga village on Malprabha river so that entire Khanapur taluka and half of Belgaum will come under irrigation.

Coming to Buildings and Roads. I may say that so far as maintenance of National Highways is concerned. the work appears to be satisfactory though the bridges constructed on national highways have been considered by the Government as a devise for getting money. It is mentioned in the Annual Report, on page-19 thus :

> "It may be recalled that the Parliament has passed an act for levy of fees on vehicles using bridges ou National Highways constructed at a cost of Rs. 25.00 lakhs or more and thrown

open for traffic after lst April, 1976. In pursuance of this act, for the first time in Karnataka a levy is being collected from vehicles plying over the Ghataprabha bridge near Belgaum and the collection will continue until the amount is likely to cover the cost of the bridge, by the end of March, 1983."

Sir, my information is that the entire cost of the bridge has been recovered by collecting levey from the motor vehicles that pass over the bridge. But, strangely even now this Report says that this will continue till the end of March, 1983. when I passed over that bridge last, the amount was collected as levy. I do not understand, why should the Government consider this as a source of money when the entire cost of the bridge is recovered. I demand that collecting levy should be stopped at once.

As regards Buildings, I submit that on this front also there is confusion, particularly in case of buildings used by educational institutions. Sir, you are aware that primary education was taken over by the Government, Formerly it was in the hands of local authorities After taking over education. the question of buildings and the sites has not at all been tackled by the Government and has thus created a confusion. In my city, there are buildings owned by local authorities i.e., Corporation of the City of Belgaum. The Government does not care to repair these buildings and the local authority also neglects repairing these buildings since the rent that is paid by the Government is not at all paid to them or the rent that is fixed by the Public Works Department is very low. Ultimately, the sufferers are the students. Apart from this, the buildings are so scanty that in one room more than two-three classes are conducted. This precarious position in the field of Education must be improved immediately and the Government must come forward to take over these buildings in their custody, effect repairs to them and wherever necessary to construct new buildings in the State.

In conclusion, I would like to draw the attention of the Government to a system of Irrigation. In a booklet published by the Government, I came across a new system of irrigation known as "Sprinkler Irrigation". I found thet this type of irrigation is very preferable since it saves water in many ways. Where there is less water and more land to be irrigated, this is one of the ideal methods of irrigation. In the usual type of irrigation, there will be loss of water due to percolation in water course as well as feeds. There will be more wastage in run off and more loss of water due to evaporation in high temperature and strong winds. This is averted in case of sprinkler irrigation. This type of irrgation, by way of experiment practiced in Kolhapur district of Maharashtra has been proved very much successful. Therefore, I request the Government to consider whether they can take up at least by way of experiment the Sprinkler Irrigation to benefit crops except Paddy and Jute which cannot have any benefit from this type of irrigation.

With these words, I thank the Chair for having given me an opportunity to express my thoughts.

Thank you very much.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ಮಾತನಾಡತಕ್ಕಂಥ ಜನ ಬಹಳ ಇದ್ದಾರೆ, ನಾಳೆಗೆ ಮುಂದುವರಿಸಿ.

(ಗೊಂದಲ)

ಶ್ರೀ ಹೆಚ್. ಗಂಗಾಧರನ್.—ಇದು ಬಹಳ ಮುಖ್ಯವಾದಂಥ ಇಲಾಖೆ, ಬೆಳಿಗ್ಗೆ ಬೇರೆ ಬೇರೆ ವಿಷಯಗಳು ಬಂದು ನಿಗದಿಯಾದ ಕಾಲಾವಕಾಶವನ್ನೆಲ್ಲಾ ತೆಗೆದುಕೊಳ್ಳುತ್ತದೆ.

(ಗೊಂದಲ)

ಉಪಾಧ್ಯಕ್ಷರು.—ಈಗ ಧನಂಜಯ ಕುಮಾರ್‌ರವರನ್ನು ಕರೆದಿದ್ದೇನೆ. ಅವರು ಹತ್ತು ನಿಮಿಷ ಮಾತನಾಡಲಿ.

ಶ್ರೀ ಭೀಮಣ್ಣ ಖಂಡ್ರೆ.—ತಮ್ಮ ಗಮನ ಸೆಳೆಯುವುದೇ ನಮಗೆ ಕಷ್ಟವಾಗಿದೆ.

ಉಪಾಧ್ಯಕ್ಷರು.—ತಮ್ಮ ನಾಯಕರು ಕೊಟ್ಟಂತಹ ಪಟ್ಟಿ ಪ್ರಕಾರ ಕರೆಯುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಈಗ ಒಬ್ಬರನ್ನು ಕರೆದಿದ್ದೀರಿ; ಈ ಇಲಾಖೆ ಮೇಲೆ ಹೆಚ್ಚು ಜನ ಮಾತನಾಡುವವರು ಇದ್ದಾರೆ; ನಾಳೆಗೂ ಕೂಡ ಮುಂದುವರಿಸಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನೂ ಒಂದು ಗಂಟೆ ಕುಳಿತು ಚರ್ಚೆ ಮಾಡೋಣ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಸಹಕಾರ ಕೊಟ್ಟರೆ ಮಾಡೋಣ.

ಶ್ರೀ ಭೀಮಣ್ಣ ಖಂಡ್ರೆ.—ಈ ಸಭೆಯನ್ನು ಒಂದು ಗಂಟೆ ಕಾಲ ಮುಂದುವರಿಸಿ.

ಉಪಾಧ್ಯಕ್ಷರು.—ಅದರ ಬಗ್ಗೆ ನನ್ನ ಅಭ್ಯಂತರ ಏನೂ ಇಲ್ಲ.

ಶ್ರೀ ಹೆಚ್. ಗಂಗಾಧರನ್.—5 ಗಂಟೆ ಮೇಲೆ ಮುಂದುವರಿಸಬೇಕಾದರೆ, ಸಭೆಯ ಒಪ್ಪಿಗೆ ಬೇಕಾಗುತ್ತದೆ.

ಉಪಾಧ್ಯಕ್ಷರು.—ತಾವು ಇರಲಿಲ್ಲ; ಈ ದಿವಸ ಚರ್ಚೆ ಪ್ರಾರಂಭವಾಗುವುದಕ್ಕೆ ಮುಂಚೆ, ಪೂರ್ತಿಯಾಗಿ ಮುಗಿಸಬೇಕೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ.

* ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ).—ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಅನೇಕರು ಕಾಮಗಾರಿ ಮತ್ತು ನೀರಾವರಿ ಮೇಲೆ ಅನೇಕ ವಿಚಾರಗಳನ್ನು ಮಾಡಿದ್ದಾರೆ. ಈ ಕಾಮಗಾರಿ ಮತ್ತು ನೀರಾವರಿ ಇಲಾಖೆ ಏನಿದೆ ಇದು ಬಹಳ ಅತ್ಯಂತ ಪ್ರಮುಖವಾದಂಥ ಇಲಾಖೆ. ಮಾನ್ಯ ದೇವೇಗೌಡರು ಈ ಇಲಾಖೆಗೆ ಸಂಬಂಧಿಸಿದಂತೆ ಈ ಸದನದ ಮುಂದೆ ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳನ್ನು ನಾನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗ 1982–83ನೇ ಸಾಲಿನ ವಾರ್ಷಿಕ ವರದಿಯನ್ನು ನಮ್ಮ ಮುಂದೆ ಕೊಟ್ಟಿದ್ದಾರೆ. ಇದನ್ನು ನೋಡಿದಾಗ ನನಗಾದರೂ ಅನಿಸುತ್ತದೆ, ಸ್ವಾತಂತ್ರ್ಯ ಬಂದು 36 ವರ್ಷಗಳನಂತರ 100 ಚದರ ಕಿಲೋಮೀಟರ್ ರಸ್ತೆ ಮಾಡಬೇಕಾದ್ದುದರಲ್ಲಿ ಕೇವಲ 52 ಕಿಲೋಮೀಟರ್ ರಸ್ತೆಗಳನ್ನು ಮಾತ್ರ ಮಾಡಿದ್ದೇವೆ. ಹಳ್ಳಿಗಾಡಿನಲ್ಲಿ ಈಗ ಆಗಿರತಕ್ಕ ಮಣ್ಣಿನ ರಸ್ತೆಗಳಲ್ಲಿ ತಿರುಗಾಡದಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಸಮರ್ಪಕವಾಗಿ, ರಸ್ತೆಗಳ ಕಾರ್ಯ ಮತ್ತು ನೀರಾವರಿ ಕಾರ್ಯ ಎಲ್ಲಿಯವರೆಗೆ ಆಗುವುದಿಲ್ಲವೋ ಅಲ್ಲಿಯವರೆಗೆ ವ್ಯವಸ್ಥಿತವಾಗಿ ದೇಶದಲ್ಲಿ, ರಾಜ್ಯದಲ್ಲಿ ಸರಿಯಾದಂಥ ಕೈಗಾರಿಕೋದ್ಯಮ ಅಭಿವೃದ್ಧಿಯಾಗಲಿ, ವ್ಯವಸಾಯದ ಅಭಿವೃದ್ಧಿಯಾಗಲಿ, ಆಗಲಿಕ್ಕೆ ಸಾಧ್ಯವಿಲ್ಲ. ಈ ಎರಡು ಅಂಗಗಳು ಅಭಿವೃದ್ಧಿ ಹೊಂದದೆ ಯಾವದೇ ದೇಶದ, ರಾಜ್ಯದ ಆರ್ಥಿಕ ಪರಿಸ್ಥಿತಿ ಮುಂದುವರಿಯಲಿಕ್ಕೆ. ಅದು ಬಲವಾಗಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು 98 ಪರ್‌ಸೆಂಟ್ ಜಲ ಇದೆ. ಅದೇ ರೀತಿ 98 ಪರ್‌ಸೆಂಟ್ ನೆಲ ಕೂಡ ಹಳ್ಳಿಗಾಡಿನಲ್ಲಿ ಬರತಕ್ಕದ್ದು ಇದೆ. ಸಾಮಾನ್ಯವಾಗಿ ನಾವೆಲ್ಲರೂ ಹಳ್ಳಿಗಾಡಿನಿಂದ ಬಂದಿದ್ದೇವೆ. ಇದರ ಬಗ್ಗೆ ಅನೇಕ ಸಾರಿ ಚರ್ಚೆಯಾಗಿದೆ. ಹಳ್ಳಿಗಾಡಿನಲ್ಲಿ ರಸ್ತೆಗಳು ಆಗಬೇಕು. ಅವುಗಳ ಅಭಿವೃದ್ಧಿಯಾಗಬೇಕೆಂದು ಚರ್ಚೆಯಲ್ಲಿ ಹೇಳಿರುವುದನ್ನು ನಾವು ನೋಡಿದ್ದೇವೆ. ಇವೊತ್ತು ಏನಾಗಿದೆಯೆಂದರೆ. ಯಾವುದೇ ಒಂದು ಹಳ್ಳಿಯಲ್ಲೂ ಕೂಡ ಎತ್ತಿನಗಾಡಿ ಓಡಿಸಲಿಕ್ಕೆ ಆಗದ ಪರಿಸ್ಥಿತಿಯನ್ನು ನೋಡುತ್ತಾ ಇದ್ದೇವೆ. ಈ ರಸ್ತೆಗಳನ್ನು ಅನೇಕ ಭಾಗವಾಗಿ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಅಂತರ್ ಜಿಲ್ಲಾ ಸಂಪರ್ಕ ಮಾಡತಕ್ಕ ಹೆದ್ದಾರಿ, ಹಳ್ಳಿಗಾಡಿನ ಹೆದ್ದಾರಿ, ಈ ರೀತಿ ರಸ್ತೆಗಳನ್ನು ಪರಿಗಣನೆಮಾಡಿ ನೋಡಿದಾಗ ಹಳ್ಳಿಗಾಡಿನಲ್ಲಿ ಯಾವುದೇ ಸಂಪರ್ಕ ಆಗಿಲ್ಲ. ನನ್ನ ತಾಲ್ಲೂಕಿನಲ್ಲಿ ಕೆಲವು ಸಾರಿಗೆ ಬಸ್ಸುಗಳು ಹೋಗಲಿಕ್ಕೆ ವ್ಯವಸ್ಥೆ ಮಾಡಿದ್ದರು, ಅಲ್ಲಿ ಹೋಗುವಂಥ ಬಸ್ಸುಗಳು ಒಂದು ವಾರದಲ್ಲಿ ನಿಂತು ಹೋಗತಕ್ಕದ್ದನ್ನು ಕಾಣುತ್ತಿದ್ದೇವೆ. ಅಲ್ಲಿಯ ಅಧಿಕಾರಿಗಳು ಹೇಳತಕ್ಕದ್ದು ಏನೆಂದರೆ, ನಿಮ್ಮ ತಾಲ್ಲೂಕಿ

ನಲ್ಲಿ ಬಸ್ಸುಗಳನ್ನು ಓಡಿಸಲಿಕ್ಕೆ ರಸ್ತೆಗಳು ಸರಿಯಿಲ್ಲ ಎಂದು ಹೇಳುತ್ತಾರೆ. ಕಳೆದ 36 ವರ್ಷಗಳಿಂದಲೂ ಹಳ್ಳಿಗಾಡಿನ ರಸ್ತೆಗಳನ್ನು ಅಭಿವೃದ್ಧಿಪಡಿಸತಕ್ಕದ್ದು ಆಗಿಲ್ಲ. ಈ ಕೆಲಸವನ್ನು ಹಿಂದಿನ ಎಲ್ಲಾ ಸರ್ಕಾರಗಳು ಬೇಜವಾಬ್ದಾರಿಯಿಂದ, ಅಸಡ್ಡೆ ಮಾಡಿಕೊಂಡು ಬಂದಿದ್ದರಿಂದ ಇವೊತ್ತು ನಾವು ಈ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಈಗ ಅನೇಕ ಹೊಸ ರಸ್ತೆಗಳನ್ನು ಮಾಡಬೇಕಾಗಿದೆ. ಈಗಾಗಲೇ ಮಾಡಿರತಕ್ಕ ರಸ್ತೆಗಳನ್ನೂ ಸಹ ಅಭಿವೃದ್ಧಿ ಮಾಡತಕ್ಕ ಪರಿಸ್ಥಿತಿ ಇದೆ. ಇವೊತ್ತಿನ ಸಾಗಾಣಿಕೆ ಏನಿದೆ ಅದಕ್ಕೆ ಅನುಕೂಲವಾಗತಕ್ಕಂಥ ರಸ್ತೆಗಳನ್ನು ಮಾಡಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಈ ರೀತಿ ರಸ್ತೆಗಳು ಸರಿಯಾದ ವ್ಯವಸ್ಥೆ ಇಲ್ಲದೇ ಇರುವುದಕ್ಕೆ ಹಿಂದಿನ ಸರ್ಕಾರವೇ ಕಾರಣ ಎಂದು ಹೇಳುತ್ತೇನೆ. ನಾನು ಮೊದಲೇ ಹೇಳಿದಂತೆ 100 ಚದರ ಕಿಲೋ ಮೀಟರ್ ರಸ್ತೆ ಕಾರ್ಯ ಮಾಡಿ ಮುಗಿಸಬೇಕಾದ ಕಡೆ 52 ಕಿಲೋಮೀಟರ್ ರಸ್ತೆಯಾಗಿದೆ. ಆದರೂ ಕೂಡ ನಾವು ಉತ್ತಮವಾದಂಥ ರಸ್ತೆಯನ್ನು ನೋಡಲಿಕ್ಕೆ ಆಗಿಲ್ಲ. ಎಲ್ಲಾ ಕಚ್ಚಾ ರಸ್ತೆಗಳು ಜಾಸ್ತಿ ಇರುವುದನ್ನು ನೋಡುತ್ತಿದ್ದೇವೆ. ಕಳೆದ 36 ವರ್ಷಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡತಕ್ಕದ್ದು, ಮತ್ತು ರಸ್ತೆಗಳನ್ನು ದುರಸ್ತಿ ಮಾಡತಕ್ಕದ್ದನ್ನು ಹಿಂದಿನ ಸರ್ಕಾರಗಳು ಮಾಡಿಕೊಂಡು ಬಂದಿದ್ದರೆ, ನಾವು ಇವೊತ್ತು ಇಷ್ಟೊಂದು ಚರ್ಚೆ ಮಾಡಬೇಕಾದ ಅವಶ್ಯಕತೆ ಇರುತ್ತಿರಲಿಲ್ಲ. ಇವೊತ್ತಿನ ಪರಿಸ್ಥಿತಿ ಏನಿದೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಹೊಸ ರಸ್ತೆಗಳನ್ನು ನಿರ್ಮಾಣ ಮಾಡಬೇಕಾದ್ದು ಇದೆ. ಸಾವಿರಾರು ಕಿಲೋಮೀಟರ್ ರಸ್ತೆಗಳನ್ನು ಹಳ್ಳಿಗಾಡಿನಲ್ಲಿ ನಿರ್ಮಾಣ ಮಾಡಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಇವೊತ್ತು ಈ ಆಯವ್ಯಯದಲ್ಲಿ ಕೂಡ ಹಳ್ಳಿಗಾಡಿನ ರಸ್ತೆಗಳಿಗೆ, ಅವುಗಳ ಅಭಿವೃದ್ಧಿಗೆ, ಹೊಸ ರಸ್ತೆಗಳನ್ನು ಮಾಡಲಿಕ್ಕೆ, ಸೇತುವೆಗಳನ್ನು ನಿರ್ಮಾಣ ಮಾಡಲಿಕ್ಕೆ ಇಟ್ಟಿರತಕ್ಕಂಥ ಹಣ ಬಹಳ ಕಡಿಮೆ. ಇದು ರೈತರ ದುರ್ದೈವದ ಸಂಗತಿ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ, ಎಲ್ಲಿಯವರೆಗೆ ನಾವು ಹೆಚ್ಚು ಹಣವನ್ನು ನಾವು ಹಳ್ಳಿಗಾಡಿನ ರಸ್ತೆಗಳನ್ನು ಮಾಡಲಿಕ್ಕೆ ಇಡುವುದಿಲ್ಲ. ಅಲ್ಲಿಯವರೆಗೆ, ದೇಶದ ಪ್ರಗತಿ, ಅಭಿವೃದ್ಧಿ, ರಾಜ್ಯದ ಪ್ರಗತಿ ಅಭಿವೃದ್ಧಿ, ಆಗಲಿಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯ ಹಳ್ಳಿ ಪ್ರಧಾನವಾದ ರಾಜ್ಯ, ಕೃಷಿ ಪ್ರಧಾನವಾದ ರಾಜ್ಯ, ಎಲ್ಲಿಯವರೆಗೆ ಹಳ್ಳಿಗಾಡಿನ ರಸ್ತೆಗಳು ಅಭಿವೃದ್ಧಿಯಾಗುವುದಿಲ್ಲ, ಸಂಪರ್ಕ ವ್ಯವಸ್ಥೆ ಅಭಿವೃದ್ಧಿಯಾಗುವುದಿಲ್ಲ, ಅಲ್ಲಿಯವರೆಗೆ ಕೃಷಿ ಅಭಿವೃದ್ಧಿಯಾಗುವುದಿಲ್ಲ, ಕೈಗಾರಿಕೆಗಳು ಅಭಿವೃದ್ಧಿಯಾಗುವುದಿಲ್ಲ. ಇನ್ನು ಮುಂದೆಯಾದರೂ ಸರ್ಕಾರದವರು ಈ ಬಗ್ಗೆ ಹೆಚ್ಚು ಗಮನಕೊಟ್ಟು, ಹಣವನ್ನು ಕೊಟ್ಟು ಹೆಚ್ಚು ರಸ್ತೆಗಳನ್ನು ಮಾಡತಕ್ಕ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇವೊತ್ತು ನೀರಾವರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮಗೆ ಸ್ವಾತಂತ್ರ್ಯ ಬಂದ ಮೇಲೆ ಅನೇಕ ಯೋಜನೆಗಳನ್ನು ನಮ್ಮ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದಾರೆ. ಆ ಯೋಜನೆಗಳ ಎಲ್ಲಾ ವರದಿಯನ್ನು ಓದಿದರೆ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಅನೇಕ ವರ್ಷಗಳಿಂದ ನೀರನ್ನು ಶೇಖರಣೆ ಮಾಡತಕ್ಕ ಕೆಲಸವನ್ನು ಮಾಡಿದ್ದರು. ಇಂದು ಅದರ ಲಾಭವನ್ನು ಪಡೆಯದೇ ಇರತಕ್ಕ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಕಬಿನಿ ಯೋಜನೆ ನಮ್ಮ ಜಿಲ್ಲೆಯಲ್ಲಿದೆ. 1978ನೇ ಇಸವಿಯಲ್ಲಿ ನೀರನ್ನು ಶೇಖರಣೆ ಮಾಡತಕ್ಕ ಕೆಲಸವನ್ನು ಮುಗಿಸಿದ್ದರೂ ಕೂಡ ಇನ್ನೂ ಬಲದಂಡೆ ಕೆಲಸ ಆಗುತ್ತಿದೆ. ಇವೊತ್ತಿಗೂ ಕೂಡ ನಾವು ರೈತರಿಗೆ ನೀರನ್ನು ಕೊಡಲಿಕ್ಕೆ ಸಾಧ್ಯವಾಗದೆ ಇರುವ ಪರಿಸ್ಥಿತಿಯಲ್ಲಿದ್ದೇವೆ, ಅನೇಕ ಪ್ರಾಜೆಕ್ಟ್‌ಗಳಲ್ಲಿ ನೀರನ್ನು ಶೇಖರಣೆ ಮಾಡಿದ್ದಾರೆ. ಅಪ್ಪರ್‌ಕೃಷ್ಣ, ತುಂಗಭದ್ರ ಪ್ರಾಜೆಕ್ಟ್. ಈ ರೀತಿ ಅನೇಕ ಪ್ರಾಜೆಕ್ಟ್‌ಗಳು ಇನ್ನೂ ಪೂರ್ಣಗೊಳ್ಳದೇ ವಿವಿಧ ಹಂತಗಳಲ್ಲಿವೆ. ಇದಕ್ಕೆ ಹಣದ ಕೊರತೆ ಇರಬಹುದು. ಪ್ರತಿವರ್ಷವೂ ಕೂಡ ನಾವು ಆಯವ್ಯಯದಲ್ಲಿ ಹೆಚ್ಚು ಹೆಚ್ಚು ಹಣ ಒದಗಿಸುತ್ತಿದ್ದರೂ ಕೂಡ ಆ ಕೆಲಸಗಳನ್ನು ಪೂರೈಸಲಿಕ್ಕೆ ಆಗದೇ ಇರುವ ಪರಿಸ್ಥಿತಿಯನ್ನು ನಾವು ತಲುಪಿದ್ದೇವೆ. ಇದಕ್ಕೆ ಕಾರಣವಾದರೂ ಇಷ್ಟೆ. ನಾವು ಇಡತಕ್ಕ ಹಣವೇ ಬಹಳ ಕಡಿಮೆ; ಅಲ್ಲದೆ ನಿಗದಿಯಾದ ಅವಧಿಯಲ್ಲಿ ಈ ಯೋಜನೆಗಳನ್ನು ಮುಗಿಸಬೇಕೆಂಬ ಯೋಜನೆಯನ್ನು ಇಟ್ಟುಕೊಳ್ಳದೇ ಹೋದುದರಿಂದ ಹಿಂದಿನ ಅಂದಾಜಿಗಿಂತ ಇವತ್ತು 4–5 ಪಟ್ಟು ಸಮಯವನ್ನೂ ಮತ್ತು ಹಣವನ್ನೂ ತೆಗೆದುಕೊಂಡಿದೆ. ಅಷ್ಟೇ ಅಲ್ಲ. ಕೆಲವು ಸಂದರ್ಭದಲ್ಲಿ ಅಂದರೆ ಪ್ರಾರಂಭದಲ್ಲಿದ್ದಂಥ ಅಂದಾಜಿಗೂ, ಇವತ್ತಿನ ಅಂದಾಜಿಗೂ ಹೋಲಿಕೆ ಮಾಡಿದರೆ ಕನಿಷ್ಟ 10–20 ಪಟ್ಟು ಹೆಚ್ಚು ಹಣವನ್ನು ಖರ್ಚುಮಾಡಬೇಕಾಗಿ ಬಂದಿದೆ. ಇದಕ್ಕೆ ಕಾರಣ ನಾನು ಈಗಾಗಲೇ ಹೇಳಿದಂತೆ ಈ ಯೋಜನೆಗಳಿಗೆ ಆಯವ್ಯಯದಲ್ಲಿ ಕಡಿಮೆ ಹಣವನ್ನು ಒದಗಿಸುವುದು ಮತ್ತು ನಿಗದಿಯಾದ ಅವಧಿಯಲ್ಲಿ ಯೋಜನೆಯನ್ನು ಮುಗಿಸದೇ ಇರುವುದು. ಇದರ ಜೊತೆಗೆ ನಾವು ಒದಗಿಸಿದ ಹಣವನ್ನೂ ಕೂಡ ಸಂಬಂಧಪಟ್ಟವರು ಸರಿಯಾಗಿ ಖರ್ಚುಮಾಡದೇ ಇರುವುದು. ಉದಾಹರಣೆಗೆ ಹೇಳುವುದಾದರೆ, ನಮ್ಮ ಕಬಿನಿ ಯೋಜನೆಗೆ ಪ್ರಾರಂಭದಲ್ಲಿ ಮಾಡಿದ್ದ ಅಂದಾಜು ವೆಚ್ಚ ಕೇವಲ 8 ಕೋಟಿ ರೂಪಾಯಿ ಮಾತ್ರ. ಆದರೆ ಆ ಕಾರ್ಯ ಸಕಾಲದಲ್ಲಿ ಮುಗಿಯದೇ ಹೋದುದರಿಂದ ಇವತ್ತಿನ ಅಂದಾಜುವೆಚ್ಚ 95 ಕೋಟಿ ರೂಪಾಯಿಗಳಿಗೆ ಏರಿದೆ. ಇವತ್ತು ನಮ್ಮ ಜಿಲ್ಲೆಯ ವಿಚಾರದಲ್ಲಿ ಹೇಳುವುದಾದರೆ, ಕೃಷ್ಣರಾಜಸಾಗರದ ಬಲದಂಡೆ ಕಾಲುವೆ ಇದೆ. ಇದು ನನ್ನ ಕ್ಷೇತ್ರಕ್ಕೆ ಹೆಚ್ಚಿನ ನೀರನ್ನು ಕೊಡುವಂಥಾದ್ದು. ಈ ಕಾಲುವೆಯ ಕೆಲಸ ಪ್ರಾರಂಭವಾಗುವ

ಸಂದರ್ಭದಲ್ಲಿ ಅಂದಾಜು ಇದ್ದುದು 18.5 ಕೋಟಿ ರೂಪಾಯಿಗಳು. ಆದರೆ ಇವತ್ತು ಅದು 25.70 ಕೋಟಿ ರೂಪಾಯಿಗಳ ಅಂದಾಜಿಗೆ ಮುಟ್ಟಿದೆಯೆಂದು ಹೇಳುತ್ತಿದ್ದಾರೆ. ಕಳೆದ 4 ವರ್ಷಗಳಲ್ಲಿ ಈ ಕೆಲಸಕ್ಕೆ ನಾವು ಖರ್ಚು ಮಾಡಿರುವುದು 4.29 ಕೋಟಿ ರೂಪಾಯಿಗಳು ಮಾತ್ರ. ಇಲ್ಲಿ ಆಗಿರುವ ಕೆಲಸದ ಪ್ರಗತಿ ಎಂದರೆ ಕೇವಲ 18 ಕಿ.ಮಿ. ಮಾತ್ರ. ಅಲ್ಲಿ 1.6 ಕಿ.ಮಿ.ನ ಒಂದು ಅಕ್ವಿಡಕ್ಟನ್ನು ಕಟ್ಟಬೇಕಾಗಿದೆ. ಅಲ್ಲೇನೂ ಇನ್ನೊಂದು ಡ್ಯಾಂನ್ನು ಕಟ್ಟಬೇಕಾಗಿಲ್ಲ. ಈಗಾಗಲೇ 4 ವರ್ಷ ಕಳೆದಿದ್ದರೂ ಇದುವರೆಗೂ ಆ ಕೆಲಸ ಪೂರ್ತಿಯಾಗಿಲ್ಲ.

ಉಪಾಧ್ಯಕ್ಷರು.—ತಾವು ಆದಷ್ಟು ಬೇಗ ಮುಗಿಸಬೇಕು. ಮಾತನಾಡುವ ಸದಸ್ಯರು ಇನ್ನೂ ಬಹಳ ಜನರಿದ್ದಾರೆ.

ಶ್ರೀ ಸಿದ್ದರಾಮಯ್ಯ.—ಸ್ವಾಮಿ, ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ನಾನು ಇನ್ನೂ ಸ್ವಲ್ಪ ಹೊತ್ತು ಮಾತನಾಡಬೇಕಾಗಿದೆ. ಈಗ ನಾನು ಹೇಳಿದಂತೆ ಕೃಷ್ಣರಾಜಸಾಗರದ ಬಲದಂಡೆ ಕಾಲುವೆ ಕೆಲಸ ಪ್ರಾರಂಭವಾಗಿ 4 ವರ್ಷವಾಗಿದೆ. ನಿಮ್ಮ ಅಧಿಕಾರಿಗಳು ಇಲ್ಲಿ ಕೊಟ್ಟಿರತಕ್ಕ ಲೆಕ್ಕಾಚಾರವನ್ನು ನೋಡಿದರೆ ಈ ಕೆಲಸ ಪೂರೈಸಲು ಇನ್ನೂ 3 ವರ್ಷಗಳಾದರೂ ಬೇಕಾಗುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಳೆದವರ್ಷ ಈ ಕೆಲಸಕ್ಕೋಸ್ಕರ 2.5 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟಿದ್ದುದರ ಪೈಕಿ ಕೇವಲ 1.40 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಇನ್ನುಳಿದ ಹಣವನ್ನು ನಿಮ್ಮ ಅಧಿಕಾರಿಗಳು ಲ್ಯಾಪ್ಸ್ ಮಾಡಿದ್ದಾರೆ. ಸರ್ಕಾರದವರು ಮೊದಲನೆಯದಾಗಿ ಕೊಡತಕ್ಕ ಹಣವೇ ಕಡಿಮೆ, ಆ ಹಣವನ್ನೂ ಸರಿಯಾಗಿ ಖರ್ಚುಮಾಡದೆ ಸರ್ಕಾರಕ್ಕೆ ವಾಪಸು ಕಟ್ಟಿದರೆ ನಾವು ಏನು ಹೇಳಬೇಕು. ನೀವು ಏತಕ್ಕೆ ಸ್ವಾಮಿ ಹೀಗೆ ಮಾಡಿದಿರಿ ? ಕೊಟ್ಟ ಹಣವನ್ನು ಏತಕ್ಕೆ ಪೂರ್ತಿ ಖರ್ಚುಮಾಡಲಿಲ್ಲ ಎಂದು ಕೇಳಿದರೆ ನಮಗೆ ತಾಂತ್ರಿಕ ತೊಂದರೆ ಇದೆಯೆಂದು ಅವರು ಹೇಳಿದರು. ಅಕ್ವಿಡಕ್ಟ್ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ನಾವು ಈ ಕಾಲುವೆ ತೆಗೆಯುವ ಕೆಲಸವನ್ನು ನಿಲ್ಲಿಸುತ್ತೇವೆ. ಏಕೆಂದರೆ, ಇದು ಡೆಡ್ ಕ್ಯಾಪಿಟಲ್ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ನಾನಾದರೂ ಸರ್ಕಾರಕ್ಕೆ ಒಂದು ಮಾತನ್ನು ಹೇಳುತ್ತೇನೆ. ಈ ಒಂದು ಅಕ್ವಿಡಕ್ಟನ್ನು ಕಟ್ಟಿ ಮುಗಿಸಬೇಕಾದರೆ ಇನ್ನೂ 3 ವರ್ಷ ಬೇಕಾಗುತ್ತದೆ. ಅಂದರೆ ಮೊದಲಿನ ಅಂದಾಜು ವೆಚ್ಚ ಎಷ್ಟಿತ್ತು 3 ವರ್ಷದ ನಂತರ ಎಷ್ಟಾಗುತ್ತದೆ ಎಂಬುದನ್ನು ತಾವೇ ಯೋಚನೆಮಾಡಿ ನೋಡಬೇಕು. ಯಾರೋ ಒಬ್ಬರು ಕಾರ್ಯದರ್ಶಿಯವರು ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಎಂದೂ ಕೂಡ ಹೇಳಿದ್ದಾರೆಂದು ನನಗೆ ತಿಳಿದುಬಂದಿದೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಗಮನಹರಿಸಬೇಕು. ವರುಣಾ ನಾಲೆಗೆ 20 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹೇಳಿದ್ದೀರಿ, ಆದರೆ ಇದಕ್ಕೆ ಇವತ್ತು ಇಟ್ಟಿರುವ ಹಣ ಕೇವಲ 2.20 ಕೋಟಿ ರೂಪಾಯಿ ಮಾತ್ರ. ಈಗ 1.5 ಕೋಟಿ ರೂಪಾಯಿಗಳನ್ನೂ ಕೂಡ ನೀವು ಖರ್ಚುಮಾಡುತ್ತಿಲ್ಲ. ಆಯವ್ಯಯದಲ್ಲಿ ಒದಗಿಸಿದ ಹಣವನ್ನು ತಾವು ಸದುಪಯೋಗಪಡಿಸಿಕೊಳ್ಳದಿದ್ದರೆ, ಇಲ್ಲಿನ ರೈತರಿಗೆ ಅದರ ಫಲ ಸಿಕ್ಕಬೇಕಾದರೆ ಇನ್ನೂ 10–20 ವರ್ಷಗಳಾದರೂ ಆಗುತ್ತದೆಂದು ಹೇಳಬೇಕಾಗಿದೆ. ನಾನು ತಮಗೆ ಹೇಳುತ್ತೇನೆ, ರೈತರನ್ನು ನೀವು ಅಷ್ಟು ದೂರದವರೆಗೆ ಕಾಯಿಸುವುದು ಬೇಡ. ಈಗ ನಿಮ್ಮ ಅಧಿಕಾರಿ ವರ್ಗದವರು ಏನೊಂದು ತಾಂತ್ರಿಕ ವರದಿಯನ್ನು ಕೊಟ್ಟಿದ್ದಾರೆ ಅದು ಅಸಮರ್ಪಕವಾದುದು, ಅದು ಪ್ರಯೋಜನಕಾರಿಯಾದುದಲ್ಲ. ಆದ್ದರಿಂದ ಅದನ್ನು ತಾವು ವಾಪಸು ತೆಗೆದುಕೊಂಡು ಕಾಲುವೆ ಕೆಲಸವನ್ನು ಮುಂದುವರಿಸಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ. ನನಗೆ ತಿಳಿದಿರುವಂತೆ ನಾಲೆಗಳ ಕೆಲಸ ಅನೇಕ ಕಡೆಗಳಲ್ಲಿ ಅನೇಕ ವರ್ಷಗಳಿಂದ ನಡೆಯುತ್ತಿದೆ. ಇದರಿಂದಾಗಿ ರೈತರು ಏನು ವ್ಯವಸಾಯಕ್ಕೆ ನೀರನ್ನು ಉಪಯೋಗಮಾಡಿಕೊಳ್ಳುತ್ತಾರೆ ಅದಕ್ಕಿಂತಲೂ ಹೆಚ್ಚಿನ ನೀರು ಅಪವ್ಯಯವಾಗುತ್ತಿದೆ. ಈ ನಾಲೆಗಳ ದುರಸ್ತಿಯನ್ನು ಆದಷ್ಟು ಬೇಗ ಮಾಡಿಸದೇ ಹೋದರೆ ಆ ಭಾಗದ ರೈತರಿಗೆ ನೀರನ್ನು ಕೊಡುವುದಕ್ಕಾಗುವುದಿಲ್ಲ, ರೈತರು ಇಟ್ಟಿರತಕ್ಕ ಬೆಳೆಯೆಲ್ಲಾ ಒಣಗಿಹೋಗುತ್ತಿದೆ. ಆದ್ದರಿಂದ ನಾನು ಈ ಸದನದ ಮುಖಾಂತರ ಸರ್ಕಾರವನ್ನು ಅತ್ಯಂತ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ, ನಾಲೆಗಳ ರಿಪೇರಿಯ ಬಗ್ಗೆ ಹೆಚ್ಚಿನ ಆದ್ಯತೆಯನ್ನು ನೀಡಿ ರೈತರಿಗೆ ನೀರನ್ನೊದಗಿಸಿಕೊಡಬೇಕು. ಇವತ್ತು ತಾವು ಸಮಗ್ರವಾದ, ಆಮೂಲಾಗ್ರವಾದ ಯೋಜನೆಯನ್ನು ರೂಪಿಸಬೇಕಾಗುತ್ತದೆ. ಮತ್ತೆ ಸಣ್ಣ ನೀರಾವರಿಯ ಬಗ್ಗೆ ಹೇಳುವುದಾದರೆ, ಬಹುಶ: ಈವತ್ತು ಈ ರಾಜ್ಯದಲ್ಲಿ ಸಮಗ್ರ

6 p.m.

ವಾಗಿ, ಆಮೂಲಾಗ್ರವಾಗಿ ಒಂದು ಯೋಜನೆಯನ್ನು ರೂಪಿಸಬೇಕೆಂದು ಈವತ್ತು ಈ ಒಂದು ವರದಿಯಲ್ಲಿ ಹೇಳಿದ್ದೀರಿ. ನಮಗೆ ಇರತಕ್ಕಂಥ ವ್ಯವಸ್ಥೆಗೆ ಉಪಯೋಗಿಸತಕ್ಕಂಥ ನೀರಾವರಿ ಇಡೀ ಕರ್ನಾಟಕದಲ್ಲಿ 55 ಪರ್ಸೆಂಟ್ ದೊರಕುತ್ತದೆಂದು ಹೇಳಿದ್ದೀರಿ. ಇಷ್ಟೆಲ್ಲಾ ಯೋಜನೆಗಳನ್ನು ಮಾಡಿದರೂ ಕೂಡ ಇಲ್ಲಿಯವರೆಗೆ ಅಂಕಿಅಂಶಗಳ ಪ್ರಕಾರ ಸುಮಾರು 23 ಪರ್ಸೆಂಟ್ ಮಾತ್ರ ನಾವು ವ್ಯವಸಾಯಕ್ಕೆ

ನೀರಾವರಿ ಸೌಲಭ್ಯವನ್ನು ಪಡೆದಿರತಕ್ಕಂಥದ್ದು ಎಂದರೆ ಸುಮಾರು 27 ಪರ್ಸೆಂಟ್* ಇನ್ನೂ ಕೂಡ ನೀರಾವರಿಗೆ ಯೋಗ್ಯವಾಗಿರತಕ್ಕಂಥ ಜಮೀನುಗಳನ್ನು ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯವಾಗಿಲ್ಲವೆಂದು ಹೇಳಬೇಕಾಗುತ್ತದೆ. 'ನಮ್ಮ ಜಿಲ್ಲೆಯು ಎಲ್ಲ ಭಾಗದಲ್ಲೂ ನೀರನ್ನು ಒದಗಿಸತಕ್ಕಂಥ ಜಿಲ್ಲೆಯಾಗಿದೆ. ಶ್ರೀಮಾನ್ ದೇವರಾಜಅರಸ್‌ರವರ ಕಾಲದಲ್ಲಿ ಒಂದು ಬಾರಿ ಸಂಬಂಧಪಟ್ಟ ಇಲಾಖೆಯವರ ಕೂಡ ಚರ್ಚೆ ನೆಡೆದಾಗ ಇದರ ಬಗ್ಗೆ ಸರ್ವೆ ಕೂಡ ಆಗಿದೆ ಎಂದು ಹೇಳಿದರು. ಬಾರಪೊಳೆ ಮತ್ತು ಲಕ್ಷ್ಮಣ ತೀರ್ಥಇವೆರಡೂ ನದಿಗಳಿಗೆ ಅಣೆಕಟ್ಟನ್ನು ಕಟ್ಟುವಂಥ ಕೆಲಸ ಮಾಡಿದ್ದೇ ಆದರೆ ಇದು ಮೈಸೂರು ಜಿಲ್ಲೆಗೆ ರೈತರು ಮಳೆಯ ಆಶ್ರಯದಲ್ಲಿಯೇ ಬೆಳೆಯನ್ನು ನೋಡತಕ್ಕಂಥ ಹನ್ನೊಂದು ಲಕ್ಷ ಎಕರೆಗಳಷ್ಟು ನೀರಾವರಿಯಾಗುತ್ತದೆ. ಮೈಸೂರು ಜಿಲ್ಲೆಯ 8-9 ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ ಮಳೆಯೇ ಆಗದೆ ಇರತಕ್ಕಂಥ ಪರಿಸ್ಥಿತಿಯಲ್ಲಿ ಬಾರಪೊಳೆ ಯೋಜನೆಯನ್ನು ಮಾಡಿದರೆ ಬಹಳಷ್ಟು ನೀರಾವರಿಯಾಗುತ್ತದೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಈ ರೀತಿ ನೀರನ್ನು ಬಳಸಿಕೊಂಡರೆ ಪ್ರಪಂಚದಲ್ಲಿಯೇ ಎಲ್ಲೂ ಮಾಡದಹಾಗೆ ಮೈಸೂರು ಜಿಲ್ಲೆಯಲ್ಲಿ ಸುಮಾರು ಎಲ್ಲ ತಾಲ್ಲೂಕುಗಳಲ್ಲಿಯೂ ನೀರಾವರಿಯನ್ನು ತರತಕ್ಕಂಥದ್ದಕ್ಕೆ ಅವಕಾಶವಾಗುತ್ತದೆ, ಇದರಿಂದ ಹಳೆಯ ಮೈಸೂರಿನ ಸುಮಾರು ರೈತರಿಗೆ ನೀರು ದೊರಕುವಂತಾಗಿ ಭೂಮಿಯನ್ನು ಕೂಡ ನೀರಾವರಿಗೆ ಒಳಪಡಿಸತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯ ಮಾನ್ಯ ಸಚಿವರಾದ ಶ್ರೀ ದೇವೇಗೌಡರು ಇದರ ಬಗ್ಗೆ ಸರ್ವೆ ಮಾಡಿಸಿ ಬಾರಪೊಳೆ ಯೋಜನೆಯನ್ನು ಮಾಡಿದರೆ ಮೈಸೂರು ಜಿಲ್ಲೆಗೆ ಅನುಕೂಲವಾಗುತ್ತದೆ ಮತ್ತು ರೈತರಿಗೂ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ 7 ಗಂಟೆಗೆ ಮತ್ತೊಂದು ಸಮಿತಿ ಇರುತ್ತದೆ.

ಉಪಾಧ್ಯಕ್ಷರು.—ಇನ್ನೂ 6 ಗಂಟೆ, ಏಳು ಗಂಟೆಗೆ ಮುಗಿಸೋಣ. ಮಾನ್ಯ ಸದಸ್ಯರ ಹೆಸರನ್ನು ಕಳೆದುಬಿಟ್ಟಿರುತ್ತೇನೆ ಅವರೊಬ್ಬರು ಮಾತನಾಡುತ್ತೇನೆಂದು ಹೇಳಿದ್ದಾರೆ. ಈವತ್ತು ಚರ್ಚೆ ಪೂರ್ಣವಾಗಬೇಕು. ನಾಳೆ ದಿವಸ ರಿಪ್ಲೈ ಮಾಡಲು ಅನುಮತಿಯನ್ನು ತೆಗೆದುಕೊಂಡು ಕಾರ್ಯಕಲಾಪಗಳನ್ನು ನಡೆಸುತ್ತಿದ್ದೇವೆ. ತಾವು ಕರೆದಾಗ ಇರಲಿಲ್ಲ.

ಶ್ರೀ ಎಚ್. ಗಂಗಾಧರನ್.—ನಾಳೆ ಮಾತನಾಡಲಿಕ್ಕೆ 'ಅವಕಾಶ ಇದೆಯೇ ಸ್ವಾಮಿ ?

ಶ್ರೀ ಎಸ್. ಸೂರ್ಯನಾರಾಯಣರಾವ್.—ಆ ಕಡೆ ಎಷ್ಟು ಜನ ಮಾತನಾಡಿದರು ಈ ಕಡೆ ಎಷ್ಟು ಜನ ಮಾತನಾಡಬೇಕೆಂಬುದನ್ನು ತಾವೇ ದಯವಿಟ್ಟು ವಿಚಾರಮಾಡಿ.

ಉಪಾಧ್ಯಕ್ಷರು.—ಕಾಂಗ್ರೆಸ್ ಐನ ಎಲ್ಲ ಜನರು ಮಾತನಾಡಬೇಕೆಂದು ಹೇಳಿದರು. ಅವರೂ ಮಾತನಾಡಬೇಕು, ಜನತಾ ಪಕ್ಷದವರು ಎಲ್ಲರೂ ಮಾತನಾಡಬೇಕೆಂದು ಹೇಳಿರುವರು. ಅವರೆಲ್ಲರಿಗೂ ಅವಕಾಶ ಕೊಡಬೇಕೆಂದು ಇದ್ದೇವೆ. ನೀವು ಮಾತನಾಡಬೇಕೆಂದಿರುವಿರಿ. ನಿಮ್ಮ ನಾಯಕರು ಪಟ್ಟಿ ಮಾಡಿ ಕಳುಹಿಸಿಕೊಟ್ಟಿರುತ್ತಾರೆ. ಆ ಕಡೆ ನಾಲ್ಕು ಜನರಿಗೆ ಕೊಟ್ಟರೆ ಈ ಕಡೆ ನಾಲ್ಕು ಜನರಿಗೆ ಕೊಡಿ ಎಂದು ಆರೀತಿ ಮಾತನಾಡಿದರೆ ಎಲ್ಲರಿಗೂ ಸುಲಭವಾಗುತ್ತದೆ. ಎಲ್ಲರೂ ಮಾತನಾಡಬೇಕೆಂದರೆ ಹೇಗೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—18ಕ್ಕೆ 4 ಜನ ಅಂದರೆ 80 ಜನರಿಗೆ ಎಷ್ಟು ಎಂದು ಲೆಕ್ಕ ಹಾಕಬೇಕಾಗುತ್ತದೆ. 225 ಜನರಿಗೆ 35 ಜನರಾದರೂ ಮಾತನಾಡದೆ ಹೋದರೆ ಏತಕ್ಕೆ ಮಾಡಬೇಕು. ಒಂದು ಡಿಸ್ಟ್ರಿಕ್ಟಿಗೆ ಇಬ್ಬರಾದರೂ ಮಾತನಾಡಲಿ. ಒಂದು ಗಂಟೆಯವರೆಗೆ ಎಲ್ಲರಿಗೂ ಅವಕಾಶವನ್ನು ಮಾಡಿಕೊಟ್ಟು ಕಾರ್ಯಕಲಾಪಗಳನ್ನು ಮುಗಿಸಿ.

ಉಪಾಧ್ಯಕ್ಷರು.—ಕಾರ್ಯಕಲಾಪಗಳನ್ನು ಒಂದು ಗಂಟೆಗೆ ಪ್ರಾರಂಭ ಮಾಡಬಹುದು. ನಿಮ್ಮ ಸಹಕಾರ ಇಲ್ಲದೇಹೋದರೆ ನಿಗದಿಯಾದ ವೇಳೆಯಲ್ಲಿ ಚರ್ಚೆಯನ್ನು ಮುಗಿಸಲಿಕ್ಕೆ ಆಗುವುದಿಲ್ಲ. ನಿಮ್ಮ ಸಹಕಾರ ತುಂಬ ಅಗತ್ಯ ಹನ್ನೆರಡು ಗಂಟೆಗೆ ಪ್ರಾರಂಭಿಸಿ, ಐದುವರೆ ಗಂಟೆಗೆ ಮುಗಿಸಲು ಸಾಧ್ಯವಾಗುತ್ತದೆ.

ಒಬ್ಬ ಸದಸ್ಯರು.—ಅಧ್ಯಕ್ಷರೇ, ನಮಗೆ ಈವತ್ತು ಅವಕಾಶ ಸಿಗುತ್ತದೆಯೇ ಅಥವಾ ನಾಳೆ ಅವಕಾಶ ಸಿಗುತ್ತದೆಯೇ ಎಂದು ಕೇಳುತ್ತೇನೆ.

ಉಪಾಧ್ಯಕ್ಷರು.—ಕಾದುನೋಡಿ. ನಾಳೆಯೂ ಮುಂದುವರಿಯುತ್ತದೆ ಈ ಚರ್ಚೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಮಾನ್ಯ ಅಧ್ಯಕ್ಷರೇ, ಈ ಕಡೆಯೂ ಇನ್ನೂ ಕೆಲವಾರು ಸದಸ್ಯರು ಮಾತನಾಡುವವರಿದ್ದಾರೆ. ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ದಯವಿಟ್ಟು

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾಳೆಯೂ ಪೂರ್ಣವಾಗಿ ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದು ಬಹಳ ಮಹತ್ವದ ಬೇಡಿಕೆಯಾಗಿದೆ. ಎಲ್ಲ ಜಿಲ್ಲೆಗಳಲ್ಲೂ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಏನೇನು ಕೆಲಸಗಳು ಆಗಬೇಕು, ಮೈನರ್ ಇರಿಗೇಷನ್‌ಗೆ ಯಾವರೀತಿ ಗಮನ ಕೊಡಬೇಕು, ರಸ್ತೆಗಳ ಬಗ್ಗೆ ಏನು ಅವಶ್ಯಕತೆ ಇರುತ್ತದೆ. ಇದೆಲ್ಲಾ ಅವರವರ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯಗಳಾಗಿರುತ್ತದೆ. ಆದ್ದರಿಂದ ದಯಮಾಡಿ ನಾಳೆ ಒಂದು ದಿವಸ ಅವಕಾಶವನ್ನು ಮಾಡಿಕೊಡಿ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಎಲ್ಲ ವಿಷಯಗಳನ್ನು ನೋಡಿಕೊಂಡು ಟೈಮ್ ಹೆಚ್ಚು ಮಾಡಲಿಕ್ಕೆ ಅವಕಾಶವಿದೆಯೆಂದು ನಾವು ತಿಳಿದುಕೊಂಡು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಲ್ಲರಿಗೂ ಅವಕಾಶವನ್ನು ಕಲ್ಪಿಸಿಕೊಟ್ಟರೆ, ಎಲ್ಲ ನಮ್ಮ ಸ್ನೇಹಿತರು ಮಾತನಾಡುತ್ತಾರೆ, ಇದರ ಮೇಲೆ ತಮ್ಮ ಇಷ್ಟ. ಮಾನ್ಯ ಸಚಿವರನ್ನು ಕೇಳಿ ಹೆಚ್ಚಿನ ಅವಕಾಶವನ್ನು ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

* ಶ್ರೀ ವಿ. ಎಸ್. ಕೌಜಲಗಿ (ಅರಬಾವಿ).—ಸನ್ಮಾನ್ಯ ಉಪಾಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಾ, ನಾನು ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ರಾಜ್ಯದಲ್ಲಿ ಇರತಕ್ಕಂಥ ಸುಮಾರು ಒಂದು ಲಕ್ಷ ಕಿಲೋಮೀಟರ್‌ಗೆ ಮೇಲ್ಪಟ್ಟ ರಸ್ತೆಗಳಲ್ಲಿ ಲೋಕೋಪಯೋಗಿ ಇಲಾಖೆ ಸುಮಾರು 60 ಸಾವಿರ ಕಿಲೋಮೀಟರು ರಸ್ತೆಗಳನ್ನು ತನ್ನ ವ್ಯಾಪ್ತಿಗೆ ತೆಗೆದುಕೊಂಡಿದೆ. ಇದರಿಂದಾಗಿ ಇರಿಗೇಷನ್ ನೀರಾವರಿ ಇಲಾಖೆಯವರು ತೆಗೆದುಕೊಂಡು ಮಾಡಿರುವ 6 ಸಾವಿರಕ್ಕೂ ಮೇಲ್ಪಟ್ಟ ರಸ್ತೆಗಳನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳಿಗೆ ವಹಿಸಿಕೊಟ್ಟಿದೆ. ಈ ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಣ ಮತ್ತು ಜನ ಇರುವುದಿಲ್ಲ. ಆದ್ದರಿಂದ ರಸ್ತೆಗಳ ನಿರ್ಮಾಣ ಕಾರ್ಯವಾಗಲಿ, ಅಥವಾ ರಿಪೇರಿ ಮಾಡುವ ಕಾರ್ಯವಾಗಲಿ ಸಂಪೂರ್ಣವಾಗಿ ಮಾಡುವುದಕ್ಕೆ ಆಗುವುದಿಲ್ಲ. ಪ್ರಾಮಾಣಿಕವಾಗಿ ನಮ್ಮಲ್ಲಿರತಕ್ಕಂಥ ಆದಾಯದಿಂದ, ರಸ್ತೆಗಳನ್ನು ಸಂಪೂರ್ಣವಾಗಿ ಒಂದು ಉತ್ತಮವಾದ ರಸ್ತೆಯನ್ನಾಗಿ ಒಂದು ಸರ್ವ ಸಂಪರ್ಕ ರಸ್ತೆಯನ್ನಾಗಿ ಮಾಡುವುದಕ್ಕೆ ಸಾಕಷ್ಟು ಹಣವನ್ನು ಖರ್ಚುಮಾಡಬೇಕಾಗುತ್ತದೆ. ಅದಕ್ಕಾಗಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯು ರಸ್ತೆಗಳನ್ನು ತೆಗೆದುಕೊಳ್ಳುವ ಬಗ್ಗೆ ಯಾಗಲಿ ಅಥವಾ ಅವುಗಳನ್ನು ರಿಪೇರಿ ಮಾಡಿ ಉತ್ತಮ ರಸ್ತೆಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದರೆ ಅದಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಇಲ್ಲಿ ನಾವು ಒಂದು ಮಹತ್ವದ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಅದೇನೆಂದರೆ, ಲೋಕೋಪಯೋಗಿ ಇಲಾಖೆಯವರು ನಿರ್ಮಾಣ ಮಾಡುವಂತಹ ರಾಷ್ಟ್ರೀಯ ಹೆದ್ದಾರಿಗಳೇ ಇರಲಿ, ಹಳ್ಳಿಗಳ ರಸ್ತೆಗಳೇ ಇರಲಿ, ಇವುಗಳ ಗುಣಮಟ್ಟ ಬಹಳ ಕೆಟ್ಟಿದೆ. ನಾವು ಯಾವುದೇ ರಸ್ತೆ ತೆಗೆದುಕೊಂಡರೂ ಸಹ 6 ತಿಂಗಳು ಇಲ್ಲವೇ ಒಂದು ವರ್ಷದವರೆಗೆ ಮಾತ್ರ ಚೆನ್ನಾಗಿರುತ್ತವೆ. ಅನಂತರ ಹಾಳಾಗುತ್ತವೆ. ಈ ಕಾರಣದಿಂದ ನಾವು ಇವುಗಳ ಮೇಲೆ ಇಷ್ಟೊಂದು ದುಡ್ಡು ಖರ್ಚುಮಾಡಿದ ನಂತರವೂ ಇವುಗಳ ಗುಣಮಟ್ಟವನ್ನು ಕಾಯ್ದುಕೊಂಡು ಹೋಗುವುದಕ್ಕಾಗುತ್ತಿಲ್ಲ. ಈ ಕಾರಣದಿಂದ ಈ ಇಲಾಖೆಯಲ್ಲಿ ರೋಡ್–ಇಂಜಿನೀರಿಂಗ್ ಬಗ್ಗೆ ಆಳವಾಗಿ ಅಭ್ಯಾಸ ಮಾಡಬೇಕಾಗುತ್ತದೆಂದು ಕಾಣುತ್ತದೆ. ನ್ಯಾಷನಲ್ ಹೈ–ವೇಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಸಾಕಷ್ಟು ಹಣ ಕೊಡುತ್ತದೆ, ಈ ಹಣದಿಂದ ರಸ್ತೆ ನಿರ್ಮಾಣ ಮಾಡಿದ ಒಂದು ವರ್ಷದ ನಂತರ ರಿಪೇರಿ ಮಾಡಲು ಸಾಧ್ಯವಾಗದಷ್ಟು ಕೆಟ್ಟಿರುತ್ತದೆ. ಒಂದು ರಸ್ತೆಯ ಮೇಲೆ ಎಷ್ಟು ವಾಹನಗಳು ಓಡಾಡುತ್ತವೆಂಬುದನ್ನು ನೋಡಿಕೊಂಡು ಅದರ ಆಧಾರದ ಮೇಲೆ ಒಳ್ಳೆಯ ಗುಣಮಟ್ಟದ ರಸ್ತೆಗಳನ್ನು ನಿರ್ಮಾಣ ಮಾಡಬೇಕು. ಈ ಬಗ್ಗೆ ಯೋಗ್ಯವಾದ ಕ್ರಮ ಕೈಗೊಳ್ಳಬೇಕು. ಈಗ ರಸ್ತೆಗಳ ರಿಪೇರಿ ಮತ್ತು ಮೇನ್‌ಟೆನೆನ್ಸ್‌ಗೆಂದು ಒಂದೆರಡು ಕೋಟಿ ರೂಪಾಯಿಗಳನ್ನು ಏನು ಕೊಡುತ್ತಿದ್ದೀರಿ, ಇದು ರಸ್ತೆಗಳಲ್ಲಿರುವ ಪಿಟ್‌ಗಳನ್ನು ಮುಚ್ಚುವುದಕ್ಕೇ ಖರ್ಚಾಗುತ್ತಿದೆಯೇ ಹೊರತು ಹೊಸ ರಸ್ತೆಗಳನ್ನು ಮಾಡಿಸುವುದಕ್ಕಾಗುತ್ತಿಲ್ಲ. ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಯಾವ ಸರ್ಕಾರವಾದರೂ ಇಷ್ಟೇ ಮಾಡಬೇಕಾಗುತ್ತದೆಯೇ ಹೊರತು ಹತ್ತು ಕೋಟಿ ರೂಪಾಯಿಗಳನ್ನು ರಸ್ತೆ ಬಾಬಿಗೆಂದೇ ಖರ್ಚು ಮಾಡುವುದಕ್ಕಾಗುವುದಿಲ್ಲ. ಆದರೂ ಸಹ ರಸ್ತೆಗಳ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ರಸ್ತೆಗಳಿಗೆಂದು ಕೇಂದ್ರದಿಂದ ಸಿ.ಆರ್.ಎಫ್.ನಿಂದ ಹಣ ಏನು ಬರುತ್ತಿದೆ, ಇದನ್ನು ಹೆಚ್ಚು ಮಾಡಬೇಕೆಂದು ತಾವು ಕೇಂದ್ರಕ್ಕೆ ಹೇಳಬೇಕು. ಕಳೆದ 2–3 ವರ್ಷಗಳಿಂದ ಈ ಬಾಬಿನಿಂದ ಹೆಚ್ಚು ಹಣ ಬಂದಿಲ್ಲ. ಆದ್ದರಿಂದ ತಾವು ಹೆಚ್ಚಿನ ಹಣ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಆ ಹಣದಿಂದ ಹೆಚ್ಚಿನ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಾನು ಕಳೆದ 2 ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿಗಳಾದಂಥ ಅಥಣಿ–ಮುಮ್ಮಿಗಟ್ಟಿ ರಸ್ತೆ ಹಾಗೂ ಅರಬಾವಿ–ಲೋಕಾಪುರ ರಸ್ತೆಗಳನ್ನು ತೆಗೆದುಕೊಂಡು ಸ್ಟೇಟ್–ಹೈವೇ ಮಾಡಬೇಕೆಂದು ಇಲಾಖಾ ಮುಖ್ಯಸ್ಥರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ಕಾಗದ ಬರೆದಿದ್ದರೂ ಸಹ ಇಲ್ಲಿಯವರೆಗೆ ಏನೂ ಕೆಲಸವಾಗಿಲ್ಲವೆಂದು ತಮಗೆ ತಿಳಿಯಬಯಸುತ್ತೇನೆ.

ಇನ್ನು ಕಟ್ಟಡಗಳನ್ನು ನೋಡಿಕೊಳ್ಳಲು ಮತ್ತು ಕಟ್ಟಡಗಳ ರಿಪೇರಿಗೆಂದು ಸುಮಾರು 126

ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ. ಇವುಗಳ ಮೇನ್‌ಟೇನ್ ಯಾವ ರೀತಿ ಆಗುತ್ತಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಸರ್‌ಪ್ರೈಜ್ ವಿಜಿಟ್ ಕೊಟ್ಟು ನೋಡಬೇಕು. ಕಟ್ಟಡಗಳನ್ನು ಮತ್ತು ರಸ್ತೆಗಳನ್ನು ಕಟ್ಟಿಸಿದ ಮೇಲೆ ಅವುಗಳಿಗೆ ಒಂದು ಲೈಫ್ ಇರುತ್ತದೆ. ಈ ಇಲಾಖೆಯಿಂದ ಕಟ್ಟಿಸುವಂತಹ ಕಟ್ಟಡಗಳ ಗುಣಮಟ್ಟ ಚೆನ್ನಾಗಿಲ್ಲದ ಕಾರಣ ಪ್ರತಿವರ್ಷವೂ ಮೇನ್‌ಟೇನ್ ಆಗಬೇಕಾಗಿದೆ. ಸೇತುವೆಗಳ ವಿಚಾರವೂ ಸಹ ಇದೇ ರೀತಿಯಲ್ಲಿದೆ. ಕಟ್ಟಿದ ಒಂದು ವರ್ಷದಲ್ಲಿಯೇ ಬಿರುಕು ಬಿಟ್ಟಿರುವುದನ್ನು ನೋಡಬಹುದಾಗಿದೆ. ಎಲ್ಲ ಕೆಲಸಗಳೂ ಒಂದೇ ವರ್ಷದಲ್ಲಿ ಕೆಟ್ಟುಹೋಗುತ್ತಿವೆ ಎಂದು ನಾನು ಹೇಳುವುದಿಲ್ಲ. ಆದರೆ ಗುಣಮಟ್ಟದ ಬಗ್ಗೆ ಮಾನ್ಯ ಮಂತ್ರಿಗಳು ತೀವ್ರವಾದಂಥ ಕ್ರಮ ಕೈಗೊಳ್ಳಬೇಕು. ಕೆಲವು ಕಡೆಗಳಲ್ಲಿ ಕಲ್‌ವರ್ಟ್‌ಗಳನ್ನು ಕಟ್ಟಿಸುತ್ತಾರೆ. ಕೆಲವು ಕಡೆಗಳಲ್ಲಿ ಜೋರಾಗಿ ಮಳೆ ಬಂದಾಗ ಕೊಚ್ಚಿಕೊಂಡು ಹೋಗಿರುತ್ತವೆ. ಮತ್ತೆ ಫ್ಲಡ್ ರಿಲೀಫ್‌ನಿಂದ ಇದೇ ಕೆಲಸವನ್ನು ಮಾಡಿಸುತ್ತಾರೆ. ಗುಣಮಟ್ಟದ ಕಡೆಗೆ ಗಮನ ಕೊಟ್ಟರೆ ಇದೇ ಹಣವನ್ನು ಹೊಸ ಕೆರೆಗಳ ನಿರ್ಮಾಣಕ್ಕೆ ಬಳಸಬಹುದು. ನಮಗೆ ಸ್ವಾತಂತ್ರ್ಯ ಬಂದು 35 ವರ್ಷಗಳ ನಂತರವೂ ಎಲ್ಲ ಹಳ್ಳಿಗಳಿಗೆ ರಸ್ತೆಗಳನ್ನು ಕೊಡಲು ಸಾಧ್ಯವಾಗಿಲ್ಲ. ಆದ್ದರಿಂದ ಈಗಲಾದರೂ ಒಂದು ಯೋಜಿತ ಕಾರ್ಯಕ್ರಮ ಹಾಕಿಕೊಂಡರೆ ಇನ್ನು 20–25 ವರ್ಷಗಳಲ್ಲಿಯಾದರೂ ಎಲ್ಲ ಹಳ್ಳಿಗಳಿಗೂ ರಸ್ತೆಗಳನ್ನು ಮಾಡಿಕೊಡಬಹುದು. ಇಲ್ಲದಿದ್ದರೆ ಇನ್ನು 50 ವರ್ಷಗಳಾದರೂ ರಸ್ತೆಗಳನ್ನು ಹಳ್ಳಿಯ ಜನರು ಕಾಣುವುದಕ್ಕಾಗುವುದಿಲ್ಲ.

ಇನ್ನು ನೀರಾವರಿ ಬಗ್ಗೆ ಹೇಳಬೇಕೆಂದರೆ, ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಘಟಪ್ರಭಾ ಮತ್ತು ಮಲಪ್ರಭಾ ಎಂಬ ಎರಡು ದೊಡ್ಡ ಜಲಾಶಯಗಳಿವೆ. ಈ ಒಂದೊಂದು ಜಲಾಶಯದಿಂದ ಸುಮಾರು 6 ಲಕ್ಷ ಎಕರೆಗಳಿಗೆ ನೀರಾವರಿಯಾಗುತ್ತದೆ. ಆದರೆ ದುರ್ದೈವದ ಸಂಗತಿ ಎಂದರೆ ಕೆಲಸಗಳು ನಿಯೋಜಿತ ರೀತಿಯಲ್ಲಿ ಆಗುತ್ತಿಲ್ಲ. ಹಿಡಕಲ್ ಜಲಾಶಯ ಪೂರ್ತಿಯಾಗಿ ಎರಡು ವರ್ಷಗಳಾಯಿತು. ಇಲ್ಲಿ ಸಂಗ್ರಹವಾಗುವಂತಹ 49 ಟಿ.ಎಂ.ಸಿ.ಯಷ್ಟು ನೀರನ್ನು ಉಪಯೋಗಿಸಿಕೊಳ್ಳಲು ಚಾನಲ್ ಕೆಲಸ ಇನ್ನೂ ಪೂರ್ತಿಯಾಗಿಲ್ಲ. ಘಟಪ್ರಭ ಬಲದಂಡೆ ನಾಲೆ ಕೆಲಸ ಪೂರ್ತಿಯಾದರೆ ಗೋಕಾಕ್‌ನಲ್ಲಿ ಸುಮಾರು 80 ಸಾವಿರ ಎಕರೆ ಪ್ರದೇಶಗಳಿಗೆ ನೀರನ್ನು ಕೊಡಬಹುದು. ಈ ನಾಲೆ ಪೂರ್ತಿಯಾದರೆ ಬಿಜಾಪುರ ಜಿಲ್ಲೆಗೂ ಹೆಚ್ಚಿನ ಉಪಯೋಗವಾಗುತ್ತದೆ. ಆದರೆ ಈ ಕೆಲಸಕ್ಕೆ ಈ ವರ್ಷ 8 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇದರಿಂದ ಕೆಲಸ ಜಾಗ್ರತೆ ಮುಗಿಯುವುದಿಲ್ಲ. ಈ ಕೆಲಸ 1990–91ಕ್ಕೆ ಮುಗಿಯುತ್ತದೆಂದು ಹೇಳಿದ್ದಾರೆ. ಅಲ್ಲಿಯವರೆಗೆ ಕಾಯಬೇಕೆಂದರೆ. ಇಲ್ಲಿಯವರೆಗೆ ಖರ್ಚು ಮಾಡಿದ ದುಡ್ಡೆಲ್ಲಾ ಏನಾಗಬೇಕು ? ಈಗ ಒಂದು ಎಕರೆಗೆ 2 ಸಾವಿರ ರೂಪಾಯಿಗಳಷ್ಟು ಖರ್ಚು ಬಂದರೆ ಮುಂದೆ ಇದು 5 ಸಾವಿರವಾಗಬಹುದು. ಆದ್ದರಿಂದ ಬಲದಂಡೆ ನಾಲೆ ಕೆಲಸ ಜಾಗ್ರತೆ ಮುಗಿಸಲು 20 ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಬಜೆಟ್‌ನಲ್ಲಿ ಇಷ್ಟು ಹಣಕ್ಕೆ ಪ್ರಾವಿಜನ್ ಮಾಡಿಕೊಟ್ಟರೆ ನಮ್ಮ ಭಾಗದ ಜನರಿಗೆ ಹೆಚ್ಚಿನ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇನ್ನು ನೀರಾವರಿ ಕ್ಷೇತ್ರಗಳಲ್ಲಿ ಬರತಕ್ಕಂಥ ಜಮೀನುಗಳ ರೈತರಿಗೆ ಯೋಗ್ಯವಾದ ಮಾರ್ಗದರ್ಶನ ನೀಡುವುದಕ್ಕಾಗಿ 'ಕಾಡಾ' ಎಂದು ಮಾಡಿದ್ದಾರೆ. ಆದರೆ ಅಲ್ಲಿ ಕೆಲಸ ಮಾಡಲು ಸಾಕಷ್ಟು ಸಿಬ್ಬಂದಿ ವರ್ಗವಿಲ್ಲ ಮತ್ತು ಇದಕ್ಕೆ ಸಾಕಷ್ಟು ಹಣವನ್ನೂ ಸಹ ಸರ್ಕಾರ ಕೊಡುತ್ತಿಲ್ಲ, ಇದರಿಂದ ಈ ನೀರಾವರಿ ಕ್ಷೇತ್ರಗಳಲ್ಲಿ ಬರತಕ್ಕಂಥ ಜಮೀನಿನ ರೈತರಿಗೆ ತಮ್ಮ ಜಮೀನಿನಲ್ಲಿ ಯಾವ ಬೆಳೆ ಬೆಳೆಯಬೇಕು, ತಮ್ಮ ಭೂಮಿಯ ಗುಣಮಟ್ಟ ಏನಿದೆ ಎನ್ನುವಂತಹ ಕಲ್ಪನೆ ಇನ್ನೂ ಬಂದಿಲ್ಲ. ಈ ಕಾರಣದಿಂದ ನಮ್ಮ ಕೃಷಿ ಇಲಾಖೆಯವರು ಮತ್ತು ಲೋಕೋಪಯೋಗಿ ಇಲಾಖೆಯವರು ಸೇರಿಕೊಂಡು ಇಂತಹ ಭೂಮಿಗಳಿಗೆ ಎಷ್ಟು ನೀರು ಬಿಡಬೇಕು ಮತ್ತು ಎಂತಹ ಬೆಳೆ ಬೆಳೆದರೆ ರೈತರಿಗೆ ಅನುಕೂಲವಾಗುತ್ತದೆಂಬ ಬಗ್ಗೆ ಸಮಾಲೋಚಿಸಿ ರೈತರಿಗೆ ಸೂಕ್ತ ತಿಳಿವಳಿಕೆ ಕೊಡಬೇಕು, ಈ ಕೆಲಸ ಮಾಡಲು ಈ ಕಾಡಾಗೆ ಹೆಚ್ಚಿನ ಹಣವನ್ನು ಸಹ ಕೊಡಬೇಕು.

ಇನ್ನು ಈ ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕಂಥ ಏತ ನೀರಾವರಿ ಯೋಜನೆಗಳಿಗೆ ಅನುಮತಿ ಕೊಡಬಾರದು ಮತ್ತು ಇದನ್ನು ಸ್ಥಗಿತಗೊಳಿಸಬೇಕೆಂದು ಸುಮಾರು ಎರಡು ಅಥವಾ ಎರಡೂವರೆ ವರ್ಷಗಳ ಹಿಂದೆ ಸರ್ಕಾರ ಒಂದು ಆಜ್ಞೆ ಹೊರಡಿಸಿದೆ. ಘಟಪ್ರಭಾ ಬಲದಂಡೆ ನಾಲೆ ಪ್ರದೇಶದ ನಕ್ಷೆಯನ್ನು ನೋಡಿದ್ದೇ ಆದರೆ ಅಲ್ಲಿ ಅನೇಕ ತಗ್ಗು ದಿಣ್ಣೆ ಪ್ರದೇಶಗಳಿರುವುದು ಕಂಡುಬರುತ್ತದೆ. ಇಂತಹ ತಗ್ಗು ದಿಣ್ಣೆ ಪ್ರದೇಶಗಳಿಗೆ ಬಲದಂಡೆ ನಾಲೆಯ ನೀರು ಹೋಗುವುದಿಲ್ಲ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ಈ ನಾಲೆಯ ನೀರು ಟೇಲ್–ಎಂಡ್‌ನಲ್ಲಿರುವಂತಹ ಪ್ರದೇಶದ ಜನರಿಗೆ ಪೂರೈಕೆಯಾಗುವುದಿಲ್ಲ. ಆದಕಾರಣ ಇಂತಹ ಕಡೆಗಳಲ್ಲಿ ಏತ ನೀರಾವರಿ ಯೋಜನೆಗಳಿಗೆ ಅನುಮತಿ ಕೊಡುವುದು ಒಳ್ಳೆಯದು, ಒಂದೊಂದು ಏತ ನೀರಾವರಿ ಯೋಜನೆಯಿಂದ ಸಾವಿರದಿಂದ ಎರಡೂವರೆ ಸಾವಿರ ಎಕರೆಗಳಿಗೆ ನೀರಾವರಿಯಾಗುತ್ತದೆ. ನನ್ನ ಕ್ಷೇತ್ರದಲ್ಲಿಯೇ 8 ಇಂತಹ ಏತ ನೀರಾವರಿ ಯೋಜನೆಗಳ ಕೆಲಸಗಳು ಈ ಸರ್ಕಾರದ ಆಜ್ಞೆಯಿಂದ ಸ್ಥಗಿತವಾಗಿವೆ. ಕಾರಣವೇನು

ಎಂದು ಕೊಟ್ಟಿಲ್ಲ. ಕಾಡಾ ಏರಿಯಾದೊಳಗೆ ಬರತಕ್ಕ ಎಲ್ಲಾ ನೀರಾವರಿ ಯೋಜನೆಗಳನ್ನು ಸ್ಥಗಿತಗೊಳಿಸಬೇಕು, ಇದಕ್ಕೆ ಏನು ಅರ್ಥ? ನನ್ನ ಬದಿಯಲ್ಲಿರತಕ್ಕ ರೈತ ಹಸಿರುಕ್ರಾಂತಿಯನ್ನು ಮಾಡುತ್ತಿದ್ದಾನೆ, ನನ್ನ ಪರಿಸ್ಥಿತಿ ನೀರು ಇಲ್ಲದೆ ಇರಬೇಕಾಗಿದೆ. ಸರ್ಕಾರ ಮಂಜೂರಾತಿ ಮಾಡಿದ್ದರೂ ಸುಮಾರು ಮೂರು ಮೂರೂವರೆ ವರ್ಷಗಳಿಂದ ಟೆಂಡರ್ ಕರೆಯದೆ ಕೆಲಸಗಳು ಹಾಗೆಯೇ ನಿಂತಿವೆ. ನೀರಾವರಿ ಇಲಾಖೆ ಯಾವರೀತಿ ಕೆಲಸ ಮಾಡುವುದಕ್ಕೆ ಬಂದಿದೆ? 10 ವರ್ಷಗಳಾದರೂ ಕೂಡ ಜನರಿಗೆ ಹಸಿರುಕ್ರಾಂತಿ ಮಾಡಲಿಕ್ಕೆ ಆಗಿಲ್ಲ ಅಂದರೆ ರಕ್ತಕ್ರಾಂತಿಯನ್ನು ಕೊಡುವ ಪರಿಸ್ಥಿತಿ ಬಂದೀತು. ಏತ ನೀರಾವರಿ ಯೋಜನೆಗಳನ್ನು ಯಾವ ಕಾರಣದಿಂದ ಸ್ಥಗಿತಗೊಳಿಸಿದ್ದೀರಿ? ನಾನು ಡಿಪಿಎಪಿ ಯೋಜನೆಯನ್ವಯ ಕೆಲವು ಏತ ನೀರಾವರಿಗಳನ್ನು ಮಂಜೂರು ಮಾಡಿಸಿ ಕೊಟ್ಟಿದ್ದೇನೆ; ಅವುಗಳನ್ನು ಇನ್ನೂ ಪೂರ್ಣ ಮಾಡಿಲ್ಲ. ಈಗ ಜನರಿಗೆ ತೊಂದರೆಯಾಗುತ್ತಿದೆ. ಜಲಾಶಯ ಪ್ರದೇಶಗಳಲ್ಲಿ ಹೊಳೆ ನೀರು ಹರಿದುಹೋಗುತ್ತದೆ, 5-10 ಕಿಲೋಮೀಟರ್ ದೂರಗಳಲ್ಲಿ ಒಂದೊಂದು ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟಿ ನೀರನ್ನು ತಡೆಹಿಡಿದರೆ, ಮಳೆಗಾಲದಲ್ಲಿ ನೀರನ್ನು ಸ್ಟೋರೇಜ್ ಮಾಡಿಕೊಂಡರೆ ಏತ ನೀರಾವರಿಗೆ ಉಪಯೋಗವಾಗುತ್ತದೆ. ಇದನ್ನು ತಾವು ಅಂತರರಾಜ್ಯ ನೀರಿನ ವ್ಯಾಪ್ತಿಯೊಳಗೆ ಬರತಕ್ಕ ಕೆಲಸವೆಂದು ಹೇಳಬಹುದು. ಇಲ್ಲಿ ಮಳೆ ಬಿದ್ದರೆ ನೀರಿನ ಜಗಳ ಬರುತ್ತದೆ. ಮಳೆಗಾಲದಲ್ಲಿ ಹೆಚ್ಚಿನ ನೀರನ್ನು ಸ್ಟೋರ್ ಮಾಡಲಿಕ್ಕೆ ಬರಾಟೆ ಕಟ್ಟುವುದರಿಂದ ಹೆಚ್ಚಿನ ಅನುಕೂಲವಾಗುತ್ತದೆ. ಈ ಒಂದು ಯೋಜನೆಯನ್ನು ನಾನು ನನ್ನ ಮತದಾರ ಕ್ಷೇತ್ರದಲ್ಲಿ ಮಾಡಿದ್ದೇನೆ. ನಾಲ್ಕು ಬರಾಟೆಗಳನ್ನು 5 ಕಿಲೋಮೀಟರ್ ಅಂತರದಲ್ಲಿ ಕಟ್ಟಿ ಏತನೀರಾವರಿ ಯೋಜನೆಗೆ ಅನುಕೂಲ ಮಾಡಿಕೊಟ್ಟಿದ್ದೇನೆ. ಅದನ್ನು ತಾವು ಬೇಕಾದರೆ ಪರಿಶೀಲನೆ ಮಾಡಬಹುದು. ಹಿಡಕಲ್ ಜಲಾಶಯದಲ್ಲಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆಂದು ಬೆಳಗಾಂನಲ್ಲಿ ಕ್ಯಾಬಿನೆಟ್ ಮೀಟಿಂಗ್ ಆದಾಗ ಹೇಳಿದ್ದಾರೆ. ಈ ಮಾತನ್ನು ಪದೇ ಪದೇ ಹೇಳುತ್ತಾ ಬಂದಿದ್ದಾರೆ. ಯಾವುದೇ ಸರ್ಕಾರವಿರಲಿ ಅದು ಬೇರೆ ರಾಜ್ಯದ ವಿದ್ಯುಚ್ಛಕ್ತಿ ಕೊರತೆಯನ್ನು ಪೂರೈಸಬೇಕಾದರೆ ಅಥವಾ ಜಿಲ್ಲಾಮಟ್ಟದ ವಿದ್ಯುತ್ ಕೊರತೆಯನ್ನು ಹೋಗಲಾಡಿಸಬೇಕಾದರೆ ಉದಾಹರಣೆಗೆ ನಮ್ಮ ಬೆಳಗಾಂ ಜಿಲ್ಲೆಯ ವಿದ್ಯುತ್ ಕೊರತೆಯನ್ನು ನೀಗಿಸುವುದಕ್ಕೆ ಯಾವ ರೀತಿ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಬಿಟ್ಟಿದ್ದು. ಆ ರೀತಿ ಮಾಡುವುದರಿಂದ ಇಡೀ ಬೆಳಗಾಂ ಜಿಲ್ಲೆಗೆ ಬೇಕಾದಂತಹ ವಿದ್ಯುತ್‌ನ್ನು ಪೂರೈಕೆ ಮಾಡಿದಂತಾಗುತ್ತದೆ ಎಂದು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ತಮ್ಮ ಸರ್ಕಾರ ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿದೆ ಅದರ ನಂಬರ್ ಹೀಗಿದೆ.— ಜಿ. ಒ. ಪಿಡಬ್ಲ್ಯೂಡಿ 8 ಎಂಜಿಪಿ 83 ದಿನಾಂಕ 30-4-83 ಕನ್‌ಸೆಲ್ಟೇಟೀವ್ ಕಮಿಟಿ ಮಾಡುವುದಕ್ಕೆ ಒಂದು ಆರ್ಡರ್ ಮಾಡಿದ್ದಾರೆ. ಆಯಾಯ ಭಾಗದಲ್ಲಿ ನೀರಿನ ಪೂರೈಕೆಯನ್ನು ಯಾವರೀತಿ ಮಾಡಬೇಕು ಎನ್ನುವ ದೃಷ್ಟಿಯಿಂದ ಕನ್ಸಲ್‌ಟೇಟೀವ್ ಕಮಿಟಿಯನ್ನು ಮಾಡಿದ್ದಾರೆ. ಇಂತಹ ಕಮಿಟಿಗಳಲ್ಲಿ ಹಿಂದೆ ಆಯಾಯ ಭಾಗದ ಶಾಸಕರು ಸದಸ್ಯರಾಗಿರುತ್ತಿದ್ದರು. ಈಗ ತಾವೇನು ಮಾಡಿದ್ದೀರಿ ಅಂದರೆ ಎಲ್ಲಾ ಶಾಸಕರನ್ನು ತೆಗೆದು ತಮಗೆ ಬೇಕಾದಂತಹ ಪಾರ್ಟಿ ಜನರನ್ನು ಹಾಕಿದ್ದೀರಿ. ನಿಮ್ಮ ಪಾರ್ಟಿಯ ಜನರನ್ನು ಹಾಕಲಿಕ್ಕೆ ನನ್ನ ಅಭ್ಯಂತರವಿಲ್ಲ. ಪಾರ್ಟಿ ಜನರನ್ನು ಹಾಕುವುದರ ಜೊತೆಗೆ ಸಂಬಂಧಪಟ್ಟ ಶಾಸಕರನ್ನು ಆ ಸಮಿತಿಯೊಳಗೆ ಸೇರಿಸಬೇಕು. ಮತ್ತೊಂದು ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಏನೆಂದರೆ ನೀರಾವರಿ ಇಲಾಖೆಯಲ್ಲಿ ಬರತಕ್ಕ ಕಾಲುವೆಗಳನ್ನು ಪ್ರತಿವರ್ಷ ತೆಗೆದುಕೊಳ್ಳುತ್ತಾರೆ. ಘಟಪ್ರಭಾ ಎಡದಂಡೆ ಕಾಲುವೆಯನ್ನು ತೆಗೆದುಕೊಂಡು 16ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಲೈನಿಂಗ್ ಕೆಲಸ ಮಾಡುತ್ತಿದ್ದಾರೆ. ಸಾಧಾರಣವಾಗಿ ಬಹಳ ಮಂದಗತಿಯಿಂದ ಇದರ ಕೆಲಸ ನಡೆಯುತ್ತಿದೆ. ಇದು 22ಸಾವಿರ ಹೆಕ್ಟೇರ್ ನೀರಾವರಿ ವ್ಯಾಪ್ತಿಯೊಳಗೆ ಬರುತ್ತದೆ. ಕಾರ್ಯಕ್ರಮವನ್ನು ಸರಿಯಾಗಿ ಹಾಕಿಕೊಂಡು ಕೆಲಸವನ್ನು ತೀವ್ರಗತಿಯಿಂದ ಮಾಡಿದರೆ ಹೆಚ್ಚಿನ ನೀರಾವರಿಗೆ ಅನುಕೂಲವಾಗುತ್ತದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಮ್ಮ ಇಲಾಖೆಯ ಸಿಬ್ಬಂದಿವರ್ಗದ ಬಗ್ಗೆ ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ, ಯಾವುದೇ ಇಂಜಿನಿಯರ್ ಆಗಿರಲಿ ಆತ ಜೂನಿಯರ್ ಇಂಜಿನಿಯರ್ ಆಗಿರಬಹುದು, ಅಸಿಸ್ಟೆಂಟ್ ಇಂಜಿನಿಯರ್ ಆಗಿರಬಹುದು ಅವರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತೀರಿ, ಅವರು ತಮ್ಮ ಇಲಾಖೆಯಲ್ಲಿ ಬಂದ ತಕ್ಷಣ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸಮಾಡಲು ಆಸ್ಪದ ಕೊಡಬೇಕು. ಈಗ ಏನಾಗಿದೆ ಅಂದರೆ ವರ್ಗಾವಣೆ ಸಿ ಅಂಡ್ ಬಿ ವ್ಯಾಪ್ತಿಯಲ್ಲೇ ಇದೆ. ಎಲ್ಲರೂ ಸಿ. ಅಂಡ್ ಬಿ. ಬೇಕೆಂದು ಬರುತ್ತಾರೆ. ಆದ್ದರಿಂದ ಎಲ್ಲರನ್ನೂ ಕಡ್ಡಾಯವಾಗಿ ಇನ್‌ವೆಸ್ಟಿಗೇಷನ್ ಸರ್ವೆಯಲ್ಲಿ ಎರಡು-ಮೂರು ವರ್ಷ ಸಿ ಅಂಡ್ ಬಿ ಯಲ್ಲಿ ಎರಡು-ಮೂರು ವರ್ಷ, ಇರಿಗೇಷನ್‌ನಲ್ಲಿ ಎರಡು-ಮೂರು ವರ್ಷ ಅದೇರೀತಿ ನ್ಯಾಷನಲ್ ಹೈವೇ ಇಲ್ಲಿ ಕೆಲಸ ಹಚ್ಚಿದರೆ ವರ್ಗಾವಣೆಯ ತಾಪತ್ರಯ ಕಡಿಮೆಯಾಗುತ್ತದೆ. ಪ್ರತಿಯೊಬ್ಬ ಇಂಜಿನಿಯರ್ ಅವನ ಅವಧಿಯಲ್ಲಿ ಮೂರ್ನಾಲ್ಕು ವರ್ಷ ಯಾವ ಕೆಲಸ ಮಾಡಿದ್ದಾನೆ ಆ ಕೆಲಸದ ಗುಣಮಟ್ಟ ನೋಡಿಕೊಂಡು ಅವನ ಸಿ. ಆರ್. ರಿಪೋರ್ಟ್‌ನಲ್ಲಿ ಬರೆದುಬಿಟ್ಟರೆ ಲೋಕೋಪಯೋಗಿ ಇಲಾಖೆಯಲ್ಲಿ ಎಲ್ಲರೂ ಸರಿಹೋಗುತ್ತಾರೆ. ಯಾರು ಒಳ್ಳೆಯ ಕೆಲಸಗಳನ್ನು ಮಾಡಿರುತ್ತಾರೆ ಅಂತಹವರಿಗೆ ಪ್ರಮೋಷನ್ ಕೊಡಿ. ಅವನ

ಕಟ್ಟಿಸಿರತಕ್ಕ ಬಿಲ್ಡಿಂಗ್‌ಗಳು ಯಾವ ರೀತಿ ಇವೆ, ಆತ ಮಾಡಿಸಿರತಕ್ಕ ರಸ್ತೆಗಳು ಯಾವರೀತಿ ಇವೆ ಎನ್ನುವುದನ್ನು ನೋಡಿಕೊಂಡು ಯಾರು ಸರಿಯಾಗಿ ಕೆಲಸ ಮಾಡಿಲ್ಲ ಅಂತಹವರ ಮೇಲೆ ಕ್ರಮ ತೆಗೆದುಕೊಂಡರೆ ಇಲಾಖೆಯಲ್ಲಿ ಯಾರೂ ವರ್ಗಾವಣೆ ಕೇಳುವುದಿಲ್ಲ, ಶಾಸಕರು ಹೇಳುವ ಅವಶ್ಯಕತೆಯೂ ಬರುವುದಿಲ್ಲ. ಈ ಒಂದು ಕ್ರಮವನ್ನು ತೀಕ್ಷ್ಣವಾಗಿ ತೆಗೆದುಕೊಳ್ಳಬೇಕು. ಅಧಿಕಾರಿಗಳಿಗೆ ಏನು ಅಧಿಕಾರ ಕೊಟ್ಟಿದ್ದೀರಿ ? ಉದಾಹರಣೆಗೆ ಎಕ್ಸಿಕ್ಯುಟೀವ್ ಇಂಜಿನಿಯರ್ 25ಸಾವಿರ ರೂಪಾಯಿ ಖರ್ಚುಮಾಡಬೇಕೆಂದು ಹೇಳಿದ್ದೀರಿ. ಇವತ್ತು 25ಸಾವಿರ ರೂಪಾಯಿ ಅರ್ಧ ಕಿಲೋಮೀಟರ್ ರಸ್ತೆ ಮಾಡುವುದಕ್ಕಾಗುವುದಿಲ್ಲ. ಈಗಿರತಕ್ಕ ವ್ಯಾಪ್ತಿಯನ್ನು ವಿಸ್ತರಿಸಿ ಹೆಚ್ಚಿನ ಹಣ ಮತ್ತು ಅಧಿಕಾರ ಕೊಡಬೇಕು. ಅದೇರೀತಿ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರಿಗೂ ಅಧಿಕಾರ ಮತ್ತು ಹಣವನ್ನು ಹೆಚ್ಚು ಮಾಡಬೇಕು. ತಮ್ಮ ಇಲಾಖೆಯಲ್ಲಿ ಬಡ್ಜೆಟ್‌ನಲ್ಲಿ ಆ ಕೆಲಸ ಸೇರಿಸಿದ್ದರೂ ತಾಂತ್ರಿಕ ಮಂಜೂರಾತಿಯಾಗಬೇಕು. ಆಮೇಲೆ ಫೈನಾನ್ಸ್ ಮಂಜೂರಾತಿಯಾಗಬೇಕು. ಹೀಗೆ ಸುಮಾರು 20ಸಾರಿ ಬೆಂಗಳೂರಿನಿಂದ ಗೋಕಾಕ್‌ಗೆ ಫೈಲು ಓಡಾಡುತ್ತಿರುತ್ತದೆ. ಇಲ್ಲಿ ಬೆಂಗಳೂರಿನಲ್ಲಿ ಕುಳಿತು ಮಾಡಿದಂತಹ ಇಂಜಿನಿಯರ್ ಪ್ಲಾನ್, ಆಮೇಲೆ ಪತ್ರ ವ್ಯವಹಾರ ಮಾಡಬೇಕು. ಆ ಕೆಲಸ ಈ ವರ್ಷ ಆಗಲಿಲ್ಲ, ಮುಂದಿನ ವರ್ಷ ಮಾರ್ಚ್ 31ರೊಳಗೆ ಕೆಲಸ ಪ್ರೋಗ್ರೆಸ್ ಆಗಬೇಕು. ಇಲ್ಲದಿದ್ದರೆ ಹೇಗಾಗುತ್ತದೆ ಅಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರು ಹಣಕಾಸು ಮಂತ್ರಿಗಳಾಗಿದ್ದಾಗ ಮಂಜೂರು ಮಾಡಿದಂತಹ ಕೆಲಸಕಾರ್ಯಗಳನ್ನು ನಾವು 1972ರಲ್ಲಿ ಮಾಡಿಕೊಟ್ಟಿದ್ದೇವೆ. ನಾವು ಕೆಲಸವನ್ನು ಅಧಿಕಾರಿಗಳಿಗೆ ಹಚ್ಚುವುದು ಅಷ್ಟೇ ಅಲ್ಲ, ಆ ಅಧಿಕಾರಿಗಳ ಮೇಲೆ ಹಿಡಿತವನ್ನು ಇಟ್ಟುಕೊಂಡು ಯೋಗ್ಯ ಮಾರ್ಗದರ್ಶನ ಮಾಡಿದರೆ ಹೆಚ್ಚಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾನು ಹೇಳುವುದೇನೆಂದರೆ, ಇವತ್ತು ಅಧಿಕಾರದಲ್ಲಿ ನೀವು ಇರುತ್ತೀರಿ, ನಾಳೆ ನಾವು ಇರುತ್ತೇವೆ. ಆದರೆ ಅಧಿಕಾರಿಗಳು ಮಾತ್ರ ಅಲ್ಲೇ ಇರುತ್ತಾರೆ. ನಾವು ಅವರನ್ನು ದುಡಿಸಿಕೊಂಡು ಕೆಲಸ ಮಾಡುವುದು ನಮ್ಮ ಕರ್ತವ್ಯ. ತಾವು ಈ ಇಲಾಖೆಯ ಬಗ್ಗೆ ಅನುಭವಿಗಳಿದ್ದೀರಿ, ನಾನು ನಿಮ್ಮನ್ನು ಸುಮಾರು 10 ವರ್ಷಗಳಿಂದ ನೋಡುತ್ತಿದ್ದೇನೆ. ತಾವು ತಮ್ಮ ಖಾತೆಯಲ್ಲಿ ಯಾವ ರೀತಿ ಅಭಿವೃದ್ಧಿಯ ಕೆಲಸಗಳನ್ನು ಮಾಡಬೇಕೆಂಬುದನ್ನು ನೋಡಿಕೊಂಡು ಕೆಲಸ ಮಾಡಬೇಕೆಂದು ಹೇಳುತ್ತೇನೆ. 30ವರ್ಷಗಳಿಂದ ನೀವೇನು ಮಾಡಿದ್ದೀರಿ ಎಂದು ಕೇಳುವುದು ಮುಖ್ಯವಲ್ಲ. ನಿಮಗೆ 100 ವರ್ಷ ಕೊಟ್ಟರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇದೇ ಮಾನ್ಯ ದೇವೇಗೌಡರಿಗೆ ಕೊಟ್ಟರೂ ಆಗುವುದಿಲ್ಲ. ಯಾವ ರೀತಿಯ ಯೋಜನೆಯನ್ನು ಹಾಕಬೇಕೆಂದು ನೋಡಿಕೊಂಡು ಯೋಜನೆಯನ್ನು ಹಾಕಿಕೊಂಡು ಕ್ರಮಬದ್ಧವಾಗಿ ಮಾಡಿದರೆ ಇದು ಸಾಧ್ಯವಾಗುತ್ತದೆ. ಈ ಕೆಲಸವನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಆತ್ಮೀಯತೆಯಿಂದ ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರವೇನೆಂದರೆ, ಹಿಡ್‌ಕಲ್ ಜಲಾಶಯದ ಬಗ್ಗೆ ಮಾನ್ಯ ಸದಸ್ಯರಾದ ಮಲ್ಲಾರಗೌಡ ಪಾಟೀಲರು ತಮಗೊಂದು ಪತ್ರ ಬರೆದಿದ್ದಾರೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿ ದೊಡ್ಡದಾನಿಯಾದ ದೇಸಾಯಿಯವರು ತಮ್ಮ ಹೊಲ ಮನೆ ಎಲ್ಲವನ್ನು ಕಳೆದುಕೊಂಡಿದ್ದಾರೆ. ಅವರ ಹೆಸರು 'ರಾಜ ಲಕ್ಷ್ಮಣಗೌಡ ದೇಸಾಯಿ' ಅವರು ನಮ್ಮ ಜಿಲ್ಲೆಯಲ್ಲಿ ಬಹಳ ದೊಡ್ಡ ವ್ಯಕ್ತಿಗಳು. ಅವರ ಮನೆ ಹೊಲ ಎಲ್ಲ ಕೂಡ ಹಿಡಕಲ್ ಜಲಾಶಯದಲ್ಲಿ ಮುಳುಗಡೆಯಾಗಿದೆ. ಆದ್ದರಿಂದ ಹಿಡಕಲ್ ಜಲಾಶಯಕ್ಕೆ 'ರಾಜ ಲಕ್ಷ್ಮಣಗೌಡ ದೇಸಾಯಿ' ಅವರ ಹೆಸರು ನಾಮಕರಣ ಮಾಡಿದರೆ ನಮ್ಮ ಭಾಗದ ಜನರಿಗೆ ಸಂತೋಷವಾಗುತ್ತದೆ. ಯಾವುದೋ ಕೆಲಸ ಆಗಬೇಕೆಂದು ಸರ್ಕಾರಿ ಆಜ್ಞೆ ಹೊರಡಿಸಿದರೆ ಕೆಲಸ ಆಗುವುದಿಲ್ಲ. ಯೋಗ್ಯ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡು ಕೆಲಸ ಆಗುವಂತೆ ಮಾಡಬೇಕು. ಅದಕ್ಕೆ ಸಹಕಾರವನ್ನು ಯಾರಾದರೂ ಕೊಡಬೇಕು, ಒಟ್ಟಿನಲ್ಲಿ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡುವವರು ಬೇಕು. ಎಲ್ಲರೂ ಮಾತನಾಡುತ್ತಾರೆ ಆಮೇಲೆ ಹೋಗುತ್ತಾರೆ, ರಾಜ್ಯದ ಹಿತದೃಷ್ಟಿಯಿಂದ ರಾಜ್ಯ ಬೆಳವಣಿಗೆಯಾಗಬೇಕಾದರೆ ಎಲ್ಲರೂ ಪ್ರಾಮಾಣಿಕತನ ರೀತಿಯಿಂದ ಕೆಲಸ ಮಾಡುವಂತಹವರು ಬೇಕು. ಪಾರ್ಟಿ-ಪಂಗಡ ಚುನಾವಣೆಯಲ್ಲಿ ನೋಡೋಣ. ಪ್ರತಿಯೊಂದಕ್ಕೂ ರಾಜಕೀಯವನ್ನು ತಂದು ನಾವು ಎಲ್ಲರೂ ಅಧಿಕಾರ ಮಾಡುವುದಕ್ಕೆ ಹೋದರೆ ನಾವು ಯಾರು ಯಾರಿಗೂ ಏನೂ ಮಾಡುವುದಕ್ಕೂ ಆಗುವುದಿಲ್ಲ. ಎಲ್ಲರೂ ಕೂಡಿಕೊಂಡು ಯೋಗ್ಯವಾದ ಅಧಿಕಾರಿಗಳನ್ನು ಹಿಡಿತದಲ್ಲಿಟ್ಟುಕೊಂಡು ಕೆಲಸವನ್ನು ಮಾಡಿದರೆ ಜನಗಳಿಗೆ ಏನು ಮಾತು ಕೊಟ್ಟಿದ್ದೇವೆ ಅದನ್ನು ಪೂರ್ಣ ಮಾಡಲಿಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ.

ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ಈ ಇಲಾಖೆಯಲ್ಲಿ ಇನ್‌ವೆಸ್ಟಿಗೇಷನ್ ಸರ್ವೆ ಕೆಲಸ ಏನಿದೆ ಅದು ನನಗೆ ತಿಳಿದಮಟ್ಟಿಗೆ ಅದು ಏನು ಕೆಲಸ ಮಾಡುತ್ತಿದೆ ? 1956ರಿಂದ ನಮ್ಮ ಜಿಲ್ಲೆಯಲ್ಲಿ ಎಷ್ಟು ಕೆರೆಗಳನ್ನು ಎಷ್ಟು ರಸ್ತೆಗಳನ್ನು ಮಾಡಬೇಕೆಂದು ಇದೆಯೋ ಅದರ ಬಗ್ಗೆ ಮಾಸ್ಟರ್ ಪ್ಲಾನ್ ತಯಾರು ಮಾಡಿಲ್ಲ. ನಾವು ಶಾಸಕರಾಗಿ ಬಂದು ಆ ಕೆಲಸವನ್ನು ಮಾಡಿ ಎಂದು ಹೇಳುವುದು ಅಲ್ಲ, ಪ್ರತಿಯೊಂದು ಹಳ್ಳಿಯಲ್ಲೂ ತಿರುಗಾಡಲಿಕ್ಕೆ ಒಂದು ರಸ್ತೆಬೇಕು. ಜೊತೆಗೆ ಇನ್ನೇನು ಬೇಕು

ಎನ್ನುವುದನ್ನು ನೋಡಿಕೊಂಡು ಒಂದು ಯೋಜನೆಯನ್ನು ತಯಾರು ಮಾಡಿದರೆ, ಆ ಪ್ಲಾನ್ ನೋಡಿ ಕೊಂಡು ಅಧ್ಯತೆ ಕೊಟ್ಟುಕೊಂಡು ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಬರುತ್ತದೆ. ಬರಗಾಲ ಬಂದಾಗ ಅಧ್ಯತೆ ಕೊಟ್ಟು ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಗ್ರಾಮಾಂತರ ರಸ್ತೆಗಳನ್ನು ಮಾಡಲಿಕ್ಕೆ ಒಂದು ಪ್ಲಾನ್ ಮಾಡಿದರೆ ಅದಕ್ಕೆ ಸಾವಿರಾರು ಕೋಟಿ ರೂಪಾಯಿ ಖರ್ಚಾಗುವುದಿಲ್ಲ.

6-30 p.m.

ಅಲ್ಲಿರತಕ್ಕಂಥ ಟ್ಯಾಂಕ್‌ಗಳನ್ನು ಮೊದಲು ರಿಪೇರಿ ಮಾಡಿ ನೀರು ಬರುವಂಥ ವ್ಯವಸ್ಥೆಯನ್ನು ತಾವು ಅಧಿಕಾರಿಗಳಿಂದ ಮಾಡಿಸಬೇಕು. ಆಗ ನೀವು ನಿಮ್ಮ ಕೆಲಸವನ್ನು ನಿರ್ವಹಣೆ ಮಾಡಿದಂತೆ ಆಗುತ್ತದೆ. ಪ್ರತಿಯೊಂದು ಕಡೆಯಲ್ಲಿ ಯಾವ ರೀತಿ ಟ್ಯಾಂಕ್ ಕಟ್ಟಬೇಕು ಎನ್ನುವುದನ್ನು ಯೋಜನೆ ಮಾಡಬೇಕಾಗುತ್ತದೆ. ನಮ್ಮಲ್ಲಿ ಸುಮಾರು 15 ನ್ಯಾಷನಲ್ ಹೈವೇಸ್ ಇವೆ. ಆ ನ್ಯಾಷನಲ್ ಹೈವೇಸ್ ಯಾವ ರೀತಿ ಇವೆ ಎನ್ನುವುದನ್ನು ನಿಮ್ಮ ಇಲಾಖೆಯ ಮುಖ್ಯ ಇಂಜಿನೀಯರ್ಸ್ ಹೋಗಿ ನೋಡಬೇಕಾಗುತ್ತದೆ. ಆದರೆ ಅವರು ಅಲ್ಲಿಗೆ ಹೋಗಿ ನೋಡುವುದಿಲ್ಲ. ಆದ್ದರಿಂದ ತಾವು ತಮ್ಮ ಇಲಾಖೆಯಲ್ಲಿ ಇರತಕ್ಕಂಥ ಅಧಿಕಾರಿಗಳಿಂದ ಸರಿಯಾದ ಕೆಲಸವನ್ನು ಮಾಡಿಸಬೇಕೆಂದು ಹೇಳಿ, ಇದರ ಜೊತೆಗೆ ನಾನು ಇದುವರೆಗೂ ಕೆಲವಾರು ಸಲಹೆಗಳನ್ನು ಏನು ಕೊಟ್ಟಿದ್ದೇನೆ, ಆ ಎಲ್ಲಾ ಸಲಹೆಗಳನ್ನು ಮಾನ್ಯ ಮಂತ್ರಿಗಳು ಕಾರ್ಯರೂಪಕ್ಕೆ ತರುತ್ತಾರೆಂದು ನಂಬಿ ನನಗೆ ಇದುವರೆಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಸನ್ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕಿಂತ ಮುಂಚಿತವಾಗಿ ನಿಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನನಗೆ ಮಾತನಾಡಲು ಸ್ವಲ್ಪ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು. ಕಾರಣ ನಾನು ಇದುವರೆಗೂ ಮಾತನಾಡಲಿಲ್ಲ, ಈಗ ಈ ಲೋಕೋಪಯೋಗಿ ಇಲಾಖೆಯ ಬಗ್ಗೆ ಸಾಕಷ್ಟು ಮಾತನಾಡಬೇಕಾಗಿದೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಹೇಳುವುದಾದರೆ, ಸುಮಾರು 27 ವರ್ಷಗಳಿಂದ ಎಷ್ಟೋ ಜನ ಮಾನ್ಯ ಸದಸ್ಯರು ಈ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ ಆದರೆ ಇದುವರೆಗೂ ಯಾವ ಕೆಲಸ ಕೂಡ ಆಗಿಲ್ಲ. ಬರೀ ನಾವು ಮಾತನಾಡಿ ಹೋಗುತ್ತಿದ್ದೇವೆ. ನಮ್ಮ ಬಡ್ಜೆಟ್ ನೋಡಿದರೆ ಗೊತ್ತಾಗುತ್ತದೆ. ಇದುವರೆಗೂ ಎಷ್ಟೋ ಸರ್ಕಾರಗಳು ಬರುತ್ತವೆ, ಎಷ್ಟೋ ಸರ್ಕಾರಗಳು ಹೋಗುತ್ತವೆ. ಆದರೆ ಯಾರೂ ಕೂಡ ರಾಜ್ಯದ ಜನತೆಗೆ ತೃಪ್ತಿಕರವಾದಂಥ ಕೆಲಸವನ್ನು ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಮಾನ್ಯ ಮಂತ್ರಿಗಳನ್ನು ನಾನು ಒಂದು ಮಾತನ್ನು ಕೇಳಬಯಸುತ್ತೇನೆ. ಇದುವರೆಗೂ ಕೂಡ ಹಿಂದುಳಿದ ವರ್ಗದವರು ಅಲ್ಪಸಂಖ್ಯಾತರು ಯಾರೂ ಮುಂದೆ ಬಂದಿಲ್ಲ. ಆದರೆ ಮುಂದಿದ್ದ ವರ್ಗದವರು ಮುಂದೆ ಮುಂದೆ ಹೋಗುತ್ತಿದ್ದಾರೆ. ಆದರೆ ಇದಕ್ಕೆ ಯಾರು ಕಾರಣರು ? ಸರ್ಕಾರವನ್ನು ನಡೆಸುತ್ತಿರುವವರು ಯಾರೇ ಆಗಲಿ, ಯಾವುದೇ ಪಕ್ಷದ ಮಂತ್ರಿಮಂಡಲವಿರಲಿ, ಆ ಮಂತ್ರಿಮಂಡಲ ನಮ್ಮ ರಾಜ್ಯದ ಮಂತ್ರಿಮಂಡಲ. ಆ ಮಂತ್ರಿ ನಮ್ಮ ರಾಜ್ಯದ ಮಂತ್ರಿ. ಇದು ಒಂದು ಪಕ್ಷ ಅಥವಾ ಒಂದು ಜನಾಂಗದ ಪ್ರಶ್ನೆಯಲ್ಲ. ನಮಗೆ ಸ್ವಾತಂತ್ರ್ಯ ಬಂದು ಸುಮಾರು ವರ್ಷಗಳಾದರೂ ಕೂಡ ಶ್ರೀಸಾಮಾನ್ಯನಿಗೆ ಬೇಕಾದಂಥ ಸೌಕರ್ಯಗಳನ್ನು ಒದಗಿಸಿಕೊಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮ ಬೀದರ್ ಜಿಲ್ಲೆಯಲ್ಲಿ ನಿಜಾಮನ ಕಾಲದಲ್ಲಿ ಇದ್ದಂಥ ರಸ್ತೆಗಳು ಈಗಲೂ ಕೂಡ ಇವೆ. ಅಲ್ಲಿ ಯಾವುದೇ ರೀತಿಯ ಬದಲಾವಣೆಯಾಗಿಲ್ಲ. ಈ ಬಗ್ಗೆ ನಮ್ಮ ಮಾನ್ಯಮಂತ್ರಿಗಳು ಬಂದಿದ್ದಾಗ ಕೂಡ ತಿಳಿಸಿದ್ದೇವೆ. ಮತ್ತೆ ಬಸವಕಲ್ಯಾಣ, ಭಾಲ್ಕಿ, ಹಾಗೂ ಹುಮುನಾಬಾದ್‌ಗಳಲ್ಲಿ ರಸ್ತೆಗಳು ಇಲ್ಲ. ಆ ಪ್ರದೇಶದ ಜನರಲ್ಲಿ ಒಂದು ರೀತಿಯಾದಂಥ ಅಂದಮಾನ ತುಂಬಿಕೊಂಡಿದೆ. ನಾನು ಈ ಮಾತನ್ನು ಕಾಂಗ್ರೆಸ್ ಪಕ್ಷದಲ್ಲಿದ್ದಾಗ ಕೂಡ ಹೇಳಿದ್ದೇನೆ. ಎಲ್ಲಿ ಅಸತ್ಯ, ಅಧರ್ಮ ನಡೆಯುತ್ತಿದೆ, ಅದನ್ನು ಪ್ರತಿಭಟಿಸುವುದು ನನ್ನ ಕರ್ತವ್ಯ. ನಮ್ಮ ಪ್ರದೇಶದಿಂದ ಸರ್ಕಾರದವರು ಸುಮಾರು 15 ಕೋಟಿ ರೂಪಾಯಿಗಳ ಮಾರ್ಕೆಟ್ ಸೆಸ್ ತೆಗೆದುಕೊಂಡಿದ್ದೀರಿ. ಈ ಹಣವನ್ನು ಉಪಯೋಗಿಸಿ ನಿಮ್ಮ ಭಾಗದಲ್ಲಿ ರಸ್ತೆಗಳ ಸೌಕರ್ಯವನ್ನು ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಇದುವರೆಗೂ ರಸ್ತೆಗಳ ಕೆಲಸ ಆಗಿಲ್ಲ. ಮತ್ತೆ ಆ ಹಣವನ್ನು ಆಯಾ ಮಾರ್ಕೆಟ್‌ನವರಿಗೆ ವಾಪಸ್ ಕೊಡುವುದಕ್ಕೂ ಆಗುವುದಿಲ್ಲವೆಂದು ಹೇಳಿ ಆ ಹಣವನ್ನು ರಸ್ತೆಗಳಿಗೆ ಉಪಯೋಗ ಮಾಡಬೇಕೆಂದು ನಾನು ಅನೇಕ ಸಲ ಸರ್ಕಾರಕ್ಕೆ ಸಲಹೆಯನ್ನು ಕೊಟ್ಟಿದ್ದೇನೆ. ಆದರೆ ಸರ್ಕಾರ ಇದುವರೆಗೂ ಯಾವ ಕ್ರಮವನ್ನು ಸಹ ಕೈಗೊಂಡಿಲ್ಲ. ಮತ್ತೆ ಶುಗರ್ ಫ್ಯಾಕ್ಟರಿಗಳಿಂದ ಕೂಡ ಹಣವನ್ನು ನಾವು ಒದಗಿಸಿಕೊಟ್ಟಿದ್ದೇವೆ. ಮತ್ತೆ ತಮ್ಮ ವರದಿಯಲ್ಲಿ ಕೊಟ್ಟಿರುವ ಹಾಗೂ ಪುಟ 14ರಲ್ಲಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಅದೇ 1980-81ನೇ ಸಾಲಿನಲ್ಲಿ 75 ಲಕ್ಷ ರೂಪಾಯಿಗಳು ಮತ್ತೆ 1981-82ನೇ ಸಾಲಿನಲ್ಲಿ ಸುಮಾರು 78 ಲಕ್ಷ ರೂಪಾಯಿಗಳು ಕೊಟ್ಟಿದ್ದೇವೆ. ಆದರೆ ನಮ್ಮ ಶುಗರ್ ಫ್ಯಾಕ್ಟರಿಗಳಿಗೆ ಅನುಕೂಲವಾಗುವಂಥ ಕೆಲಸವನ್ನು ತಾವು

ಏನು ಮಾಡಿದ್ದೀರಿ ? ಸುಮಾರು ನಾಲ್ಕು ವರ್ಷಗಳಿಂದ ಕೂಡ ನಾವು ಕೇಳುತ್ತಲೇ ಬಂದಿದ್ದೇವೆ. ಆದರೆ ನಾವು ಕೊಟ್ಟಂತಹ ಹಣದಲ್ಲಿ ಯಾವ ಕೆಲಸವನ್ನು ಸಹ ಮಾಡಿಕೊಟ್ಟಿಲ್ಲ. ನಮ್ಮ ಭಾಗಕ್ಕೆ ಶೇಕಡ ಎರಡು ಪರ್ಸೆಂಟ್ ಹಣವನ್ನು ಖರ್ಚು ಮಾಡಿದ್ದರೂ ಕೂಡ ಸುಮಾರು 6 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಬೇಕಾಗುತ್ತಿತ್ತು. ಆದರೆ ಖರ್ಚು ಮಾಡಲಿಲ್ಲ. ಆದ್ದರಿಂದ ಎಷ್ಟು ಹಣವನ್ನು ಖರ್ಚು ಮಾಡಬೇಕೋ ಅಷ್ಟು ಹಣವನ್ನೂ ಸಹ ಖರ್ಚು ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. 1972ನೇ ಇಸವಿಯಿಂದ 1983ರವರೆಗೆ ನಾವು ಕೇಳುತ್ತಲೇ ಬಂದಿದ್ದೇವೆ. ಹನ್ನೆರಡು ಕಿಲೋಮೀಟರ್‌ವರೆಗೆ ಸಂಪೂರ್ಣವಾಗಿ ಎರಡೂ ಕಡೆ ಕಾಂಕ್ರೀಟ್ ಬಿದ್ದಿದೆ. ಸ್ವಲ್ಪ ಗಮನ ಕೊಟ್ಟರೆ ಆರು ತಿಂಗಳಲ್ಲಿ ಸಂಪೂರ್ಣವಾಗಿ ರೋಡ್ ಆಗಬಹುದು. ಈ ಕಾಂಕ್ರೀಟ್ ಉಪಯೋಗ ಮಾಡಿ ಸರಿಯಾದ ರೋಡ್ ಮಾಡಬೇಕು. ಇದಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನು ಒದಗಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ತಾವು ಕೆಲಸ ಮಾಡುವಾಗ ಬೀದರ್ ಜಿಲ್ಲೆಯಲ್ಲಿ ಏನು ವ್ಯವಸ್ಥೆ ಇದೆ, ಅದನ್ನು ನೋಡಿಕೊಂಡು ನಮಗೆ ಎಷ್ಟು ಹಣ ನಿಮ್ಮ ಫೈನಾನ್ಸ್‌ನಲ್ಲಿ ಬರಬೇಕೋ ಅಷ್ಟನ್ನು ಕೊಡಬೇಕು. ಏಕೆಂದರೆ, ನಮಗೆ ವಾಸ್ತವವಾಗಿ ಬರಬೇಕಾದಷ್ಟು ಹಣ ಬರುತ್ತಿಲ್ಲ. ಕೇಂದ್ರದಿಂದ ಬರುವ ಹಣ ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ಫೈನಾನ್ಸ್ ಕಮೀಷನ್‌ನವರು ಬಂದು ಯಾವ್ಯಾವ ಏರಿಯಾ ಹಿಂದುಳಿದ ಪ್ರದೇಶವಾಗಿದೆ, ನೀರಾವರಿಗೆ, ರಸ್ತೆ, ಕಟ್ಟಡ, ಇತ್ಯಾದಿಗಳಿಗೆಂದು ಕೊಡುತ್ತಿದ್ದಾರೆ. ಆ ಹಣದ ಹಂಚಿಕೆಯಲ್ಲಿ ಅನ್ಯಾಯವಾಗಿದೆ. ಪ್ರಾದೇಶಿಕ ಅಸಮಾನತೆ ಹೋಗಬೇಕು. ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡರೆ ಎಲ್ಲವೂ ಸರಿಹೋಗುತ್ತದೆ ಎಂದು ನಾನು ಹೇಳುತ್ತಿದ್ದೇನೆ. ನನಗೆ ಮಾನ್ಯ ಮಂತ್ರಿಗಳಾದ ಶ್ರೀ ದೇವೇಗೌಡರ ಬಗ್ಗೆ ಬಹಳ ಅಭಿಮಾನ ಇದೆ. ಇದರ ಬಗ್ಗೆ ಅವರು ವಿಚಾರ ಮಾಡಿ ಒಂದು ನಿರ್ಣಯ ತೆಗೆದುಕೊಳ್ಳಬೇಕು. ಈಗ ನಾವು ನೀರಾವರಿ ಬಗ್ಗೆ ಮಾತನಾಡುತ್ತಿದ್ದೇವೆ. ಎರಡು ನದಿಗಳಾದ ಕಾರಂಜಾ ಮತ್ತು ಮಾಜಾ ಬಗ್ಗೆ ಹೇಳಬೇಕಾದರೆ, ಮಹಾರಾಷ್ಟ್ರದಲ್ಲಿ ಮಾಜಾ ನದಿಗೆ ನಾಲ್ಕು ಸ್ಥಳಗಳಲ್ಲಿ ಸಂಪೂರ್ಣವಾಗಿ ಗೋಡೆ ಕಟ್ಟಿ ನೀರನ್ನು ಉಪಯೋಗ ಮಾಡುತ್ತಿದ್ದಾರೆ. ಆದರೆ ಇಲ್ಲಿ 27 ವರ್ಷಗಳಾದರೂ ಸರಿಯಾಗಿ ಸರ್ವೆ ಕೂಡ ಮಾಡಿಲ್ಲ ಮತ್ತು ಯಾವ ಪ್ರಕಾರವಾಗಿ ನೀರನ್ನು ಉಪಯೋಗ ಮಾಡಬೇಕೆಂಬುದು ನಮ್ಮ ಸರ್ಕಾರದ ಮುಂದಿಲ್ಲ. ಈ ದೃಷ್ಟಿಯಿಂದ ಮಾಜಾ ನದಿ ಯೋಜನೆಯನ್ನು ಸಂಪೂರ್ಣವಾಗಿ ಇನ್ನು ಎರಡು ವರ್ಷಗಳಲ್ಲಿ ಮಾಡಿ ಮುಗಿಸಿ. ಅದರ ಪ್ರಕಾರವಾಗಿ ನೀರನ್ನು ಹೇಗೆ ಉಪಯೋಗಮಾಡಬೇಕೆಂದು ಒಂದು ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ. ಕಾರಂಜಾ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ 1969ರಲ್ಲಿ ಇದನ್ನು ತೆಗೆದುಕೊಂಡಿದ್ದು ಇವತ್ತಿಗೆ 14 ವರ್ಷ ಆಯಿತು. 14 ವರ್ಷದ ಹಿಂದೆ ಇದಕ್ಕೆ 9.9 ಕೋಟಿ ರೂಪಾಯಿ ಅಂದಾಜು ಮಾಡಿದ್ದು ಈಗ ಅದು 51 ಕೋಟಿ ಆಗಿದೆ. ಖರ್ಚು ಮಾಡಿದ್ದು ಈ 14 ವರ್ಷಗಳಲ್ಲಿ 13 ಕೋಟಿ. ಕಾಲು ಭಾಗ ಮಾತ್ರ ಖರ್ಚಾಗಿದೆ. ಇದರಲ್ಲಿ ಒಂದು ಕೋಟಿ ರೂಪಾಯಿಯನ್ನು ಕಂಟ್ರಾಕ್ಟ್‌ನವರು ಕ್ಲೈಮ್ ಮಾಡಿದ್ದಾರೆ. ಎಲ್ಲರೂ ಬ್ಯೂರೋಕ್ರಾಸಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರತಿಯೊಂದರಲ್ಲೂ ಕಂಟ್ರೋಲ್ ಎಂಬುದೇ ಇಲ್ಲ. ಯಾವ ಕ್ಯಾಬಿನೇಟ್ ಬಂದರೂ, ಯಾವ ಪಕ್ಷ, ಜನರು ಬಂದರೂ ಇದು ಮಾತ್ರ ನಡೆದುಕೊಂಡು ಹೋಗುತ್ತಿದೆ. ಇದನ್ನು ಸರಿಪಡಿಸಲು ಯಾರಿಂದಲೂ ಸಾಧ್ಯವಾಗಿಲ್ಲ. ಎಷ್ಟು ನಿರ್ಣಯ ತೆಗೆದುಕೊಂಡರೂ ಇದು ಆಗುತ್ತಿಲ್ಲ. ವಂಚನೆ, ಲಂಚಗುಳಿತನ ನಡೆಯುತ್ತಲೇ ಇದೆ. ನದಿ ನೀರು ಹರಿದು ಹೋಗಿದ್ದಕ್ಕೆ ಡ್ಯಾಮೇಜ್ ಕ್ಲೈಮ್ ಹಾಕಿ ಒಂದು ಕೋಟಿ ರೂಪಾಯಿಯನ್ನು ಕಂಟ್ರಾಕ್ಟ್‌ದಾರರು ವಸೂಲು ಮಾಡಿದ್ದಾರೆ. 12 ವರ್ಷದಲ್ಲಿ 12 ಕೋಟಿ ರೂಪಾಯಿ ಖರ್ಚ ಮಾಡಿ ಒಂದು ಕೋಟಿ ಕ್ಲೈಮ್ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಅಧಿಕಾರಿಗಳು ಮತ್ತು ಕಂಟ್ರಾಕ್ಟದಾರರು ಸಂಚು ಮಾಡಿ ಇಡೀ ರಾಜ್ಯವೇ ಇವತ್ತು ಬರಬಾದ್ ಆಗಿದೆ ಇದನ್ನು ಎನ್‌ಕ್ವೈರಿ ಮಾಡಿದರೆ ತಮಗೆ ಗೊತ್ತಾಗುತ್ತದೆ. ಯಾರು ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ತಮಗೆ ಹಿಡಿತ ಇಲ್ಲ. ನಾನು ಯಾವುದನ್ನೂ ರೆಕಾರ್ಡ್ ಇಲ್ಲದೆ ನಿಶ್ಚಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಸರ್ಕಾರಿ ಅಧಿಕಾರಿಗಳ ಬ್ಯೂರೋಕ್ರಾಸಿ ತನದಿಂದ, ಕಂಟ್ರಾಕ್ಟ್‌ದಾರರ ಚಾಲಾಕಿತನದಿಂದ ಎಷ್ಟು ಹಣ ಮಂಜೂರು ಆಗಂತ್ತದೆಯೋ ಅದೆಲ್ಲವೂ ಸೋರಿ ಹೋಗುತ್ತಿದೆ. ವಾಸ್ತವವಾಗಿ ಯಾವ ಕೆಲಸವೂ ಆಗಿಲ್ಲ. ಒಂದೊಂದು ಪ್ರಾಜೆಕ್ಟ್ 4 ವರ್ಷಗಳಾದರೂ ಆಗಿಲ್ಲ. ಕಾರಂಜಾ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ, ಹೋದಸಾರಿ ಶ್ರೀಮಾನ್ ವೀರಪ್ಪಮೊಯಿಲಿಯವರು ಅರ್ಥ ಮಂತ್ರಿಗಳಾಗಿದ್ದಾಗ 2 ಕೋಟಿ 22 ಲಕ್ಷ ಮಂಜೂರು ಮಾಡಿದ್ದರೂ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ ಅದು ಖರ್ಚು ಮಾಡದೇ ಇದ್ದುದರಿಂದ ವಾಪಾಸ್ಸು ಆಯಿತು. ವಾಸ್ತವವಾಗಿ ಆ ಹಣವನ್ನು ಏಕೆ ಖರ್ಚು ಮಾಡಲಿಲ್ಲವೆಂದು ವಿವರಣೆ ಕೇಳಬೇಕಾಗಿದೆ. ಯಾವ ಹಣ ಹೊರಗಿನಿಂದ ಬರುತ್ತಿದೆ. ಅಂದರೆ ಕೇಂದ್ರದಿಂದ ಮತ್ತು ವಿಶ್ವಬ್ಯಾಂಕ್‌ನಿಂದ ಬರುತ್ತದೆ. ಅದು ಖರ್ಚಾಗುತ್ತಿಲ್ಲ. ಇದು ನಾವು ನಾಚಿಕೆ ಪಡಬೇಕಾದ ವಿಷಯವಲ್ಲವೆ ? ಕ್ರಿಮಿನಲ್ ಮೆಂಟಾಲಟಿ ಇರತಕ್ಕಂಥ ಜನ ಈ ಪ್ರಕಾರ ಹಣ ವಾಪಾಸ್ಸು ಮಾಡಿದ್ದಾರೆ. ಇದಕ್ಕೆ

ಯಾರು ಜವಾಬ್ದಾರರು ? ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದು ಕಂಡುಬಂದಿಲ್ಲ. ಹಳ್ಳಿ ಜನರಿಗೆ ಅನುಕೂಲಕ್ಕೆ ಬೇಕಾದ ಬಾವಿಯ ಕೆಲಸ ಸಮಯ, ಅಥವಾ ಮಿತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆದರೆ ಅದು ಮಂಜೂರು ಆಗುವುದಿಲ್ಲ. ಆದರೆ ಸರ್ಕಾರದವರು ಹಣ ಲ್ಯಾಪ್ಸ್ ಮಾಡಿದರೆ ಮಾತ್ರ ಕೇಳುವವರು ಇಲ್ಲ. ಇದರಿಂದಾಗಿ ಕಂಟ್ರೋಲ್ ತಪ್ಪಿ ಹೋಗುತ್ತಿದೆ. ಕಾರಂಜಾ ಪ್ರಾಜೆಕ್ಟ್ 1989 ರವರೆಗೂ ತೆಗೆದುಕೊಂಡು ಹೋಗುತ್ತಿದ್ದಾರೆ. ಅದನ್ನು ಇನ್ನು ಮೂರು ವರ್ಷಗಳೊಳಗೆ ಮಾಡಿ ಮುಗಿಸಬೇಕು. ಈ ವರ್ಷ ಐದು ಕೋಟಿ, ಮುಂದಿನ ವರ್ಷ 7 ಕೋಟಿ, ಮುಂದೆ ಎಂಟು ಕೋಟಿ ಹೀಗೆ ಮೂರು ವರ್ಷಗಳಲ್ಲಿ ಮಾಡಿದರೆ ಈ ಯೋಜನೆ ಸಂಪೂರ್ಣವಾಗಿ ನಡೆಯುತ್ತದೆ. ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಎಷ್ಟು ತೊಂದರೆ ಇದ್ದರೂ ಕೂಡ ತಾವು ಅಲ್ಲಿ ಎಲ್ಲಾ ಕೆಲಸ ಕಾರ್ಯಗಳನ್ನು ಮುಂದುವರೆಸುತ್ತಿದ್ದೀರಿ. ಆದರೆ ಇಲ್ಲಿ ಮಾತ್ರ ಕೆಲಸ ಆಗಿಲ್ಲ. ಸರಿಯಾಗಿ ಜನರಿಗೆ ಕಾಂಪನ್‌ಸೇಷನ್ ಸಿಗುತ್ತಿಲ್ಲ. ಜನತಾ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾದರೂ ಒಂದು ನಯಾಪೈಸೆ ಕೆಲಸ ಕೂಡ ಅಲ್ಲಿ ಆಗಿಲ್ಲ. ಸಂಪೂರ್ಣವಾಗಿ ಡ್ಯಾಮ್ ಕೆಲಸ ಮಾಡಬೇಕಾಗಿದೆ. ಮೂರು ಕೋಟಿ ಖರ್ಚಾದರೂ ಇದು ಸಾಧ್ಯವಿಲ್ಲ. ಡ್ಯಾಮ್ ಕೆಲಸ ಮಾಡುವ ಸಲುವಾಗಿ ಎಸ್ಟಿಮೇಟ್ ಮಾಡಿ ಟೆಂಡರ್ ಕರೆಯಬೇಕೆಂದು ತೀರ್ಮಾನ ಮಾಡಿದರೆ, ರೆಕಾರ್ಡ್ಸ್ ಸಿದ್ಧವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾನು ಸರ್ಕಾರದ ಗಮನ ಸೆಳೆಯುವುದೇನೆಂದರೆ. ಈ ವರ್ಷ ಐದು ಕೋಟಿ ರೂಪಾಯಿ ಕೊಡಲೇಬೇಕು. ನಾನು ಬಹಳ ಹಿಂದುಳಿದ ಪ್ರದೇಶದಿಂದ ಬಂದಿರುವವನು. ಇಡೀ ರಾಜ್ಯದಲ್ಲಿ 23 ಪರ್ಸೆಂಟ್‌ವೆಲ್ ಇರಿಗೇಶನ್ ಇದ್ದರೆ ನಮ್ಮಲ್ಲಿರುವುದು ಕೇವಲ 3 ಪರ್ಸೆಂಟ್ ಮಾತ್ರ. ಒಳ್ಳೆಯ ನದಿ ಹರಿಯುವಾಗ, ಬೇರೆ ಬೇರೆ ಜನರು ಅದನ್ನು ಉಪಯೋಗ ಮಾಡಿಕೊಳ್ಳುತ್ತಿರುವಾಗ ನಾವು ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲವೆಂದರೆ ತಪ್ಪು ನಮ್ಮದಾಗುತ್ತದೆ. ಜನರು ತಾಳ್ಮೆ ಕೆಟ್ಟು ಹೋಗಿದ್ದಾರೆ ಸರ್ಕಾರದವರು ಇದರ ಬಗ್ಗೆ ಗಮನ ಕೊಡದೇ ಇದ್ದರೆ ನಿಮ್ಮ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ. ತಾವು ಈ ಪ್ರಸಂಗ ಬಾರದ ಹಾಗೆ ಇದರ ಕಡೆಗೆ ಗಮನಕೊಟ್ಟು ಈ ಬೇಡಿಕೆಯನ್ನು ಮೊದಲು ಈಡೇರಿಸಿ ಕೊಡಬೇಕು. ಮೈನರ್ ಇರಿಗೇಷನ್ ಬಗ್ಗೆ ಎರಡು ಮಾತುಗಳನ್ನಾಡಿ ನನ್ನ ಮಾತನ್ನು ಮುಗಿಸುತ್ತೇನೆ ಇದರ ಬಗ್ಗೆ ಬೀದರ್ ಜಿಲ್ಲೆಯಲ್ಲಿ 60 ಟ್ಯಾಂಕುಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಮಾಡಿರುವುದು ಆರು ಟ್ಯಾಂಕುಗಳು ಮಾತ್ರ. ಇದರ ಬಗ್ಗೆ ತಾವು ಏನೂ ವಿಚಾರ ಮಾಡಿದ್ದಿಲ್ಲ. ಇದರ ಕಡೆಗೆ ಗಮನ ಕೊಡಬೇಕೆಂದು ಕೇಳುತ್ತಿದ್ದೇನೆ. 12 ವರ್ಷಗಳಿಗೆ ಮೊದಲು ನಮ್ಮಲ್ಲಿ 48 ನೀರಾವರಿ ಬಾವಿಗಳನ್ನು ತೆಗೆದುಕೊಂಡಿದ್ದರು. ಅದರಲ್ಲಿ ಅರ್ಧ ಮುಕ್ಕಾಲು ಭಾಗ ಹಾಗೆಯೇ ಬಿಟ್ಟುಬಿಡಲಾಗಿದೆ.

ಇದರಲ್ಲಿ ಮುಕ್ಕಾಲು ಭಾಗ ಕೆಲಸವಾಗಿದ್ದರೂ ನೀರನ್ನು ಮೇಲಕ್ಕೆ ತೆಗೆದುಕೊಳ್ಳದೆ ಹಾಗೇ ಬಿಟ್ಟಿದ್ದಾರೆ. ಇದನ್ನು ಫ್ಯಾಮಿನ್ ವರ್ಕ್‌ನಲ್ಲಿ ಮಾಡಬೇಕೆಂಬ ಆಜ್ಞೆಯಾಯಿತು. ಆ ಆಜ್ಞೆ ಪ್ರಕಾರ 25 ಲಕ್ಷ ಹಣವನ್ನು ಇದಕ್ಕಾಗಿ ಖರ್ಚು ಮಾಡಿದ್ದಾರೆ. ಇನ್ನೂ 10 ಲಕ್ಷ ಹಣವನ್ನು ಖರ್ಚು ಮಾಡಿದರೆ ಸಂಪೂರ್ಣ ಕಮ್ಯೂನಿಟಿ ಇರಿಗೇಷನ್ ಆಗುತ್ತಿತ್ತು. ಆ ಭಾಗದಲ್ಲಿ ಹರಿಜನ–ಗಿರಿಜನರು ಇದ್ದಾರೆ. ಮುಸ್ಲಿಮರು ಇದ್ದಾರೆ. ಇದರಲ್ಲಿ ಒಂದು ಲಕ್ಷದ 25 ಸಾವಿರ ಎಕರೆ ನೀರಾವರಿಯಾಗಬಹುದು. ಆ ಕೆಲಸ ಇನ್ನೂ ಆಗಲಿಲ್ಲ. ಎಷ್ಟು ಸಾರಿ ಹೇಳಿದರೂ ಆ ಕೆಲಸ ಇನ್ನೂ ಆಗಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಗಮನ ಹರಿಸಬೇಕು. ನೀರು ಇದೇ ಜೊತೆಗೆ ಒಳ್ಳೆಯ ಭೂಮಿಯೂ ಇದೆ. ಎಲ್ಲ ರೀತಿಯ ಅನುಕೂಲವೂ ಇದೆ. ಆದರೆ ಕಾನೂನು ಪ್ರಕಾರ ನಮ್ಮಲ್ಲಿ ಯಾವುದೂ ಬಂದಿಲ್ಲ. ನಮ್ಮ ಜಿಲ್ಲೆ ಕರ್ನಾಟಕಕ್ಕೆ ಒಳಪಟ್ಟಿದ್ದು 1948ರಲ್ಲಿ, ಇಲ್ಲಿಗೆ 30 ವರ್ಷಗಳಾಗುತ್ತವೆ. ವರ್ಷಕ್ಕೆ 5 ಸಾವಿರದಿಂದ 10 ಸಾವಿರದವರೆಗೆ ಹಣವನ್ನು ಖರ್ಚು ಮಾಡಿದರೆ, 20 ಸಾವಿರ ಎಕರೆ ಭೂಮಿಯನ್ನು ನೀರಾವರಿಯನ್ನಾಗಿ ಮಾಡಬಹುದಿತ್ತು. ಮಾನ್ಯ ನೀರಾವರಿ ಸಚಿವರು ಇದರ ಕಡೆ ತಮ್ಮ ಗಮನ ಹರಿಸಬೇಕು.

ಇನ್ನು ನಮ್ಮಲ್ಲಿರುವ ಶಾಲಾ ಕಟ್ಟಡಗಳ ಬಗ್ಗೆ ಹೇಳುವುದಾದರೆ, ವಾಸ್ತವವಾಗಿ 50 ಹೈಸ್ಕೂಲುಗಳು ಇದ್ದರೂ ಒಂದಕ್ಕೂ ತನ್ನದೇ ಆದಂತಹ ಕಟ್ಟಡ ಇಲ್ಲ. ಎಷ್ಟೋ ಸಾರಿ ಮಂತ್ರಿಗಳು ಬೀದರ್‌ಗೆ ಬಂದಾಗ ಅವರಿಗೆ ಹೇಳಿದರೂ ಯಾರೂ ಬೀದರ್ ಕಡೆ ಲಕ್ಷ್ಯ ಕೊಟ್ಟಿಲ್ಲ. ನಾವು ಬೆಂಗಳೂರಿಗೆ 500 ಮೈಲಿ ದೂರದಲ್ಲಿದ್ದೇವೆ. ನಾವೆಲ್ಲರೂ ಕರ್ನಾಟಕದವರು ಎಂಬ ಒಂದು ಭಾವೈಕ್ಯ ದೃಷ್ಟಿಯಿಂದ ಸಂಸ್ಕೃತಿಯ ದೃಷ್ಟಿಯಿಂದ ಕನ್ನಡಿಗರು ಎಲ್ಲರೂ ಒಂದೇ ಎಂಬ ಉದ್ದೇಶದಿಂದ ನಮ್ಮ ಜಿಲ್ಲೆಯಲ್ಲೂ ಇತರೇ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳು ಆಗಿರುವಂತೆ ಮಾಡಬೇಕು. ಹಿಂದೆ ನಮ್ಮ ಜಿಲ್ಲೆಯಿಂದ ಒಬ್ಬರು ಇಬ್ಬರು ಮಂತ್ರಿಗಳಾಗಿದ್ದರು. ಆದರೆ ಅವರೆಲ್ಲರೂ ಮಂತ್ರಿಯಾಗಿದ್ದರೆ ಸಾಕು, ಕಾರು ಇರುತ್ತದೆ, ಇರುವುದಕ್ಕೆ ಬಂಗ್ಲೆ ಇರುತ್ತದೆ, ಸಂಬಳ ಬರುತ್ತದೆ ಎಂಬ ಮನೋಭಾವವನ್ನು ಹೊಂದಿದವರಾಗಿದ್ದಾರು. ನಾವೆಲ್ಲ ಕರ್ನಾಟಕ ರಾಜ್ಯದಲ್ಲಿ 5 ಭಾಗದಿಂದ ಬಂದಿರತಕ್ಕಂತಹವರು. ನಾವೆಲ್ಲ ಅಣ್ಣ ತಮ್ಮಂದಿರು, ಒಂದೇ ಕುಟುಂಬದವರು ಎಂಬುದಾಗಿ ತಿಳಿದುಕೊಂಡು ನಮ್ಮ ಬೀದರ್ ಜಿಲ್ಲೆ ಬಹಳ

ದೂರದಲ್ಲಿ ಇದ್ದರೂ, ಅದು ಹೈದರಾಬಾದ್ ಕರ್ನಾಟಕ ಎಂಬುದಾಗಿ ವಿಚಾರ ಮಾಡದೆ ನಾವೆಲ್ಲ ಒಂದು ಎಂಬುದಾಗಿ ತಿಳಿದುಕೊಂಡು, ರೀಜನಲ್ ಇಂಬ್ಯಾಲೆಸ್ಸ್‌ನ್ನು ತೆಗೆದುಹಾಕುವ ದೃಷ್ಟಿಯಿಂದ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಆ ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕಟ್ಟಡಗಳ ವಿಚಾರವಾಗಿ ಹೇಳುವುದಾದರೆ, ಎರಡು ವರ್ಷಗಳ ಹಿಂದೆಯೇ ಇದ್ದಂತಹ 30 ಬೆಡ್‌ಗಳ ಆಸ್ಪತ್ರೆಯನ್ನು 50 ಬೆಡ್‌ಗಳ ಆಸ್ಪತ್ರೆ ಎಂಬುದಾಗಿ ಮಾಡಿದರೂ ಕೂಡ ಅಡ್ಮಿನಿಸ್ಟ್ರೇಟಿವ್ ಟೆಕ್ನಿಕ್‌ನಿಂದ ಅದು ಇನ್ನೂ ಪ್ರಾರಂಭವಾಗಿಲ್ಲ. ಇದಕ್ಕಾಗಿ ಬಂದಂತಹ ಹಣವೆಲ್ಲಾ ಲ್ಯಾಪ್ಸ್ ಆಗಿ ಹೋಗುತ್ತಿದೆ. ಈ ರೀತಿಯಾಗುವುದಕ್ಕೆ ಕಾರಣ ಯಾರೋ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ತಾವು ಸಚಿವ ಸಂಪುಟದ ಮಂತ್ರಿಗಳಿದ್ದೀರಿ. ತಾವು ತಮ್ಮ ಕೈಕೆಳಗೆ ಕೆಲಸ ಮಾಡುವಂತಹ ಅಧಿಕಾರಿಗಳನ್ನು ಅಧೀನದಲ್ಲಿಟ್ಟುಕೊಂಡರೆ ಮಾತ್ರ ಕೆಲಸಗಳಾಗಬಹುದು. ಇಲ್ಲದಿದ್ದರೆ ಯಾವ ಕೆಲಸಗಳೂ ಆಗುವುದಿಲ್ಲವೆಂದು ಹೇಳುತ್ತೇನೆ. ಬೀದರ್‌ನ ಪರಿಸ್ಥಿತಿಯನ್ನು ತಾವು ತಿಳಿದುಕೊಂಡಿದ್ದೀರೆಂದು ಇಷ್ಟೆಲ್ಲಾ ತಮಗೆ ಹೇಳುತ್ತಿದ್ದೇನೆ. ಬೀದರ್ ಜಿಲ್ಲೆಯ ಅಭಿವೃದ್ಧಿಯ ಕಡೆಗೆ ತಾವು ಗಮನ ಹರಿಸಬೇಕು.

ಇನ್ನು ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಎಂಬುದಾಗಿ ಹಿಂದಿನ ಸರ್ಕಾರ ಮಾಡಿತ್ತು. ಆದರೆ ತಾವು ಅದನ್ನು ತೆಗೆದುಹಾಕಿದ್ದೀರಿ. ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಎಂಬುದಾಗಿ ಮಾಡಿ, ಅದರ ಮೂಲಕ 10 ವರ್ಷಗಳಲ್ಲಿ 350 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಆ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶ ಹಿಂದಿನ ಸರ್ಕಾರದ್ದು ಆಗಿತ್ತು. ಅದಕ್ಕಾಗಿ ಕಳೆದ ಸಾರಿ 10 ಕೋಟಿ ರೂಪಾಯಿಗಳನ್ನೂ ಇದಕ್ಕಾಗಿ ಖರ್ಚು ಮಾಡಿದರು. ಆದರೆ ತಾವು ಅದನ್ನು ತೆಗೆದುಹಾಕಿದ್ದೀರಿ. ಅದರ ಬದಲು ತಾವು ಏನು ಮಾಡುತ್ತೀರಿ ಎಂಬುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕು. ಈಗ ಆ ಭಾಗದ ಜನರಲ್ಲಿ ಏನು ಭಾವನೆ ಬಂದಿದೆ ಎಂದರೆ, ಶ್ರೀಮಾನ್ ದೇವೇಗೌಡರಿಗೆ ಹೈದರಾಬಾದ್ ಕರ್ನಾಟಕ ಏರಿಯಾದ ಮೇಲೆ ಪ್ರೇಮ ಇಲ್ಲವೇನೋ ಎಂಬ ಭಾವನೆ ಬರುತ್ತಿದೆ. ಆ ಭಾವನೆ ಜನರಲ್ಲಿ ಬಾರದ ಹಾಗೆ ಅಲ್ಲಿರತಕ್ಕಂತಹ ರಸ್ತೆಗಳನ್ನು ತಾವು ಕೂಡಲೇ ಸರಿಪಡಿಸಬೇಕು. ನಾನೂ ಕೂಡ ಆ ಭಾಗದಿಂದ ಶಾಸಕನಾಗಿ ಆರಿಸಿ ಬಂದಿದ್ದೇನೆ. ಅಲ್ಲಿಂದ ಇಲ್ಲಿಗೆ 5 ವರ್ಷ ಬಂದು ಹೋದರೆ ಆ ಮನುಷ್ಯನಿಗೆ 5 ವರ್ಷ ಆಯುಸ್ಸು ಕಡಿಮೆಯಾಗುತ್ತದೆ. ಅಷ್ಟೊಂದು ತೊಂದರೆ ಇದೆ. ಆದ್ದರಿಂದ ಮಾನ್ಯ ನೀರಾವರಿ ಸಚಿವರು ಇದರ ಕಡೆ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ.

ಕೊನೆಯದಾಗಿ, ಅಸಮಾನತೆ ಏನಿದೆ ಅದನ್ನು ರೀಜನಲ್ ಇಂಬ್ಯಾಲೆನ್ಸ್ ಅಂತ ಕರೆಯುತ್ತೇವೆ. ಅದನ್ನು ತೆಗೆದುಹಾಕಬೇಕು. ಕಾರಂಜಾ ಪ್ರಾಜೆಕ್ಟನ್ನು ಪ್ರಾರಂಭ ಮಾಡಬೇಕು, ನಮ್ಮ ಶಾಲಾ ಕಟ್ಟಡಗಳನ್ನು ಬೇಗ ಮಾಡಬೇಕೆಂದು ಹೇಳಿ, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಆರ್. ಎನ್. ನಾಯಕ್ (ಭಟ್ಕಲ್).—ಮಾನ್ಯ ಸಭಾಧ್ಯಕ್ಷರೆ, ಮುಖ್ಯವಾಗಿ ಈ ಇಲಾಖೆಯ ಬಗ್ಗೆ ಹೇಳುವುದಾದರೆ, ಮೊದಲಿನಿಂದಲೂ ಟೀಕೆಯನ್ನು ಅನುಭವಿಸುವುದು ಒಂದು ಅಭ್ಯಾಸವಾಗಿಹೋಗಿದೆ. ಕಾರಣ ಇದು ಅಷ್ಟೊಂದು ಪ್ರಾಮುಖ್ಯವಾದ ಇಲಾಖೆ. ಏಕೆಂದರೆ, ನಾನೇನಾದರೂ ಟೀಕೆ ಮಾಡಿದರೆ ಆ ಕಡೆಯ ಸದಸ್ಯರು ತಪ್ಪು ತಿಳಿಯಬಹುದು. ಆ ಉದ್ದೇಶದಿಂದ ನಾನು ಟೀಕೆ ಮಾಡುತ್ತಿಲ್ಲ. ಈ ಕಡೆ ಕುಳಿತುಕೊಂಡು ಹೇಳಬೇಕಾದ ಪ್ರಾಮುಖ್ಯತೆ ಇರುವುದರಿಂದ ಹೇಳುತ್ತಿದ್ದೇನೆ. ನೀರಾವರಿಯ ಬಗ್ಗೆ 2 ನಿಮಿಷ ಮಾತನಾಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ನೀರಾವರಿ ಸೌಲಭ್ಯ ಇರಿಗೇಷನ್ ಪೊಟೆನ್ಸಿಯಲ್‌ನ ಅಂದಾಜಿನ ಪ್ರಕಾರ 42 ಪರ್ಸೆಂಟ್ ಇದೆ. 10 ಪರ್ಸೆಂಟ್ ಶ್ರೀಮಾನ್ ದೇವರಾಜ್ ಅರಸ್ ರವರು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಆದಂತಹ ಕೆಲಸ. ಅವರು ಅಧಿಕಾರಕ್ಕೆ ಬಂದ ಮೇಲೆ 22 ಪರ್ಸೆಂಟ್ ಇರಿಗೇಷನ್ ಆಯಿತು. ಅಂದರೆ ಅವರ ಕಾಲದಲ್ಲಿ 12 ಪರ್ಸೆಂಟ್ ಇರಿಗೇಷನ್ ಜಾಸ್ತಿಯಾಯಿತು. ಉಳಿದ ಅತಿ ಹೆಚ್ಚಿನ ಜವಾಬ್ದಾರಿ ಪ್ರಮುಖ ಸನ್ಮಾನ್ಯ ಸಚಿವರಾದ ಶ್ರೀಮಾನ್ ದೇವೇಗೌಡರ ಕೈಯಲ್ಲಿದೆ. ಸುಮಾರು 8–9 ವರ್ಷಗಳ ಆಡಳಿತದಲ್ಲಿ ಮಾನ್ಯ ದೇವರಾಜ್ ಅರಸ್ ರವರು 12 ಪರ್ಸೆಂಟ್ ರಷ್ಟು ಇರಿಗೇಷನ್ ಪೊಟೆನ್ಸಿಯಲ್‌ನ್ನು ಏರಿಸಿದ್ದಾರೆ. ಈಗ ನಮ್ಮ ದೇವೇಗೌಡರ ಕೈಯಲ್ಲಿ ಅಧಿಕಾರ 5 ವರ್ಷದವರೆಗೆ ಉಳಿದುಕೊಂಡು ಇನ್ನೂ 6–7 ಪರ್ಸೆಂಟ್ ಏರಿಸುತ್ತಾರೆಂಬ ಭಾವನೆಯನ್ನು

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾನು ಇಟ್ಟುಕೊಂಡಿದ್ದೇನೆ. ಆದರೆ ಇದು ಅಷ್ಟು ಸುಲಭವಾದ ಕೆಲಸವಲ್ಲ. ಹೇಳುವುದು ಬಹಳ ಸುಲಭ. ಮಾಡುವುದು ಬಹಳ ಕಷ್ಟ. ಮಾನ್ಯ ಸಚಿವರಿಗೆ ಇನ್ನೂ ಜವಾಬ್ದಾರಿ ಹೆಚ್ಚು ಇದೆ. ಏಕೆಂದರೆ ಜನತೆಯ ಮುಂದೆ ಅವರು ಉತ್ತರ ಕೊಡಬೇಕಾಗುತ್ತದೆ. ಇನ್ನು ಮುಂದಿನ ವಿಚಾರದ ಬಗ್ಗೆ ಹೇಳುವುದಾದರೆ, ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ಕೆಲಸ ತೀವ್ರಗತಿಯಿಂದ ಸಾಗುತ್ತಿಲ್ಲ. ನಾಲೆ ಸರಿಯಾಗಿ ನಿರ್ಮಾಣವಾಗುತ್ತಿಲ್ಲ. ನಿರ್ದಿಷ್ಟ ವೇಳೆಯಲ್ಲಿ ನಾಲಾ ಕೆಲಸ ಪೂರ್ಣಗೊಳ್ಳದಿದ್ದ ಪಕ್ಷದಲ್ಲಿ ವಿಶ್ವ ಬ್ಯಾಂಕಿನಿಂದ ಸಿಕ್ಕುವ ಸಹಾಯಕ್ಕೆ ಬಡ್ಡಿ ಕೊಡುವ ಪ್ರಮೇಯ ಈ ಸರ್ಕಾರಕ್ಕೆ ಬರಬಹುದು. ಆದ್ದರಿಂದ ಈ ಸರ್ಕಾರಕ್ಕೆ ಇದರಿಂದ ಹಾನಿಯಾಗುವ ಸಂಭವ ಇದೆ. ಆದ್ದರಿಂದ ಇದನ್ನು ತೀವ್ರ ರೀತಿಯಲ್ಲಿ ಮುಗಿಸುವುದಕ್ಕೆ ಏನಾದರೊಂದು ಉಪಾಯವನ್ನು ಶ್ರೀಮಾನ್ ದೇವೇಗೌಡರು ಮಾಡಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಮಲಪ್ರಭಾ ಪ್ರಾಜೆಕ್ಟ್‌ನ ಯೋಜನೆಯಲ್ಲೂ ಡ್ಯಾಂ ಕೆಲಸ ಮುಗಿದಿದೆ ಎಂದು ಇಲ್ಲಿ ವರದಿಯಲ್ಲಿ ತಿಳಿಸಿದ್ದಾರೆ. ಆದರೆ ನಾಲಾ ಕೆಲಸ ಮುಗಿದಿಲ್ಲ. ನಾಲಾ ಕೆಲಸ ಮುಗಿಯದಿದ್ದರೆ ಜನರಿಗೆ ಯಾವುದೇ ರೀತಿಯ ಉಪಯೋಗವಾಗುವುದಿಲ್ಲ. ಈ ಮಧ್ಯೆ ತೊಂದರೆಯಾಗಿ ನೀರು ಹೋಗುತ್ತಿದೆ ಎಂಬ ವಿಚಾರ ಇದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಲಕ್ಷ್ಯಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕಾವೇರಿ ಬೇಸಿನ್‌ನ ವರುಣಾ ನಾಲೆಯ ಬಗ್ಗೆ ಹೇಳುವುದಾದರೆ, ಶ್ರೀಮಾನ್ ದೇವರಾಜ ಅರಸ್ ರವರು ಅಧಿಕಾರದಲ್ಲಿದ್ದಾಗ ಕೆಚ್ಚೆದೆಯ ಪ್ರದರ್ಶನವನ್ನು ಮಾಡಿದರು. ಆಗಲೂ ಕಾಂಗ್ರೆಸ್ (ಐ)ನ ಸರ್ಕಾರ ಇದ್ದರೂ ಸಹ ಕೇಂದ್ರದ ಸಹಾಯ ಸಿಕ್ಕದಿದ್ದರೂ ಸಹ ಏಕೆ ಸಿಕ್ಕುವುದಿಲ್ಲ, ನಮ್ಮ ಸಂಪನ್ಮೂಲವನ್ನು ರೂಢಿಸಿಕೊಂಡು ಮಾಡುತ್ತೇವೆಂದು ಹೇಳಿದ್ದರು. ಅಂತಹ ಒಂದು ಕೆಚ್ಚೆದೆಯನ್ನು ಶ್ರೀಮಾನ್ ದೇವೇಗೌಡರೂ ಪ್ರದರ್ಶಿಸುತ್ತಾರೆ ಎಂದು ನಾನು ಭಾವಿಸುತ್ತೇನೆ.

ಇನ್ನು ರಸ್ತೆಯ ಬಗ್ಗೆ ಹೇಳುವುದಾಬರೆ, ರಾಜ್ಯದ ಇತರೆ ಕಡೆಗಳಲ್ಲಿ ರಸ್ತೆಗಳು ಸಾಕಷ್ಟು ಸಂಖ್ಯೆಯಲ್ಲಿ ಆಗಿವೆ. ಆದರೆ ನಮ್ಮ ಉತ್ತರಕನ್ನಡ ಜಿಲ್ಲೆಯಲ್ಲಿ ಆ ಮಟ್ಟಿಗೆ ಕೆಲಸವಾಗಿಲ್ಲ. ರಸ್ತೆಯ ವಿಚಾರದಲ್ಲಂತೂ ಸಾಕಷ್ಟು ಹಿಂದುಳಿದಿದೆ. ಈಗಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹಿಂದೆ ರಾಜ್ಯದ ಆರ್ಥಿಕ ಮಂತ್ರಿಗಳಾಗಿದ್ದಾಗ. ನಾವೆಲ್ಲರೂ ಇನ್ನೂ ಚಿಕ್ಕವರು, ಒಳ್ಳೆಯ ರಸ್ತೆಯನ್ನು ಮಾಡುವುದರ ಬಗ್ಗೆ ಬಹಳ ಮುತುವರ್ಜಿಯನ್ನು ವಹಿಸಿದ್ದರು. ಅದನ್ನು ನಾವು ಒಪ್ಪಿಕೊಳ್ಳಬೇಕು. ಆದರೆ ಆ ಕಾಲದಲ್ಲಿ ಆದಂತಹ ರಸ್ತೆಗಳು. ಅದೇರೀತಿ ಈವರೆಗೂ ಕೆಲಸ ಮಾಡಿದ್ದರೆ ಅವರಿಗೆ ಇನ್ನೂ ಒಳ್ಳೆಯ ಹೆಸರು ಬರುತ್ತಿತ್ತು. ಆ ರಸ್ತೆಯ ದಿಕ್ಕನ್ನು ಬದಲಿಸಿ ಬೇರೆ ದಿಕ್ಕಿನಲ್ಲಿ ಹೊರಟಿದ್ದರಿಂದ ಅಷ್ಟೊಂದು ಒಳ್ಳೆಯ ಹೆಸರು ಬರಲಿಲ್ಲವೆಂಬುದನ್ನು ಅವರು ತಿಳಿದುಕೊಂಡಿರಬಹುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುವಾಗ, ಹರಿಜನರು ಹಾಗೂ ಹಿಂದುಳಿದ ವರ್ಗದವರು ಇರುವ ಕಡೆ ಮಾಡಬೇಕಾದ ಕೆಲಸ ಬಹಳ ಇದೆ ಎಂಬುದನ್ನು ನಾನು ಒತ್ತಿ ಒತ್ತಿ ಹೇಳಬೇಕಾಗಿದೆ. ಇದನ್ನು ಬಹುಶಃ ನಮ್ಮ ಜಿಲ್ಲೆಯ ಶಾಸಕರೆಲ್ಲರೂ ಒಪ್ಪಬಹುದು. ಮಾನ್ಯ ದೇವೇಗೌಡರು ನಾನು ಹೇಳಿದ ಕೆಲಸವನ್ನು ಕೈಗೆ ಎತ್ತಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಇನ್ನು ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ದೇವೇಗೌಡರು ಚುನಾವಣೆ ಕಾಲದಲ್ಲಿ ಬಂದದ್ದು, ಈಚೆಗೆ 7–8 ತಿಂಗಳಿಂದ ಬಂದಿಲ್ಲ ಬಹಳ ದಿವಸವಾದುದರಿಂದ ಅವರು ದಯುವಿಟ್ಟು ಒಮ್ಮೆಯಾದರೂ ಕೂಡ ನಮ್ಮ ಜಿಲ್ಲೆಗೆ ದಯಮಾಡಿಸಿ ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ನೋಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನೊಂದು ಬಹು ಮುಖ್ಯವಾದ ವಿಚಾರ ಏನೆಂದರೆ, ನಮ್ಮ ಶರಾವತಿ ಎಡದಂಡೆ ಬಲದಂಡೆ ಬಗ್ಗೆ ಈಗ ಹೆಚು ಸಮಯ ಇಲ್ಲದೇ ಇರುವುದರಿಂದ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಎಡದಂಡೆ ಭಾಗ ನನ್ನ ಕ್ಷೇತ್ರವಾಗಿರುವುದರಿಂದ ಅದರ ಬಗ್ಗೆ ಒಂದೇ ಒಂದು ವಿಷಯ ಹೇಳುತ್ತೇನೆ. ಅದೇನೆಂದರೆ ನಾನು ನಗರ ಬಸ್ತಿಕೇರೆ ಕ್ಷೇತ್ರದ ಶಾಸಕನಾಗಿರುವುದರಿಂದ ಈ ಪ್ರಶ್ನೆಯನ್ನು ಕೇಳಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಮಂಡಿಗೆಯಿಂದ ನಗರ ಬಸ್ತಿಗೆ ಹೋಗುವ ಮಾರ್ಗದಲ್ಲಿ ಸುಮಾರು 20–25 ಕಿಲೋಮೀಟರ್ ಅಷ್ಟು ದೂರ 5 ಸೇತುವೆಗಳ ಕೆಲಸ ಆಗಬೇಕಾಗಿದೆ. ಮಾನ್ಯ ಬಂಗಾರಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಈ ಸೇತುವೆಗಳನ್ನು ಮಾಡಿಸಬೇಕೆನ್ನುವ ನಿರ್ಣಯ ತೆಗೆದುಕೊಂಡಿದ್ದರು; ಕ್ಯಾಬಿನೆಟ್‌ನಲ್ಲೂ ಕೂಡ ತೀರ್ಮಾನವಾಗಿತ್ತು ಎಂದು ಕೇಳಿದ್ದೆ. ಆದರೆ ಈ ಮಧ್ಯೆ ರಾಜಕಾರಣದಿಂದ ಅದು ನಿಂತುಹೋಯಿತು. ಇನ್ನು ಈ ರಾಜಕಾರಣ ಮುಂದುವರೆಯಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ದೇವೇಗೌಡರು ಈ ರಾಜಕಾರಣವನ್ನು ಎತ್ತಿಕೊಳ್ಳದೆ ಶುದ್ಧ ಮನಸ್ಸಿನಿಂದ ನಮ್ಮ ಬಗ್ಗೆ ಕರುಣೆ ಇಟ್ಟು ಈ ಒಂದು ರಸ್ತೆ ಕೆಲಸ ಮತ್ತು ಸೇತುವೆಗಳ ಕೆಲಸ ಮಾಡಿಕೊಟ್ಟರೆ ನಾನು ಆ ಕ್ಷೇತ್ರದ ಶಾಸಕನಾಗಿದ್ದಕ್ಕೂ ಸಾರ್ಥಕವಾಗುತ್ತದೆ ಎಂದು ಹೇಳುತ್ತೇನೆ, ಈ 5 ಸೇತುವೆಗಳ ಕೆಲಸಗಳನ್ನು ಮಾಡಿಸಲು ಮೊದಲು 70 ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್ ಆಗಿತ್ತು. ಈಗ ಅದು ಒಂದು

ಒಂದು ಕೋಟಿ ರೂಪಾಯಿ ಆಗುತ್ತದೆ. ಇನ್ನು 3–4 ತಿಂಗಳೊಳಗಾದರೂ ಕೂಡ ಈ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಕೇಳಿಕೊಂಡು, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Mr. Deputy Speaker.—The House now stands adjourned to meet tomorrow at 11O' Clock.

(The House adjourned at Two Minutes past Seven of the clock to meet again on Friday, the 26th August, 1983. at Eleven of the Clock.)

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವ ಬಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

—o—